# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 08–06–2011 ರಂದು ನಡೆದ ಸಭೆಯ ನಡವಳಿಗಳು

| **ಹಾಜರಿದ್ದ ಸದಸ್ಯರುಗಳು** | **ಹಾಜರಿದ್ದ ಅಧಿಕಾರಿಗಳು** |
|---|---|
| **ಶ್ರೀಯುತರುಗಳಾದ :** | |
| ಜಿ. ಮಂಜುನಾಥರಾಜು – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ, |
| ಜಿ. ಮಂಜುನಾಥ – ಸದಸ್ಯರು | ಮುಖ್ಯ ಲೆಕ್ಕಾಧಿಕಾರಿ |
| ಲತಾ. ಕೆ – ಸದಸ್ಯರು | ಉಪ ಆಯುಕ್ತರು (ಕಂದಾಯ) |
| ಎಂ.ಸಿ. ಶ್ರೀನಿವಾಸ್ – ಸದಸ್ಯರು | ಸಹಾಯಕ ಆಯುಕ್ತರು (ಆಡಳಿತ) |
| ವಿ. ವಾಗಿಶ್ – ಸದಸ್ಯರು | ಮಾಹಿತಿ ತಂತ್ರಜ್ಞಾನ ಸಲಹೆಗಾರರು |
| ಮಂಜುನಾಥ – ಸದಸ್ಯರು | |
| ಎಲ್. ನಾಗರತ್ನ – ಸದಸ್ಯರು | |
| ವರಲಕ್ಷ್ಮಿ. ಜೆ – ಸದಸ್ಯರು | |
| ಆಶಾ ಸುರೇಶ್ – ಸದಸ್ಯರು | |
| ಎನ್. ಜಯಪಾಲ – ಸದಸ್ಯರು | |
| **ಗೈರುಹಾಜರಿದ್ದ ಸದಸ್ಯರುಗಳು** | |
| ಲಾವಣ್ಯಗಣೇಶ್‌ರೆಡ್ಡಿ – ಸದಸ್ಯರು | |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

## *01]. ವಿಷಯದ ಸಂಖ್ಯೆ: ತೆಆಸ್ಥಾಸ/60/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಉಆ(ಕಂ)ಪಿಆರ್/635/11–12, ದಿನಾಂಕ : 25–05–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಹಾಯ ಕೇಂದ್ರಗಳಲ್ಲಿ ಸಾರ್ವಜನಿಕರಿಂದ ಆಸ್ತಿ ತೆರಿಗೆ ಸ್ವೀಕರಿಸಲು ಪ್ರತಿಯೊಂದು ವಾರ್ಡ್‌ನಲ್ಲಿ ಸಹಾಯ ಕೇಂದ್ರಗಳನ್ನು ತೆರೆಯಲಾಗಿರುತ್ತದೆ. ಸದರಿ ಕೇಂದ್ರಗಳಲ್ಲಿ ಆಸ್ತಿ ತೆರಿಗೆ ಸ್ವೀಕರಿಸುವಲ್ಲಿ ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಕಿಯೋನಿಕ್ಸ್ ಸಂಸ್ಥೆಯ ಜೊತೆಯಲ್ಲಿ Memorandum of Understanding ಅನುಸಾರ ಡೇಟಾ ಎಂಟ್ರಿ ಆಪರೇಟರ್‌ಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನಿಯೋಜಿಸಿ ಕಾರ್ಯನಿರ್ವಹಿಸತ್ತಿದ್ದು ಸದರಿಯವರುಗಳನ್ನು ಕಾಲಕಾಲಕ್ಕೆ ನವೀಕರಿಸುತ್ತಾ ಬಂದಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಎಲ್ಲ ಸ್ವತ್ತುಗಳನ್ನು ಆಸ್ತಿ ತೆರಿಗೆ ವ್ಯಾಪ್ತಿಗೆ ಒಳಪಡಿಸಲು ಸಮಗ್ರ ಸರ್ವೆ ಕಾರ್ಯವನ್ನು ಆಗಸ್ಟ್ 2010 ರಿಂದ ಪ್ರಾರಂಭಗೊಂಡಿದ್ದು ಡಿಸೆಂಬರ್ 2010 ರೊಳಗೆ ಮುಕ್ತಾಯಗೊಳಿಸಲು ಎಲ್ಲ ವಲಯ ಅಪರ : ಜಂಟಿ ಆಯುಕ್ತರುಗಳಿಗೆ ಸೂಚಿಸಲಾಗಿರುತ್ತದೆ. ಸದರಿ ಸರ್ವೆ ಕಾರ್ಯವು ಕೈಗೊಂಡ ಸಮಯದಲ್ಲಿ ಜನಗಣತಿ ಕಾರ್ಯಕ್ರಮ ಪ್ರಾರಂಭಗೊಂಡ ಹಿನ್ನಲೆಯಲ್ಲಿ ಕಂದಾಯ ಇಲಾಖೆಯ ಎಲ್ಲ ಅಧಿಕಾರಿಗಳು ಹಾಗೂ ಕಾರ್ಯನಿರ್ವಾಹಕ ಸಿಬ್ಬಂದಿಗಳು ಪೂರ್ಣ ಮಟ್ಟದಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಿಲ್ಲದೆ ಇರುವುದರಿಂದ ಸರ್ವೆ ಕಾರ್ಯವನ್ನು ನಿಗಧಿತ ಸಮಯದಲ್ಲಿ ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ. ಪ್ರಸ್ತುತ ಸದರಿ ಸರ್ವೆ ಕಾರ್ಯವು ಮುಕ್ತಾಯ ಹಂತದಲ್ಲಿರುತ್ತದೆ.

ಮುಂದುವರೆದಂತೆ ಸದರಿ ಸರ್ವೆ ಕಾರ್ಯದಲ್ಲಿ ಗುರುತಿಸಲಾಗಿರುವ ಎಲ್ಲಾ ಸ್ವತ್ತುಗಳನ್ನು ಜಿ.ಐ.ಎಸ್ ಮಾಹಿತಿಯೊಂದಿಗೆ ತಾಳೆಮಾಡಿ, ಪ್ರತಿಯೊಂದು ಸ್ವತ್ತಿಗೂ ಹೊಸದಾಗಿ ಪಿ.ಐ.ಡಿ ಸಂಖ್ಯೆಯನ್ನು ನೀಡಲು ಹಾಗೂ ಆಸ್ತಿ ತೆರಿಗೆ ವ್ಯಾಪ್ತಿಯಿಂದ ಹೊರಗೆ ಇರುವ ಎಲ್ಲ ಸ್ವತ್ತುಗಳನ್ನು ಆಸ್ತಿ ತೆರಿಗೆ ವ್ಯಾಪ್ತಿಗೆ ಒಳಪಡಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ.

ಮೇಲಿನ ಹಿನ್ನಲೆಯಲ್ಲಿ ಕಂದಾಯ ಇಲಾಖೆಯ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಈಗಾಗಲೇ ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಕಿಯೋನಿಕ್ಸ್ ಸಂಸ್ಥೆಯ ಮೂಲಕ ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಡೇಟಾ ಎಂಟ್ರಿ ಆಪರೇಟರ್‌ಗಳನ್ನೆ ದಿನಾಂಕ : 1-06-2011 ರಿಂದ ನಾಲ್ಕು ತಿಂಗಳ ಅವಧಿಗೆ ಮುಂದುವರೆಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿಯನ್ನು ಮಂಡಿಸಿದೆ.

***ನಿರ್ಣಯ :- ದಿನಾಂಕ 25-05-2011ರ ಆಯುಕ್ತರ ಟಿಪ್ಪಣಿ ಅನ್ನು ಒಪ್ಪಿದೆ.***

## *02]. ವಿಷಯದ ಸಂಖ್ಯೆ: ತೆಆಸ್ಥಾಸ/61/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಮುಲೆಅ/ಪಿಜಿ(5)/ಪಿಆರ್/16/09-10, ದಿನಾಂಕ ಃ 20-05-2011 ರಲ್ಲಿ ವಿವರಿಸಿರುವಂತೆ, ಸರ್ಕಾರಿ ಆದೇಶ ಸಂಖ್ಯೆ: ಆಇ(ವಿಶೇಷ) 04/ಸಿಪಿಪಿ/2011 ದಿನಾಂಕ : 11/04/2011 ರಂತೆ ದಿನಾಂಕ : 01/01/2011 ರಿಂದ ರಾಜ್ಯ ಸರ್ಕಾರ ನಿವೃತ್ತಿ ವೇತನದಾರರಿಗೆ ಒಂದು ಕಂತು ಹೆಚ್ಚುವರಿ ತುಟ್ಟಿ ಭತ್ಯೆಯನ್ನು ಶೇ. 6.25% ರಷ್ಟು ಮಂಜೂರು ಮಾಡಲಾಗಿರುತ್ತದೆ. ಅದರಂತೆ ಈಗಾಗಲೇ ಮಂಜೂರಾಗಿರುವ ಶೇ. 56.25% ರ ಜೊತೆಗೆ ಶೇ. 6.25% ಸೇರಿ ಶೇ. 62.5% ರಂತೆ ಪಾವತಿಸಬೇಕಾಗಿರುತ್ತದೆ. ಕರ್ನಾಟಕ ಸರ್ಕಾರಿ ಸೇವಾ ನಿಯಮಗಳ ಪ್ರಕಾರ ನಿವೃತ್ತಿ ವೇತನದ ನಿಯಮಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಳವಡಿಸಬೇಕಾಗಿದ್ದು, ಸದರಿ ಸರ್ಕಾರಿ ಆದೇಶವನ್ನು ಪಾಲಿಕೆಗೆ ಅಳವಡಿಸಿಕೊಂಡು ದಿನಾಂಕ : 01/01/2011 ರಿಂದ ಅನ್ವಯಿಸುವಂತೆ ಶೇ. 6.25% ಹೆಚ್ಚುವರಿ ತುಟ್ಟಿ ಭತ್ಯೆಯನ್ನು ಪಾವತಿಸಬೇಕಾಗಿರುತ್ತದೆ.

ಸದರಿ ಹೆಚ್ಚುವರಿ **ರೂ.01,04,91,698.00** ಗಳ ತುಟ್ಟಿ ಭತ್ಯೆಯ ವೆಚ್ಚವನ್ನು 2011-12 ನೇ ಸಾಲಿನ ಆಯವ್ಯಯದ ಅಂದಾಜುಗಳ ಲೆಕ್ಕ ಶೀರ್ಷಿಕೆ 02-ಸಾಮಾನ್ಯ ಆಡಳಿತ/ಆಡಳಿತ ವೆಚ್ಚಗಳು/ನೌಕರರ ನಿವೃತ್ತಿ ಸೌಲಭ್ಯಗಳ ಅಡಿಯಲ್ಲಿ ಈಗಾಗಲೇ ಅನುವು ಮಾಡಿಕೊಳ್ಳಲಾಗಿದೆ. ಈ ತುಟ್ಟಿಭತ್ಯೆಯನ್ನು ಪಾವತಿ ಮಾಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸಮಿತಿಯ ಮುಂದೆ ಟಿಪ್ಪಣಿ ಮಂಡಿಸಿದೆ.

***ನಿರ್ಣಯ :- ದಿನಾಂಕ 20-05-2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.***

## *03]. ವಿಷಯದ ಸಂಖ್ಯೆ: ತೆಆಸ್ಥಾಸ/62/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ: ಬಿ12(ಸಿ1)ಪಿಆರ್/51/2010-11, ದಿನಾಂಕ : 20-05-2011 ರಲ್ಲಿ ವಿವರಿಸಿರುವಂತೆ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಆಯುಕ್ತರವರ ಅಧ್ಯಕ್ಷತೆಯಲ್ಲಿ ದಿ: 09-11-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಚಾಲಕರ ಹಾಗೂ ಶುಚಿಗಾರರ ವೆಲ್‌ಫೇರ್ ಅಸೋಸಿಯೇಷನ್ ಇವರ ಬೇಡಿಕೆಗಳ ಬಗ್ಗೆ ನಡೆದ ಸಭೆಯಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಚಾಲಕರು ಮತ್ತು ಶುಚಿಗಾರರುಗಳು ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ. ಅದನ್ನು ಪರಿಶೀಲಿಸಿ, ಬೋನಸ್ ನೀಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಕೌನ್ಸಿಲ್ ಸಭೆಯ ಮುಂದೆ ಒಂದು ವರದಿ ಸಲ್ಲಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಚಾಲಕರ ಹಾಗೂ ಶುಚಿಗಾರರ ಕ್ಷೇಮಾಭಿವೃದ್ಧಿ ಸಂಘ (ರಿ) ರವರು ದಿನಾಂಕ: 11-04-2011 ರಂದು ಮನವಿ ಸಲ್ಲಿಸಿ, ಡಾ|| ಬಿ.ಆರ್. ಅಂಬೇಡ್ಕರ್ ದಿನಾಚರಣೆಯ ಅಂಗವಾಗಿ ಪೌರಕಾರ್ಮಿಕರು, ಗ್ಯಾಂಗ್‌ಮೆನ್, ತೋಟಗಾರಿಕೆ ಮಾಲಿ,

ತೋಟಗಾರಿಕೆ ಮೇಸ್ತ್ರಿ, ಎ.ಎಲ್.ಓ / ಎಂ.ಸಿ. / ಸೈನೋಗ್ಯಾಸ್ / ಸ್ಪೆಷಲ್ ಗ್ಯಾಂಗ್‌ಮೆನ್, ಸ್ಯಾನಿಟರಿ ದಫೇದಾರ್‌ಗಳು ಹಾಗೂ 'ಡಿ' ಗ್ರೂಫ್ ನೌಕರರುಗಳಿಗೆ ರೂ. 5000–00 ಗಳ ಬೋನಸ್ ಮಂಜೂರು ಮಾಡಲು ದಿನಾಂಕ: 11–04–2011ರ ಕಛೇರಿ ಆದೇಶದಂತೆ ಆದೇಶಿಸಲಾಗಿರುತ್ತದೆ. ಆದ್ದರಿಂದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಚಾಲಕರುಗಳಿಗೆ ಡಾ॥ ಬಿ.ಆರ್. ಅಂಬೇಡ್ಕರ್ ದಿನಾಚರಣೆಯ ಅಂಗವಾಗಿ ಬೋನಸ್ ನೀಡಲು ಮನವಿ ಸಲ್ಲಿಸಿರುತ್ತಾರೆ.

ಈ ಸಂಬಂಧವಾಗಿ ಮುಖ್ಯ ಲೆಕ್ಕಾಧಿಕಾರಿಗಳ ಅಭಿಪ್ರಾಯ ವರದಿಯನ್ನು ಕೋರಲಾದಂತೆ, ಮುಖ್ಯ ಲೆಕ್ಕಾಧಿಕಾರಿಗಳು ಮುಖ್ಯ ಲೆಕ್ಕಾಧಿಕಾರಿಗಳ ವರದಿ ದಿನಾಂಕ: 27–12–2010ರ ರೀತ್ಯಾ ನೀಡಿರುವ ವರದಿಯಲ್ಲಿ ಹೆಚ್.ಆರ್.ಎಂ.ಎಸ್. ಮಾಹಿತಿ ಅನ್ವಯ 160 ಮಂದಿ ಚಾಲಕರು ಮತ್ತು 75 ಮಂದಿ ಶುಚಿಗಾರರು ಕಾರ್ಯನಿರ್ವಹಿಸುತ್ತಿದ್ದು, ಪ್ರತಿಯೊಬ್ಬರಿಗೂ ರೂ. 5000–00 ಗಳಂತೆ ಬೋನಸ್ ನೀಡಿದರೆ ರೂ. 11,75,000–00 ಗಳು ವೆಚ್ಚವಾಗುತ್ತದೆಯೆಂದು ತಿಳಿಸಿರುತ್ತಾರೆ.

ಡಾ॥ ಬಿ.ಆರ್. ಅಂಬೇಡ್ಕರ್ ದಿನಾಚರಣೆಯ ಅಂಗವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ 160 ಮಂದಿ ಚಾಲಕರುಗಳಿಗೆ ಮತ್ತು 75 ಮಂದಿ ಶುಚಿಗಾರರುಗಳಿಗೆ (ಪ್ರತಿಯೊಬ್ಬರಿಗೆ ರೂ. 5,000–00 ರಂತೆ) ಬೋನಸ್ ನೀಡುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

<u>–ಮುಂದೂಡಿದೆ–</u>

**ಜಿ. ಮಂಜುನಾಥ್‌ರಾಜು**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# <u>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ</u>

**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 20–06–2011 ರಂದು ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| **ಶ್ರೀಯುತರುಗಳಾದ :** | |
| ಜಿ. ಮಂಜುನಾಥರಾಜು – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ, |
| ಜಿ. ಮಂಜುನಾಥ – ಸದಸ್ಯರು | ಉಪ ಆಯುಕ್ತರು (ಪೂರ್ವ), (ಪಶ್ಚಿಮ), (ಭೂಸ್ವಾಧೀನ), (ಆಸ್ತಿಗಳು) |
| ಲತಾ. ಕೆ – ಸದಸ್ಯರು | ಮುಖ್ಯ ಅಭಿಯಂತರರು (ಯಲಹಂಕ), (ಪೂರ್ವ), (ಮಾಹದೇಪುರ) |
| ಎಂ.ಸಿ. ಶ್ರೀನಿವಾಸ್ – ಸದಸ್ಯರು | ಕಾರ್ಯಪಾಲಕ ಅಭಿಯಂತರರು ವಿದ್ಯುತ್ – (ಪೂರ್ವ), (ಪಶ್ಚಿಮ), (ದಕ್ಷಿಣ) |
| ವಿ. ವಾಗಿಶ್ – ಸದಸ್ಯರು | ಸಹಾಯಕ ಕಂದಾಯ ಅಧಿಕಾರಿ (ಬಿ.ಟಿ.ಎಂ. ಬಡಾವಣೆ), (ಬಸವನಗುಡಿ) |
| ಮಂಜುನಾಥ – ಸದಸ್ಯರು | |
| ಎಲ್. ನಾಗರತ್ನ – ಸದಸ್ಯರು | |
| ವರಲಕ್ಷ್ಮಿ. ಜೆ – ಸದಸ್ಯರು | |
| ಆಶಾ ಸುರೇಶ್ – ಸದಸ್ಯರು | |
| ಎನ್. ಜಯಪಾಲ – ಸದಸ್ಯರು | |
| ಲಾವಣ್ಯಗಣೇಶ್‌ರೆಡ್ಡಿ – ಸದಸ್ಯರು | |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

## <u>*01]. ವಿಷಯದ ಸಂಖ್ಯೆ :–ತೆಆಸ್ಥಾಸ/37/2011–12*</u>

ಆಯುಕ್ತರ ಟಿಪ್ಪಣಿ ದಿನಾಂಕ : 13–04–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿದ್ಯುತ್ ವಿಭಾಗದಿಂದ ಎಲ್ಲಾ 8 ವಲಯಗಳಲ್ಲಿನ 198 ವಾರ್ಡ್‌ಗಳಲ್ಲಿ ಬೀದಿ ದೀಪಗಳ ದುರಸ್ತಿ ಹಾಗೂ ನಿರ್ವಹಣೆಗಾಗಿ ಕಂಡಿಕೆ 50ರಲ್ಲಿ ತಿಳಿಸಿರುವಂತೆ ಒಟ್ಟು 124 ಪ್ಯಾಕೇಜ್‌ಗಳ ಅಂದಾಜು ಪಟ್ಟಿಯ ಮೊತ್ತಗಳನ್ನು ಕಡತದ ಕಂಡಿಕೆ 54, 55, 56, 57, 58, 59, 60, 61, 62, 63, 64, 65, 66, 67 ರಲ್ಲಿ ವಿವರವಾಗಿ ತಿಳಿಸಲಾಗಿದೆ. ಕಡತದ ಕಂಡಿಕೆ 68ರಲ್ಲಿ ಗೋಷ್ವಾರೆಯಂತೆ 8 ವಲಯಗಳ ಒಟ್ಟು 198 ವಾರ್ಡ್‌ಗಳಿಗೆ ವಾರ್ಷಿಕ ನಿರ್ವಹಣೆಗಾಗಿ ಒಂದು ವರ್ಷಕ್ಕೆ ರೂ.3370.76 ಲಕ್ಷಗಳು ಹಾಗೂ ಎರಡು ವರ್ಷಗಳಿಗೆ ರೂ.6746.05 ಲಕ್ಷಗಳಿಗೆ 2011–12ನೇ ಸಾಲಿನ ಆರ್ಥಿಕ ವರ್ಷದಲ್ಲಿ ಕಾಮಗಾರಿ ಸಂಖ್ಯೆಗಾಗಿ ಪ್ರಸ್ತಾವನೆಯನ್ನು ಪ್ರಧಾನ ಅಭಿಯಂತರರ ಮೂಲಕ ಸಲ್ಲಿಸಿರುತ್ತಾರೆ.

ಕಂಡಿಕೆ 73ರಲ್ಲಿ ಮಾನ್ಯ ಆಯುಕ್ತರು ಅನುಮೋದಿಸಿರುತ್ತಾರೆ.

ಕಂಡಿಕೆ 47ರಲ್ಲಿ 2010–11ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ ಪಿ.0300/138 (ಸುಟ್ಟು ಹೋದ ಬೀದಿ ದೀಪಗಳ ಬದಲಾವಣೆ ಮತ್ತು ನಿರ್ವಹಣೆ ದುರಸ್ತಿ (ಪ್ಯಾಕೇಜ್) ರಲ್ಲಿ ರೂ.8.00 ಕೋಟಿಗಳ ಅನುದಾನವನ್ನು ಮೀಸಲಿರಿಸಿರುವುದನ್ನು ಪ್ರಸ್ತಾಪಿಸಲಾಗಿದೆ.

2011–12ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿಕೊಂಡು ರೂ.67.46 ಕೋಟಿಗಳಿಗೆ ಕಾಮಗಾರಿ ಸಂಖ್ಯೆಗಾಗಿ ಕೋರಿರುತ್ತಾರೆ. ಸದರಿ ಲೆಕ್ಕ ಶೀರ್ಷಿಕೆಯನ್ನು 2011–12ನೇ ಸಾಲಿನಲ್ಲಿ ಅಳವಡಿಸಿಕೊಂಡು ಅನುದಾನದ ಅವಕಾಶ ಕಲ್ಪಿಸಬೇಕಾಗಿರುತ್ತದೆ.

ಮುಂದುವರೆದು 2011–12ನೇ ಸಾಲಿನ ಆಯವ್ಯಯವು ತಯಾರಿಕೆಯ ಹಂತದಲ್ಲಿರುತ್ತದೆ. ಶೇ.30 ಲೇಖಾನುದಾನವನ್ನು ಮಾತ್ರ ಪಡೆಯಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ವಾರ್ಷಿಕ ಬೀದಿ ದೀಪಗಳ ನಿರ್ವಹಣೆ ವೆಚ್ಚ ರೂ.3370.76 ಲಕ್ಷಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲು ಮತ್ತು ಜಾಬ್ ಸಂಖ್ಯೆ ರೂ.3370.76 ಲಕ್ಷಗಳಿಗೆ ಕಾಮಗಾರಿ ಸಂಖ್ಯೆ ನೀಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

<u>ನಿರ್ಣಯ :–</u> <u>*ಆಯುಕ್ತರ ದಿನಾಂಕ 13–04–2011ರ ಟಿಪ್ಪಣಿಯನ್ನು ಒಪ್ಪುತ್ತಾ, 2011–12ನೇ ಸಾಲಿನ ಆಯವ್ಯಯ ಮಂಡನೆಯಾಗಿ, ಸರ್ಕಾರದ ಅನುಮೋದನೆ ನಂತರ ಟೆಂಡರ್ ಪ್ರಕ್ರೀಯೆಯನ್ನು ಪ್ರಾರಂಭಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.*</u>

## *02]. ವಿಷಯದ ಸಂಖ್ಯೆ: ತೆಆಸ್ಥಾಸ/40/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)/ಪಿಆರ್/112/10-11, ದಿನಾಂಕ : 31-01-2011ರಲ್ಲಿ ವಿವರಿಸಿರುವಂತೆ, ಶ್ರೀ ರಾಘವೇಂದ್ರ, ಬಿ.ಇ.(ಮೆಕಾನಿಕಲ್) ಬಿನ್ ಯಾದಗೀರ್ ರವರು ಕಬ್ಬನ್ ಪಾರ್ಕ್ ಪೊಲೀಸ್ ಸ್ಟೇಷನ್ ಹತ್ತಿರವಿರುವ ಎಸ್.ಟಿ.ಡಿ. ಬೂತ್ ಪಕ್ಕದಲ್ಲಿ ಖಾಲಿ ಇರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದ ಜಾಗದಲ್ಲಿ 10X10 ಅಡಿ ಅಳತೆಯ ಜಾಗವನ್ನು ನಂದಿನಿ ಹಾಲಿನ ಮಳಿಗೆ ತೆರೆಯಲು ಅನುಮತಿ ಕೋರಿರುತ್ತಾರೆ.

ಅನುಮತಿ ಕೋರಿರುವ ಜಾಗಕ್ಕೆ ಹೊಂದಿಕೊಂಡು ಮೀನುಗಾರಿಕೆ ಕ್ಯಾಂಟೀನ್ ಮತ್ತು ಹೋಟೆಲ್ ಇರುತ್ತದೆಂದೂ ಕ್ಷೀರ ಮಳಿಗೆಯನ್ನು ತೆರೆಯಲು ಅನುಮತಿ ನೀಡಿದಲ್ಲಿ, ಪಾದಚಾರಿಗಳಿಗಾಗಲೀ ಅಥವಾ ಸ್ಥಳೀಯರಿಗಾಗಲೀ ತೊಂದರೆಯಾಗುವುದಿಲ್ಲವೆಂದು ಸಹಾಯಕ ಕಂದಾಯ ಅಧಿಕಾರಿ(ವಸಂತನಗರ) ರವರು ಅಭಿಪ್ರಾಯಿಸಿರುತ್ತಾರೆ. ಹಾಗೂ ಸಹಾಯಕ ಕಾರ್ಯನಿರ್ವಹಕ ಅಭಿಯಂತರರ ವರದಿಯಲ್ಲಿ ರಸ್ತೆ ಅಗಲೀಕರಣ ವ್ಯಾಪ್ತಿಗೆ ಬರುವುದಿಲ್ಲ ಎಂದು ಮಾಹಿತಿ ನೀಡಿರುತ್ತಾರೆ.

ಆದರೆ, ಸರ್ಕಾರದ ಆದೇಶ ಸಂಖ್ಯೆ:ನಅಇ/ಟಿಎಂಡಿ/2002, ಬೆಂಗಳೂರು, ದಿನಾಂಕ: 02-06-2003ರ ಮಾರ್ಗಸೂಚಿ ಕ್ರಮಸಂಖ್ಯೆ (VI) ರನ್ವಯ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರಿವನ್ನು ಉಪಯೋಗಿಸಿ ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ, ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮೂಲಕವೇ ನೀಡುವುದು. ಮೇಲ್ಕಂಡಿಸಿದ ಮಾರ್ಗಸೂಚಿಗಳನ್ನು ಉಲ್ಲಂಘಿಸತಕ್ಕದಲ್ಲ ಎಂಬುದಾಗಿದೆ.

ಆದ್ದರಿಂದ, ಶ್ರೀ ರಾಘವೇಂದ್ರರವರಿಗೆ ನಂದಿನಿ ಹಾಲಿನ ಮಳಿಗೆ ಸ್ಥಾಪಿಸಲು ಅನುಮತಿ ನೀಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ : 31-1-2011 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 05-04-2011ರ ನಿರ್ಣಯ.

### *-ಮುಂದೂಡಿದೆ-*

## *03]. ವಿಷಯದ ಸಂಖ್ಯೆ: ತೆಆಸ್ಥಾಸ/47/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)/ಪಿಆರ್/61/10-11, ದಿನಾಂಕ : 18-03-2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವ್ಯಾಪ್ತಿಯ ದಾಸರಹಳ್ಳಿ ವಲಯದ ವಾರ್ಡ್ ನಂ.41, ಪಾರ್ಕ್ ಪಕ್ಕದ ಜಾಗವನ್ನು ಹಾಲು ಉತ್ಪನ್ನ ಮಾರಾಟ ಮಳಿಗೆ ಸ್ಥಾಪಿಸಲು 10X10 ಅಡಿಗಳ ಜಾಗವನ್ನು ನಂದಿನಿ ಉತ್ಪನ್ನಗಳ ಮಾರಾಟ ಮಳಿಗೆ ಸ್ಥಾಪಿಸಲು ಅನುಮತಿ ನೀಡುವಂತೆ ಶ್ರೀಮತಿ.ಎಂ.ಧನಲಕ್ಷ್ಮಿ ರವರು ಕೋರಿರುತ್ತಾರೆ.

ವಾರ್ಡ್ ನಂ.41ರ ನಗರ ಪಾಲಿಕೆ ಸದಸ್ಯರು, ಸಹ ಕಂದಾಯ ಅಧಿಕಾರಿ (ಪೀಣ್ಯ ಕೈಗಾರಿಕಾ ಪ್ರದೇಶ) ರವರಿಗೆ ದಿನಾಂಕ : 08-01-2011ರಲ್ಲಿ ಮನವಿ ಸಲ್ಲಿಸಿದರ ಮೇರೆಗೆ ಪುನ: ಸಹ ಕಂದಾಯ ಅಧಿಕಾರಿ ರವರು ಕಂಡಿಕೆ 47 ಮತ್ತು 48ರಲ್ಲಿ ವರದಿ ಸಲ್ಲಿಸಿದ್ದು, ಅರ್ಜಿದಾರರು ಕೋರಿರುವ ಜಾಗವು ಒಇಖ ಕಾಲೋನಿಯಲ್ಲಿರುವ ಪಾರ್ಕ್ ಹತ್ತಿರದ ಸಿ.ಎ ನಿವೇಶನವಾಗಿದ್ದು, ಅರ್ಜಿದಾರರಿಗೆ 10 X 10 ಅಡಿಗಳ ಜಾಗವು ನಂದಿನಿ ಮಿಲ್ಕ್ ಪಾರ್ಲರ್ ತೆರೆಯುವ ಉದ್ದೇಶಕ್ಕೆ ಗುತ್ತಿಗೆ ನೀಡಲು ಪ್ರಸ್ತಾವನೆಯನ್ನು ವಲಯ ಅಧಿಕಾರಿಗಳ ಮುಖಾಂತರ ಸಲ್ಲಿಸಿರುತ್ತಾರೆ. ಇದರಂತೆ ಮಾನ್ಯ ಆಯುಕ್ತರ ಆದೇಶದಂತೆ 3 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೀಡಲು ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿ ಮಂಡಿಸಲಾಗಿದೆ.

ಕರ್ನಾಟಕ ಮುನಿಸಿಪಲ್ ಕಾಯ್ದೆ ಅನ್ವಯ 1976 ಕಲಂ 176ರ (6) ಹಾಗು (ಬಿ) 2 ಪ್ರಕಾರ 1 ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಆಯುಕ್ತರಿಗೆ ಇರುತ್ತದೆ. ನಗರ ಯೋಜನೆ ಮತ್ತು ಅಭಿವೃದ್ದಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯೊಡನೆ 3 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ. ಈ ಸ್ಥಾಯಿ ಸಮಿತಿಗಳು ಮತ್ತು ಮಹಾನಗರ ಪಾಲಿಕೆಯ ಸಭೆಯ ಅನುಮೋದನೆಯೊಡನೆ 5 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ. ಗುತ್ತಿಗೆ ಅವಧಿಯು 5 ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಸರ್ಕಾರದ ಅನುಮೋದನೆ ಅವಶ್ಯವಿರುತ್ತದೆ.

ಸದರಿ ಸ್ಥಳದ ಪ್ರಸ್ತುತ ಮಾರುಕಟ್ಟೆ ದರವು ದಿನಾಂಕ:17-04-2007ರ ಸರ್ಕಾರದ ಮಾರ್ಗಸೂಚಿ ದರದಂತೆ ನಿವೇಶನದ ಚದರ ಅಡಿ ಒಂದಕ್ಕೆ ವಸತಿಯೇತರ ಉದ್ದೇಶಕ್ಕೆ ರೂ.1050/- ಗಳಾಗಿದ್ದು, ಅರ್ಜಿದಾರರು ಕೋರಿರುವ 10*10 ಅಡಿಗಳ ಜಾಗವನ್ನು 100

ಚದರ ಅಡಿಗಳಾಗಿರುತ್ತದೆ. ಇದರಂತೆ 100 X 1050=1,05,000/– ರೂ. ಗಳಾಗುತ್ತದೆ. ಶೇ 10% ರಂತೆ ಲೆಕ್ಕಚಾರ ಮಾಡಲಾಗಿ ರೂ. 10.500 ವಾರ್ಷಿಕ ಗುತ್ತಿಗೆ ವೆಚ್ಚವಾಗುತ್ತದೆ. ಇದರಂತೆ ಮಾಸಿಕ ಗುತ್ತಿಗೆ ರೂ.875/– ಗಳಾಗುತ್ತದೆ.

ಈ ಮೇಲಿನ ಹಿನ್ನೆಲೆಯಲ್ಲಿ ಶ್ರೀಮತಿ.ಎಂ.ಧನಲಕ್ಷ್ಮಿ ರವರಿಗೆ ಹಾಲಿನ ಉತ್ಪನ್ನ ಮಾರಾಟ ಮಳಿಗೆಗೆ 3 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ : 18–03–2011 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 05–04–2011ರ ನಿರ್ಣಯ.

**_–ಮುಂದೂಡಿದೆ–_**

## _04]. ವಿಷಯದ ಸಂಖ್ಯೆ: ತೆಆಸ್ಥಾಸ/52/2011–12_

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)/ಪಿಆರ್/227/10–11, ದಿನಾಂಕ : 09–12–2010 ರಲ್ಲಿ ವಿವರಿಸಿರುವಂತೆ, ಯಲಹಂಕ ವಲಯದ ವ್ಯಾಪ್ತಿಯ ವಾರ್ಡ್ ಸಂಖ್ಯೆ:06ರಲ್ಲಿ ಕೆ.ಆರ್.ಪುರ ಹೋಬಳಿ, ದಾಸರಹಳ್ಳಿ ಗ್ರಾಮದ ಸರ್ವೆ ನಂ:15ರಲ್ಲಿ 3–11 ಎಕರೆ/ಗುಂಟೆ ಸರ್ಕಾರಿ ಜಮೀನನ್ನು ಅದೇ ಸರ್ವೆ ನಂಬರಿನಲ್ಲಿ ಅನಧಿಕೃತ ಕಟ್ಟಡ ಕಟ್ಟಿಕೊಂಡಿರುವವರಿಗೆ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರಜಿಲ್ಲೆ, ಬೆಂಗಳೂರು ರವರು ಪತ್ರಸಂಖ್ಯೆ:ಸಿಆರ್/79/09–10, ದಿನಾಂಕ:14–12–2010 ರಂದು ಮನೆಗಳ ಸಕ್ರಮೀಕರಣಕ್ಕಾಗಿ ಎರಡು ವರ್ಷದೊಳಗೆ ಬಳಸುವ ನಿಬಂಧನೆಯೊಂದಿಗೆ ಇನ್ನಿತರೇ ನಿಬಂಧನೆಗಳನ್ನು ವಿಧಿಸಿ, ಜಂಟಿ ಆಯುಕ್ತರು(ಬ್ಯಾಟರಾಯನಪುರ) ಬಿ.ಬಿ.ಎಂ.ಪಿ. ರವರಿಗೆ ಹಸ್ತಾಂತರಿಸಿದ್ದು, ಸದರಿ ಆದೇಶದಂತೆ ಖಾತೆ ಸಹ ಜಂಟಿ ಆಯುಕ್ತರ ಹೆಸರಿನಲ್ಲಿರುವುದಾಗಿ ವರದಿ ಮಾಡಿರುತ್ತಾರೆ.

ಸರ್ಕಾರಿ ಆದೇಶ ಸಂಖ್ಯೆ:ನಅಇ/122/ಎಂಎನ್‌ಜಿ/2009(ಭಾ), ದಿ:13–01–2010 ರಲ್ಲಿ ಘೋಷಿತ ಕೊಳಚೆ ಪ್ರದೇಶದಲ್ಲಿ ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ಮನೆಗಳನ್ನು ಕಟ್ಟಿಕೊಂಡಿರುವವರಿಗೆ ಪ್ರತಿ ಚದರ ಮೀಟರ್‌ಗೆ 200/– ರೂ.ಗಳಂತೆ ದರವನ್ನು ವಿಧಿಸಿ, 10–ವರ್ಷಗಳ ಮಾರಾಟ ಮತ್ತು ಗುತ್ತಿಗೆ ಕರಾರು ಒಪ್ಪಂದ ಪತ್ರಗಳನ್ನು ನೀಡಲು ಅವಕಾಶವಿರುವುದಾಗಿ, ಅನಧಿಕೃತ ಕಟ್ಟಡಗಳ ಪ್ರದೇಶ ಸ್ಲಂ ಪಟ್ಟಿಯಲ್ಲಿಲ್ಲವೆಂದು ವರದಿ ಮಾಡಿರುತ್ತಾರೆ.

ಈಗಾಗಲೇ ದಾಸರಹಳ್ಳಿ ಗ್ರಾಮದ ಸರ್ವೆ ನಂ:15ರಲ್ಲಿ ಅನಧಿಕೃತ ಕಟ್ಟಡ ಕಟ್ಟಿಕೊಂಡಿರುವವರಿಗೆ ಚ.ಮೀಟರ್‌ಗೆ 200/–ರೂ.ಗಳಂತೆ ಹಣ ತುಂಬಿಸಿಕೊಂಡು ಹಂಗಾಮಿ ಹಕ್ಕುಪತ್ರ ವಿತರಿಸಲಾಗಿದ್ದು, 14 ಫಲಾನುಭವಿಗಳು ಸರ್ಕಾರಕ್ಕೆ ಹಣ ಕಟ್ಟಿರುವುದಿಲ್ಲವೆಂದು ಹಕ್ಕುಪತ್ರ ವಿತರಿಸಲಾಗಿದೆಯೆಂದೂ, 126 ಫಲಾನುಭವಿಗಳ ಪಟ್ಟಿ ಲಗತ್ತಿಸಿ, ಫಲಾನುಭವಿಗಳಿಗೆ ಪಟ್ಟಿಗೆ ಸರ್ಕಾರದಿಂದ ಅನುಮೋದನೆ ಪಡೆದು ಹಾಲಿ ಹಂಗಾಮಿ ಹಕ್ಕುಪತ್ರ ನೀಡಿರುವ ಫಲಾನುಭವಿಗಳಿಗೆ ಲೀಸ್ ಕಂ ಸೇಲ್ ಅಗ್ರಿಮೆಂಟ್ ಮಾಡಿಕೊಡಲು ಹಾಗೂ ಚ.ಮೀಟರ್‌ಗೆ 200/–ರೂ.ರಂತೆ ದರ ನಿಗಧಿಪಡಿಸಲು ಕೋರಿರುತ್ತಾರೆ.

ಪ್ರಸ್ತಾಪಿತ ಜಮೀನು ಸಕ್ರಮಗೊಳಿಸುವ ಉದ್ದೇಶಕ್ಕೆ ಹಸ್ತಾಂತರಗೊಂಡಿದ್ದು, ಈ ಪ್ರದೇಶ ಘೋಷಿತ ಕೊಳಚೆ ಪ್ರದೇಶವೆಂದು ಘೋಷಣೆಯಾಗಿರುವುದಿಲ್ಲ. ಆದ್ದರಿಂದ, ಪ್ರಸಕ್ತ ಮಾರುಕಟ್ಟೆ ದರಗಳನ್ವಯ ಕ್ರಯಪತ್ರಗಳನ್ನು ನೀಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:09–12–2010ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:05–04–2011ರ ನಿರ್ಣಯ.

**ನಿರ್ಣಯ :–** **ಆಯುಕ್ತರ ದಿನಾಂಕ : 09–12–2010ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಬಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 05–04–2011ರ ನಿರ್ಣಯವನ್ನು ಒಪ್ಪುತ್ತಾ ಸದರಿ ಪ್ರದೇಶದಲ್ಲಿ ಬಡವರೆ ಹೆಚ್ಚಾಗಿ ವಾಸಿಸುತ್ತಿರುವುದು ಕಂಡು ಬರುವುದರಿಂದ ಚದರ ಮೀಟರ್ ಒಂದಕ್ಕೆ ರೂ.200/– (ಎರಡು ನೂರು) ಗಳಂತೆ ನಿಗಧಿಪಡಿಸಿ ಕ್ರಯಪತ್ರ ನೀಡಲು ಸಮಿತಿಯು ತೀಮಾನಿಸಲಾಯಿತು.**

## _05]. ವಿಷಯದ ಸಂಖ್ಯೆ: ತೆಆಸ್ಥಾಸ/55/2011–12_

ಆಯುಕ್ತರ ಟಿಪ್ಪಣಿ ಸಂಖ್ಯೆ : ಎಲ್‌ಎಕ್ಯೂ/ಸಿಆರ್/54/2010–11, ದಿನಾಂಕ : 09–03–2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ: 51 ರಲ್ಲಿನ ಕುವೆಂಪುನಗರ ಬಡಾವಣೆಯ ಸಮೀಪವಿರುವ ಅಂಬೇಡ್ಕರ್‌ನಗರ ಕೊಳಚೆ ಪ್ರದೇಶ ಸುಮಾರು 40 ಎಕರೆ ವಿಸ್ತಾರದ ಪ್ರದೇಶವಾಗಿದ್ದು, ಈ ಕೊಳಚೆ ಪ್ರದೇಶದ ನಿವಾಸಿಗಳಿಗೆ, ವಸತಿ ಸಮುಚ್ಛಯ, ಆಟದ ಮೈದಾನ, ಆಸ್ಪತ್ರೆ, ಉದ್ಯಾನವನ ಅಂಗನವಾಡಿ ಕಟ್ಟಡ

ಹಾಗೂ ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಯಾವುದೇ ಸರ್ಕಾರಿ ಜಾಗ ಲಭ್ಯವಿಲ್ಲವೆಂದು, ಮಹದೇವಪುರ ವಲಯದ ವಿಜನಾಪುರ ವಾರ್ಡ್ ನಂ–51 ರ ವ್ಯಾಪ್ತಿಯಲ್ಲಿ ಕುವೆಂಪುನಗರದ ಸಮೀಪದಲ್ಲಿ ವಿಜನಾಪುರ ಗ್ರಾಮದ ಸರ್ವೆ ನಂ–19/2 ರಲ್ಲಿ 02 ಗುಂಟೆ ಖರಾಬ್ ಸೇರಿ ಜುಮ್ಲಾ 5.20 ಎಕರೆ ವಿಸ್ತೀರ್ಣದ ದೊಡ್ಡ ಖಾಲಿ ಜಾಗವಿದ್ದು, ಈ ಪ್ರದೇಶವನ್ನು ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನ ಪಡಿಸಿಕೊಳ್ಳಲು ವಿಜನಾಪುರ ವಾರ್ಡ್ ನಂ–51 ರ ಪಾಲಿಕೆ ಸದಸ್ಯರು, ಪೂಜ್ಯ ಮಹಾಪೌರರು, ಬಿ.ಬಿ.ಎಂ.ಪಿ ಹಾಗೂ ಜಂಟಿ ಆಯುಕ್ತರು ಮಹದೇವಪುರ ವಲಯ ರವರನ್ನು ಕೋರಿರುತ್ತಾರೆ.

ಮನವಿಯನ್ನು ಪರಿಶೀಲಿಸಿ, ವಿಜನಾಪುರ ಗ್ರಾಮದ ಸರ್ವೆ ನಂ–19/2 ರಲ್ಲಿನ 5.18 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ಕೊಳಚೆ ಪ್ರದೇಶದ ನಿವಾಸಿಗಳಿಗೆ ಮೂಲಭೂತ ಸೌಕಾರ್ಯಗಳನ್ನು ಒದಗಿಸಲು ಹಾಗೂ ಈ ಸ್ಥಳದಲ್ಲಿ ಯಾವುದೇ ಬೆಲೆ ಬಾಳುವ ಕಟ್ಟಡ, ಮರವಳಿ ಇಲ್ಲವೆಂದು, ಈ ಪ್ರದೇಶವನ್ನು ಭೂಸ್ವಾಧೀನ ಪಡಿಸಿಕೊಳ್ಳಲು, ಕೋರಿ, ಎ & ಡಿ ತಃಖ್ತೆ, ಸರ್ವೆ ಸ್ಕೆಚ್ ಮತ್ತು ಆರ್.ಟಿ.ಸಿ. ದಾಖಲೆಗಳೊಂದಿಗೆ ಸಹಾಯಕ ಕಂದಾಯ ಅಧಿಕಾರಿ, ಹೊರಮಾವು ಉಪ ವಲಯ ರವರು ಪ್ರಸ್ತಾವನೆಯನ್ನು ಉಪ ಆಯುಕ್ತರು, ಮಹದೇವಪುರ ವಲಯ ರವರ ಮುಖಾಂತರ ಜಂಟಿ ಆಯುಕ್ತರು, ಮಹದೇವಪುರ ವಲಯ ರವರಿಗೆ ಸಲ್ಲಿಸಿರುತ್ತಾರೆ.

ವಿಜನಾಪುರ ಗ್ರಾಮದ ಸರ್ವೆ ನಂ–19/2 ರಲ್ಲಿನ 5.18 ಎಕರೆ ಜಾಗವು ವಿವಾದಿತ ಪ್ರದೇಶವಾಗಿದ್ದು, ಈ ವಾರ್ಡ್‌ನಲ್ಲಿನ ಜನಸಂಖ್ಯೆಯಲ್ಲಿ ದಟ್ಟವಾದ ಬೆಳವಣಿಗೆಯಾಗಿದ್ದು, ಇಲ್ಲಿನ ಸಾರ್ವಜನಿಕ ಉಪಯೋಗಕ್ಕೆ ಬೇಕಾದ ಪಾಲಿಕೆಯ ಅಥವಾ ಸರ್ಕಾರಿ ಸ್ಥಳ ಇಲ್ಲದಂತಾಗಿದ್ದು, ಅಲ್ಲದೆ ಈ ಸ್ಥಳದ ಹತ್ತಿರದಲ್ಲಿನ ಕೆರೆ ಅಂಗಳ ಒಂದರಲ್ಲಿ ದೊಡ್ಡದಾಗಿ ಬೆಳವಣಿಗೆಯಾಗಿರುವ ಕೊಳಚೆ ಪ್ರದೇಶದಿಂದಾಗಿ ಕೆರೆ ಮುಚ್ಚಿಹೋಗಿ ಮಳೆಗಾಲದಲ್ಲಿ ಪದೇ ಪದೇ ಪ್ರವಾಹ ಪರಿಸ್ಥಿತಿ ಉಂಟಾಗುತ್ತಿದ್ದು, ಪ್ರವಾಹ ನಿಯಂತ್ರಿಸಲು ಮಳೆನೀರಿನ ಬೃಹತ್ ನೀರುಗಾಲುವೆ ನಿರ್ಮಾಣಕ್ಕೆ ತಾಂತ್ರಿಕವಾಗಿ ಯೋಗ್ಯವೆಂದು ಕಂಡು ಬರುವ ಮಾರ್ಗಗಳ ಆಯ್ಕೆಯಾದಗಲ್ಲೆಲ್ಲಾ ಇಲ್ಲಿನ ಸ್ಥಳೀಯರಿಂದ ವಿರೋಧ ವ್ಯಕ್ತವಾಗುತ್ತಿದ್ದು, ಈ ಸಮಸ್ಯೆಗೆ ಪರಿಹಾರ ಇಲ್ಲದಂತಾಗಿರುತ್ತದೆ. ಆದ್ದರಿಂದ, ಅಂಬೇಡ್ಕರ್ ನಗರ ಮತ್ತು ಲಕ್ಷ್ಮಣಮೂರ್ತಿನಗರದ ಕೆರೆ ಅಂಗಳದಲ್ಲಿನ ಸ್ಲಂ ನಿವಾಸಿಗಳ ಪುನರ್‌ವಸತಿಗಾಗಿ ವಸತಿ ಸಮುಚ್ಛಯ, ಆಟದ ಮೈದಾನ, ಆಸ್ಪತ್ರೆ, ಉದ್ಯಾನವನ, ಅಂಗನವಾಡಿ ಕಟ್ಟಡ ಹಾಗೂ ಇತರೇ ಮೂಲಭೂತ ಸೌಕರ್ಯಗಳನ್ನು ಒದಗಿಸಲು ವಿಜನಾಪುರ ಗ್ರಾಮದ ಸರ್ವೆ ನಂ–19/2 ರಲ್ಲಿನ 5.18 ಎಕರೆ ಖಾಲಿಯಿರುವ ಈ ಪ್ರದೇಶವನ್ನು ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನ ಪಡಸಿಕೊಳ್ಳಲು ಜಂಟಿ ಆಯುಕ್ತರು, ಮಹದೇವಪುರ ವಲಯ ರವರು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ, ಭೂಸ್ವಾಧೀನ ಪ್ರಸ್ತಾವನೆಯನ್ನು ಶಿಫಾರಸ್ಸು ಮಾಡಿರುತ್ತಾರೆ.

ಕಡತದಲ್ಲಿ ಲಭ್ಯ ದಾಖಲೆಗಳ ಮಾಹಿತಿಯಂತೆ ಈ ಜಮೀನಿಗೆ ಸಂಬಂಧಪಟ್ಟಂತೆ ಶ್ರೀ.ಬಿ.ಎಂ.ಮುನಿಶಾಮಪ್ಪ ಮತ್ತು ಮಕ್ಕಳು ಹಾಗೂ ಇತರೆ ವಾರಸುದಾರರ ನಡುವೆ ವಿವಾದವಿರುತ್ತದೆ ಹಾಗೂ ಈ ಜಮೀನಿನ ಮೇಲೆ ಗೇಣಿ ಅರ್ಜಿ ದಾಖಲಾಗಿದ್ದು, ಮಾನ್ಯ ಉಚ್ಛನ್ಯಾಯಾಲಯ ಮತ್ತು ಸರ್ವೋಚ್ಛ ನ್ಯಾಯಾಲಯಗಳಲ್ಲಿ ಈ ಪ್ರಕರಣಗಳ ವಿಚಾರಣೆ ನಡೆದು ದಾಖಲಾಗಿದ್ದು, ಪ್ರಕರಣ ಸಂಖ್ಯೆ: ಎಲ್.ಆರ್.ಎಫ್. ನಂ–2746/75–76 ರಂತೆ ಭೂನ್ಯಾಯಮಂಡಳಿ ಮುಂದೆ ಪ್ರಕರಣ ಪುನರ್ ಪರಿಶೀಲನೆಗಾಗಿ ಬಾಕಿ ಇರುವುದಾಗಿ ಕಂಡು ಬಂದಿರುತ್ತದೆ.

| ಕ್ರ. ಸಂ. | ಭೂಸ್ವಾಧೀನಕ್ಕೆ ಒಳಪಟ್ಟ ಆಸ್ತಿಯ ಮಾಲೀಕರ/ಖಾತೆದಾರರ ಹೆಸರು (ಆರ್.ಟಿ.ಯಂತೆ) | ಗ್ರಾಮ | ಸರ್ವೆ ನಂಬರ್ | ಒಟ್ಟು ವಿಸ್ತೀರ್ಣ (ಎಕರೆ) | ಆಕಾರ ರೂ.ಪೈ | ತರಹೆ | ಭೂಸ್ವಾಧೀನಕ್ಕೆ ಒಳಪಡುವ ವಿಸ್ತೀರ್ಣ(ಎಕರೆ) | ಚಕ್ಕುಬಂದಿ (ಸರ್ವೆ ನಂ) | | | |
|---|---|---|---|---|---|---|---|---|---|---|---|
| | | | | | | | | ಪೂ | ಪ | ಉ | ದ |
| 1 | ಬಿ.ಎಂ.ಮುನಿಶಾಮಪ್ಪ ಬಿನ್ ಮೇಸ್ತ್ರಿ ಮುನಿವೆಂಕಟಪ್ಪ | ವಿಜಿನಾಪುರ | 19/2 | 5.20 (–)0.02 (ಖರಾಬ್) =5.18 | 8.62 | ಖುಷ್ಕಿ | 5–18 | ಸ.ನ 23 | ಸ.ನಂ 18& 14 | ಸ.ನ 19/1 | ಸ.ನ 20 |

**ಭೂಸ್ವಾಧೀನಕ್ಕೆ ಒಳಪಡುವ ಸ್ವತ್ತುಗಳ ವಿವರ ಈ ಕೆಳಕಂಡಂತೆ ಇರುತ್ತದೆ**

ಮೇಲ್ಕಂಡ ಕೃಷಿ ಜಮೀನಿಗೆ 1894 ರ ಭುಸ್ವಾಧೀನ ಕಾಯ್ದೆಯನ್ವಯ, ಕೇಂದ್ರ ಮೌಲ್ಯಮಾಪನ ಸಮಿತಿಯ ಮಾರ್ಗಸೂಚಿ ದರದನ್ವಯ ಪಾವತಿಸಬೇಕಾದ ಪರಿಹಾರ ಹಾಗೂ ಇತರೇ ವೆಚ್ಚಗಳು ಈ ಕೆಳಕಂಡಂತೆ ಇರುತ್ತವೆ.

| **"ಅ"** | | |
|---|---|---|
| **ಕ್ರಮ ಸಂಖ್ಯೆ** | **ಕೇಂದ್ರ ಮೌಲ್ಯಮಾಪನ ಸಮಿತಿಯ ಮಾರ್ಗಸೂಚಿ ಬೆಲೆ** | **ಮೌಲ್ಯ (ರೂ.)** |
| 1 | ಅ) ಭೂಸ್ವಾಧೀನ ಪಡಿಸಿಕೊಳ್ಳುವ ವಿಸ್ತೀರ್ಣದ ಮೌಲ್ಯ (5.18 ಗುಂಟೆ ) ಎಕರೆ ಒಂದಕ್ಕೆ ರೂ.125 ಲಕ್ಷಗಳಂತೆ | 6,81,25,000/- |
| 2 | ಆ) ಭೂಸ್ವಾಧೀನ ಪಡಿಸಿಕೊಳ್ಳುವ ಸ್ವತ್ತಿನಲ್ಲಿನ ಕಟ್ಟಡದ ವಿಸ್ತೀರ್ಣ/ಮೊಬಲಗು | ಇಲ್ಲ |
| **ಒಟ್ಟು** | | **6,81,25,000/-** |
| 3 | ಈ ಮೊಬಲಗಿಗೆ 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(1) ರನ್ವಯ ಮಾರುಕಟ್ಟೆ ಬೆಲೆಯ ಮೇಲೆ ಸಾಲಿಯಾನ ಶೇಕಡ 12 ರಂತೆ ಹೆಚ್ಚುವರಿ ಮಾರುಕಟ್ಟೆ ಬೆಲೆ 1 ವರ್ಷಕ್ಕೆ | 81,75,000/- |
| 4 | 1894 ಭೂಸ್ವಾಧೀನ ಕಾಯ್ದೆಯ ಕಲಂ 23(2) ರನ್ವಯ ಶಾಸನಬದ್ದ ಭತ್ಯೆ ಶೇ.30 ರಂತೆ | 2,04,37,500/- |
| **ಒಟ್ಟು** | | **9,67,37.500/-** |

**ಇತರೇ ಸರ್ಕಾರಿ ವೆಚ್ಚಗಳು**

| | | |
|---|---|---|
| 1 | ಸಿಬ್ಬಂದಿ ವೆಚ್ಚ ಶೇಕಡ 10 ರಷ್ಟು | 96,73,750/- |
| 2 | ಆಡಿಟ್ ವೆಚ್ಚ ಶೇಕಡ 1 ರಷ್ಟು | 9,67,375/- |
| 3 | ಪ್ರಕಟಣಾ ವೆಚ್ಚ ಅಂದಾಜು | 1,00,000/- |
| **ಒಟ್ಟು** | | **1,07,41,125/-** |
| **(ಅ+ಆ)** | | **10,74,78,625/-** |

**(ಹತ್ತು ಕೋಟಿ ಎಪ್ಪತ್ನಾಲ್ಕು ಲಕ್ಷದ ಎಪ್ಪತ್ತೆಂಟು ಸಾವಿರದ ಆರುನೂರ ಇಪ್ಪತ್ತೈದು ರೂಗಳು ಮಾತ್ರ)**

ಮೇಲ್ಕಂಡ ಸ್ವತ್ತನ್ನು 1894 ರ ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನ ಪಡಿಸಿಕೊಳ್ಳಲು ತಗಲುವ ಭೂ-ಪರಿಹಾರದ ಮೊತ್ತ ಮತ್ತು ವೆಚ್ಚಗಳು ಸೇರಿ ಒಟ್ಟು ರೂ.10,74,78,625/- **(ಹತ್ತು ಕೋಟಿ ಎಪ್ಪತ್ನಾಲ್ಕು ಲಕ್ಷದ ಎಪ್ಪತ್ತೆಂಟು ಸಾವಿರದ ಆರುನೂರ ಇಪ್ಪತ್ತೈದು ರೂಗಳು ಮಾತ್ರ)** ಗಳನ್ನು 2011-12 ನೇ ಸಾಲಿನ ಆಯ-ವ್ಯಯದಲ್ಲಿ ಭರಿಸುವ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:9-3-2011 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 05-04-2011ರ ನಿರ್ಣಯ.

## ***-ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ-***

## ***061. ವಿಷಯದ ಸಂಖ್ಯೆ: ತೆಆಸ್ಥಾಸ/62/2011-12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಬಿ12(ಸಿ1)ಪಿಆರ್/51/2010-11, ದಿನಾಂಕ : 20-05-2011 ರಲ್ಲಿ ವಿವರಿಸಿರುವಂತೆ, ಮಾನ್ಯ ಆಯುಕ್ತರವರ ಅಧ್ಯಕ್ಷತೆಯಲ್ಲಿ ದಿ: 09-11-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಚಾಲಕರ ಹಾಗೂ ಶುಚಿಗಾರರ ವೆಲ್‌ಫೇರ್ ಅಸೋಸಿಯೇಷನ್ ಇವರ ಬೇಡಿಕೆಗಳ ಬಗ್ಗೆ ನಡೆದ ಸಭೆಯಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಚಾಲಕರು ಮತ್ತು ಶುಚಿಗಾರರುಗಳು ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ. ಅದನ್ನು ಪರಿಶೀಲಿಸಿ, ಬೋನಸ್ ನೀಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಕೌನ್ಸಿಲ್ ಸಭೆಯ ಮುಂದೆ ಒಂದು ವರದಿ ಸಲ್ಲಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಚಾಲಕರ ಹಾಗೂ ಶುಚಿಗಾರರ ಕ್ಷೇಮಾಭಿವೃದ್ಧಿ ಸಂಘ (ರಿ) ರವರು ದಿನಾಂಕ: 11–04–2011 ರಂದು ಮನವಿ ಸಲ್ಲಿಸಿ, ಡಾ॥ ಬಿ.ಆರ್. ಅಂಬೇಡ್ಕರ್ ದಿನಾಚರಣೆಯ ಅಂಗವಾಗಿ ಪೌರಕಾರ್ಮಿಕರು, ಗ್ಯಾಂಗ್‌ಮೆನ್, ತೋಟಗಾರಿಕೆ ಮಾಲಿ, ತೋಟಗಾರಿಕೆ ಮೇಸ್ತ್ರಿ, ಎ.ಎಲ್.ಓ / ಎಂ.ಸಿ. / ಸೈನೋಗ್ಯಾಸ್ / ಸ್ಪೆಷಲ್ ಗ್ಯಾಂಗ್‌ಮೆನ್, ಸ್ಯಾನಿಟರಿ ದಫೇದಾರ್‌ಗಳು ಹಾಗೂ 'ಡಿ' ಗ್ರೂಫ್ ನೌಕರರುಗಳಿಗೆ ರೂ. 5000–00 ಗಳ ಬೋನಸ್ ಮಂಜೂರು ಮಾಡಲು ದಿನಾಂಕ: 11–04–2011ರ ಕಛೇರಿ ಆದೇಶದಂತೆ ಆದೇಶಿಸಲಾಗಿರುತ್ತದೆ. ಆದ್ದರಿಂದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಚಾಲಕರುಗಳಿಗೆ ಡಾ॥ ಬಿ.ಆರ್. ಅಂಬೇಡ್ಕರ್ ದಿನಾಚರಣೆಯ ಅಂಗವಾಗಿ ಬೋನಸ್ ನೀಡಲು ಮನವಿ ಸಲ್ಲಿಸಿರುತ್ತಾರೆ.

ಈ ಸಂಬಂಧವಾಗಿ ಮುಖ್ಯ ಲೆಕ್ಕಾಧಿಕಾರಿಗಳ ಅಭಿಪ್ರಾಯ ವರದಿಯನ್ನು ಕೋರಲಾದಂತೆ, ಮುಖ್ಯ ಲೆಕ್ಕಾಧಿಕಾರಿಗಳ ವರದಿ ದಿನಾಂಕ: 27–12–2010ರ ರೀತ್ಯಾ ನೀಡಿರುವ ವರದಿಯಲ್ಲಿ ಹೆಚ್.ಆರ್.ಎಂ.ಎಸ್. ಮಾಹಿತಿ ಅನ್ವಯ 160 ಮಂದಿ ಚಾಲಕರು ಮತ್ತು 75 ಮಂದಿ ಶುಚಿಗಾರರು ಕಾರ್ಯನಿರ್ವಹಿಸುತ್ತಿದ್ದು, ಪ್ರತಿಯೊಬ್ಬರಿಗೂ ರೂ. 5000–00 ಗಳಂತೆ ಬೋನಸ್ ನೀಡಿದರೆ ರೂ. 11,75,000–00 ಗಳು ವೆಚ್ಚವಾಗುತ್ತದೆಯೆಂದು ತಿಳಿಸಿರುತ್ತಾರೆ.

ಡಾ॥ ಬಿ.ಆರ್. ಅಂಬೇಡ್ಕರ್ ದಿನಾಚರಣೆಯ ಅಂಗವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ 160 ಮಂದಿ ಚಾಲಕರುಗಳಿಗೆ ಮತ್ತು 75 ಮಂದಿ ಶುಚಿಗಾರರುಗಳಿಗೆ (ಪ್ರತಿಯೊಬ್ಬರಿಗೆ ರೂ. 5,000–00 ರಂತೆ) ಬೋನಸ್ ನೀಡುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ :–** **ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವರ್ಗದ ಚಾಲಕರು ಒಂದೇ ಮಾದರಿಯಾದ ಕೆಲಸವನ್ನೇ ನಿರ್ವಹಿಸುತ್ತಿರುವುದರಿಂದ, ಪರಿಶಿಷ್ಟ ಜಾತಿ/ಪಂಗಡದ ಚಾಲಕರಿಗೆ ಮಾತ್ರ ಬೋನಸ್ ನಿಡಿದಲ್ಲಿ, ಇತರೇ ವರ್ಗದ ಚಾಲಕರಲ್ಲಿ ಅಸಮಾಧಾನ ಉಂಟಾಗುವುದಲ್ಲದೇ ತಾರತಮ್ಯ ತೋರಿದಂತಾಗುವುದರಿಂದ ಆಯುಕ್ತರ ದಿನಾಂಕ : 20–05–2011ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ವಿಷಯವನ್ನು ಪುನರ್ ಪರಿಶೀಲಿಸುವುದು ಸೂಕ್ತವೆಂದು ಸಮಿತಿಯು ತೀರ್ಮಾನಿಸಲಾಯಿತು.**

## *07]. ವಿಷಯದ ಸಂಖ್ಯೆ: ತೆಆಸ್ಥಾಸ/63/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)/ಪಿಆರ್/373/10–11, ದಿನಾಂಕ : 10–2–2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್–63 (ಹಳೆಯದು–78) ರ ವ್ಯಾಪ್ತಿಯಲ್ಲಿನ ಹಳೆ ಸಿಮೆಂಟ್ರಿ ರಸ್ತೆಯಲ್ಲಿರುವ ಪಾಲಿಕೆಯ 1 ಎಕರೆ 15 ಗುಂಟೆ ಜಾಗವನ್ನು ಅನಾಥಾಶ್ರಮಕ್ಕೆ ಗುತ್ತಿಗೆಗೆ ನೀಡಲಾಗಿರುತ್ತದೆ. ಅನಾಥಾಶ್ರಮದ ಸುತ್ತಮುತ್ತಲಿನ ಜಾಗದಲ್ಲಿ ಮನೆಗಳನ್ನು ಕಟ್ಟಿಕೊಂಡು ಸುಮಾರು 25 ವರ್ಷಗಳಿಂದ ವಾಸಿಸುತ್ತಿರುವ ಕುಟುಂಬಗಳಿಗೆ ಹಕ್ಕು ಪತ್ರವನ್ನು ನೀಡುವ ಸಂಬಧ ಈ ಹಿಂದೆ ಆರ್ಥಿಕ ಸ್ಥಾಯಿ ಸಮಿತಿ ಅಧ್ಯಕ್ಷರ ಆದೇಶದ ಮೇರೆಗೆ ಸದರಿ ಜಾಗವನ್ನು ಕಂದಯ ಇಲಾಖೆ ಮತ್ತು ಕಾಮಗಾರಿ ಇಲಾಖೆಯವರು ಜಂಟಿಯಾಗಿ ಸ್ಥಳ ಪರಿಶೀಲಿಸಿ 64 ಫಲಾನುಭವಿಗಳಿದ್ದು, ಫಲಾನುಭವಿಗಳ ಪಟ್ಟಿಯ ಕ್ರಮ ಸಖ್ಯೆ 1 ರಿಂದ 57 ಮನೆಗಳಲ್ಲಿ ವಾಸವಿದ್ದು, ಕ್ರಮ ಸಂಖ್ಯೆ 58 ರಿಂದ 67 ರವರೆವಿಗೆ ಖಾಲಿ ನಿವೇಶನಗಳಾಗಿರುತ್ತವೆ.

ಸದರಿ ಸ್ಥಳದಲ್ಲಿ ಮನೆ ನಿರ್ಮಿಸಿ ವಾಸವಾಗಿರುವ ಫಲಾನುಭವಿಗಳಿಂದ ಪಡಿತರ ಚೀಟಿ ಪ್ರತಿ ಮತದಾರರ ಗುರುತಿನ ಚೀಟಿಗಳನ್ನು ಪಡೆದು ಕಡತದಲ್ಲಿ ಲಗತ್ತಿಸಿಕೊಂಡು ಮೇಲ್ಕಂಡ ಫಲಾನುಭವಿಗಳಿಗೆ ಹಕ್ಕು ಪತ್ರಗಳನ್ನು ನೀಡಲು ಕೋರಿರುತ್ತಾರೆ.

ಈ ಪ್ರದೇಶವು ಕೊಳಚೆ ಪ್ರದೇಶವೆಂದು ಘೋಷಣೆಯಾಗದ ಕಾರಣ, ಪ್ರಸಕ್ತ ಮಾರುಕಟ್ಟೆ ದರಗಳನ್ವಯ ಹಕ್ಕುಪತ್ರಗಳನ್ನು ವಿತರಿಸಲು ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೆ.22.75% ರ ಅನುದಾನದಲ್ಲಿ ಪಾಲಿಕೆ ವತಿಯಿಂದಲೇ ಭರಿಸುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ : 10–2–2011 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 15–03–2011 ರ ನಿರ್ಣಯ.

**ನಿರ್ಣಯ :– ದಿನಾಂಕ : 10–02–2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 15–03–2011ರ ನಿರ್ಣಯವನ್ನು ಒಪ್ಪಿದೆ.**

## *08]. ವಿಷಯದ ಸಂಖ್ಯೆ: ತೆಆಸ್ಥಾಸ/64/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)/ಪಿಆರ್/82/10–11, ದಿನಾಂಕ : 16–03–2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಗಜೀವನರಾಮ ನಗರ ವಲಯ ವಾರ್ಡ್–137, ರಾಯಪುರ ವಾರ್ಡಿನ ವ್ಯಾಪ್ತಿಗೆ ಬರುವ ರಾಯಪುರಂ ಮುಖ್ಯ ರಸ್ತೆಯಲ್ಲಿನ ಮುನಿಸಿಪಲ್ ಸಂಖ್ಯೆ:8/1–1 ರ ನಗರ ಪಾಲಿಕೆಯ ನಿವೇಶನ ಅಳತೆ 53X11.6=614.80 ಚದರ ಅಡಿ ವಿಸ್ತೀರ್ಣವುಳ್ಳ ಆಸ್ತಿಯನ್ನು ಕಾರ್ಯದರ್ಶಿಗಳು ಸಮತಾವಾದ ವಿದ್ಯಾ ಸಂಸ್ಥೆರವರಿಗೆ ರೂ.100/– ರಂತೆ ವಾರ್ಷಿಕ ಗುತ್ತಿಗೆ ಮೊತ್ತದಂತೆ 30 ವರ್ಷಗಳ ಅವಧಿಗೆ ದಿನಾಂಕ : 20–04–1980 ರಿಂದ ಗುತ್ತಿಗೆಗೆ ನಿಡಲಾಗಿರುತ್ತದೆ.

ಸದರಿ ಗುತ್ತಿಗೆ ಅವಧಿಯು ದಿನಾಂಕ:20–04–2010 ಕ್ಕೆ ಮುಕ್ತಾಯವಾಗಿದ್ದು, ಗುತ್ತಿಗೆದಾರರು ಈ ಆಸ್ತಿಯ ಗುತ್ತಿಗೆ ಮೊತ್ತ ಹಾಗೂ ಬಾಕಿ ಇರುವುದನ್ನು ಸೇರಿಸಿ, ದಿನಾಂಕ:07–12–2009 ರಲ್ಲಿ ರಶೀದಿ ಸಂಖ್ಯೆ:198538 ರೂ.500/– ಗಳನ್ನು 2005–2006 ರಿಂದ 2009–2010 ರವರೆಗೂ ಪಾವತಿ ಮಾಡಿರುತ್ತಾರೆ. ದಿನಾಂಕ:20–04–2010 ರಂದು ಗುತ್ತಿಗೆ ಅವಧಿಯು ಮುಕ್ತಾಯವಾಗಿರುವುದರಿಂದ ಈ ಆಸ್ತಿಯನ್ನು ಪಾಲಿಕೆಯ ವಶಕ್ಕೆ ತೆಗೆದುಕೊಳ್ಳಲು ದಿನಾಂಕ:19–07–2010 ರಲ್ಲಿ ಕೆ.ಪಿ.ಪಿ ಕಾಯ್ದೆ ಸೆಕ್ಷನ್ 4(1) ಅಡಿಯಲ್ಲಿ ನೋಟಿಸ್‌ನ್ನು ಜಾರಿ ಮಾಡಲಾಗಿದ್ದು, ಅದಕ್ಕೆ ಗುತ್ತಿಗೆದಾರರು ಉತ್ತರವಾಗಿ ಅರ್ಜಿಯೊಂದಿಗೆ ಶಾಲೆಯ ಭಾವಚಿತ್ರ, ನೋಂದಾವಣಿ ಪತ್ರ ಸಮತಾವಾದ ಪೇರೇಂಟ್ಸ್ ಟೀಚರ್ಸ್, ಅಸೋಸಿಯೇಷನ್ ಸಂಘದ ಕಾರ್ಯದರ್ಶಿಗಳು ಹಾಗೂ ಸದಸ್ಯರುಗಳ ಪತ್ರ ಹಾಗೂ ಈ ಶಾಲೆಯಲ್ಲಿ ಓದುತ್ತಿರುವ ಮಕ್ಕಳ ಬಗ್ಗೆ ವಿವರಗಳನ್ನು ನೀಡಿ ಈ ಆಸ್ತಿಗೆ ಗುತ್ತಿಗೆ ಅವಧಿಯನ್ನು ನವೀಕರಿಸಿಕೊಡಲು ಕೋರಿರುತ್ತಾರೆ.

ಈ ಬಗ್ಗೆ ಗುತ್ತಿಗೆದಾರರು ಗುತ್ತಿಗೆಗೆ ನೀಡಿರುವ ಜಾಗದಲ್ಲಿ ಬಡ ಮಕ್ಕಳಿಗಾಗಿ ಶಾಲೆಯನ್ನು ನಡೆಸುತ್ತಿರುವುದರಿಂದ ದಿನಾಂಕ:30–12–2010 ಉಪ ಆಯುಕ್ತರು (ಪಶ್ಚಿಮ) ರವರ ಆದೇಶದಂತೆ ಇವರಿಗೆ ಗುತ್ತಿಗೆಯ ಅವಧಿಯನ್ನು 5 ವರ್ಷಗಳಿಗೆ ದಿನಾಂಕ:21–04–2010 ರಿಂದ ಜಾರಿಗೆ ಬರುವಂತೆ ರೂ.500/– ಗಳ ಮಾಸಿಕ ಗುತ್ತಿಗೆ ಬಾಡಿಗೆಯಂತೆ ನಿಗದಿಪಡಿಸಿ ನವೀಕರಿಸಿಕೊಡಲು ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಂದ ಅನುಮೋದನೆ ಪಡೆಯುವ ಬಗ್ಗೆ ಕಡತವನ್ನು ಸಲ್ಲಿಸಿರುತ್ತಾರೆ.

ದಿನಾಂಕ:01–03–2002 ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ.100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಕರ್ನಾಟಕ ಮುನಿಸಿಪಲ್ ಕಾಯ್ದೆ ಅನ್ವಯ 1976 ಕಲಂ 176 ರ (6) ಹಾಗೂ (ಬಿ) ಪ್ರಕಾರ 1 ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಆಯುಕ್ತರಿಗೆ ಇರುತ್ತದೆ. ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯೊಡನೆ 3 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ. ಈ ಸ್ಥಾಯಿ

ಸಮಿತಿಗಳು ಮತ್ತು ಮಹಾನಗರ ಪಾಲಿಕೆಯ ಸಭೆಯ ಅನುಮೋದನೆಯೊಡನೆ 5 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ. ಗುತ್ತಿಗೆ ಅವಧಿಯು 5 ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಸರ್ಕಾರದ ಅನುಮೋದನೆ ಅವಶ್ಯವಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ನಇ 129 ಟಿ.ಎಂ.ಡಿ 2002 ದಿನಾಂಕ:02–06–2003 ರ ಪ್ರಕಾರ ನಗರ ಸ್ಥಳೀಯ ಸಂಸ್ಥೆಯು ತಮ್ಮ ಅಧಿಕಾರಗಳನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂಬುದಾಗಿದೆ. ಆದುದರಿಂದ ಉಪ ಆಯುಕ್ತರು (ಪಶ್ಚಿಮ) ರವರ ಶಿಫಾರಸ್ಸಿನಂತರ ಸದರಿ ಸಮತವಾದ ವಿದ್ಯಾ ಸಂಸ್ಥೆ ರವರಿಗೆ ಪ್ರಸ್ತುತ ಜಾಗವನ್ನು 2007 ರ ಸರ್ಕಾರದ ಮಾರ್ಗಸೂಚಿ ದರದಂತೆ ಚದರ ಅಡಿ ಒಂದಕ್ಕೆ ರೂ.950/– ಗಳಾಗಿದ್ದು, ಅದರಂತೆ ಲೆಕ್ಕಾಚಾರ ಮಾಡಿ 950X614,80=5,84,060/– ರೂ.ಗಳಾಗಿದ್ದು ಅದರಲ್ಲಿ 10% ರಷ್ಟು ಪರಿಗಣಿಸಿದಾಗ ರೂ.58,406/– ವಾರ್ಷಿಕವಾಗಿ ಹಾಗೂ ರೂ.4,870/– ಮಾಸಿಕ ಗುತ್ತಿಗೆ ಹಣವಾಗಿದ್ದು ಇದರಂತೆ 5 ವರ್ಷಗಳಿಗೆ ನವೀಕರಿಸುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:16–3–2011 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 05–04–2011ರ ನಿರ್ಣಯ.

**ನಿರ್ಣಯ :–** **ದಿನಾಂಕ : 16–03–2011ರ ಆಯುಕ್ತರ ಟಿಪ್ಪಣಿಯನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಒಪ್ಪಿಗೆ ದಿನಾಂಕ : 05–04–2011ರ ನಿರ್ಣಯವನ್ನು ಒಪ್ಪುತ್ತಾ, ಗುತ್ತಿಗೆಗೆ ನೀಡಿರುವ ಜಾಗದಲ್ಲಿ ಬಡ ಮಕ್ಕಳಿಗಾಗಿ ಶಾಲೆಯನ್ನು ನಡೆಸುತ್ತಿರುವುದನ್ನು ಪರಿಗಣಿಸಿ ಮಾಸಿಕ ರೂ.500/– (ಐದು ನೂರು) ಗುತ್ತಿಗೆ ಹಣವನ್ನು ನಿಗಧಿಪಡಿಸಿ ಐದು ವರ್ಷಗಳಿಗೆ ಗುತ್ತಿಗೆಗೆ ನೀಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.**

## *091. ವಿಷಯದ ಸಂಖ್ಯೆ: ತೆಲಆಸ್ಥಾಸ/65/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)/ಪಿಆರ್/101/10–11, ದಿನಾಂಕ : 18–3–2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ 97 (ಹಳೆ ಸಂಖ್ಯೆ.24) 7ನೇ ಅಡ್ಡರಸ್ತೆ, ಶ್ರೀರಾಮಪುರ, ಹರಿಜನ ಕಾಲೋನಿಯಲ್ಲಿರುವ 36X80=2880 ಚದರ ಅಡಿ ಸ್ವತ್ತನ್ನು ಪಾಲಿಕೆಯ ವತಿಯಿಂದ ಅಧ್ಯಕ್ಷರು ಆರುಂಧತಿ ವಿವಿದೋದ್ದೇಶ ಸಂಘದವರಿಗೆ ದಿನಾಂಕ:30–01–1979 ರಿಂದ 30 ವರ್ಷಗಳ ಅವಧಿಗೆ ವಾರ್ಷಿಕ ಗುತ್ತಿಗೆ ಮೊತ್ತ ರೂ.100/–ಗಳ ಆಧಾರದ ಮೇಲೆ ಗುತ್ತಿಗೆಗೆ ನೀಡಲಾಗಿದ್ದು, ಸದರಿ ಗುತ್ತಿಗೆ ಅವಧಿಯು ದಿನಾಂಕ:30–01–2009ಕ್ಕೆ ಮುಕ್ತಾಯಗೊಂಡಿರುತ್ತದೆ.

ಸದರಿ ಸಂಸ್ಥೆಯವರು ವಿದ್ಯಾಗಣಪತಿ ದೇವಸ್ಥಾನವನ್ನು ನಿರ್ಮಿಸಲಾಗಿದ್ದು, ರಾಷ್ಟ್ರಮಟ್ಟದಲ್ಲಿ ಸ್ವಾತಂತ್ರ್ಯ ದಿನಾಚರಣೆ, ಸರ್ವೋದಯ ದಿನಾಚರಣೆಯಂದು ಆಚರಿಸಿ, ಬಡಜನರಿಗೆ ಉಚಿತ ವೈದ್ಯಕೀಯ ಪರೀಕ್ಷೆ, ವೃದ್ಧರಿಗೆ ಊಟದ ಕಾರ್ಯಕ್ರಮವನ್ನು ಹಾಗೂ ಇತರೇ ಸಾಮಾಜಿಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿರುತ್ತಾರೆ.

ಸದರಿ ಸಂಸ್ಥೆಯವರು ಗುತ್ತಿಗೆಯ ಮೊತ್ತವನ್ನು ಇಲ್ಲಿಯವರೆವಿಗೂ ಪಾವತಿ ಮಾಡಿರುತ್ತಾರೆ. ಅವಧಿಯನ್ನು ನವೀಕರಿಸುವಂತೆ ಕೋರಿ ಅರ್ಜಿ ಸಲ್ಲಿಸಿದ್ದು, ಗುತ್ತಿಗೆ ಅವಧಿಯನ್ನು ಮುಂದುವರೆಸುವ ಸಂಬಂಧವಾಗಿ ಸದರಿ ಸ್ಥಳದ ಇಂದಿನ ಪ್ರಸಕ್ತ ಮಾರುಕಟ್ಟೆ ದರವು ಚದರ ಅಡಿ ಒಂದಕ್ಕೆ ರೂ.800/–ಗಳಿದ್ದು, ಸದರಿ ಸ್ವತ್ತಿನ ವಿಸ್ತೀರ್ಣವು 36X80=2880 ಚದರ ಅಡಿಗಳಾಗಿದ್ದು, ಅದರಂತೆ ಲೆಕ್ಕಾಚಾರ ಮಾಡಲಾಗಿ ಸ್ವತ್ತಿನ ಒಟ್ಟು ಮೌಲ್ಯ ರೂ.23,04,000–00ಗಳಾಗಿದ್ದು, ಅದರಲ್ಲಿ ಶೇ 10% ರಂತೆ ಪರಿಗಣಿಸಲಾಗಿ ವಾರ್ಷಿಕ ಗುತ್ತಿಗೆ ಮೌಲ್ಯವು ರೂ.2,30,400–00 ಗಳಾಗುತ್ತದೆ. ಮಾಸಿಕ ಗುತ್ತಿಗೆ ಮೊತ್ತವು ರೂ.19,200–00/–ಗಳಾಗುತ್ತದೆ. ಸದರಿ ಸಂಸ್ಥೆಯು ನೋಂದಾಯಿತ ಸಂಘವಾಗಿದ್ದು, ಸಾಮಾಜಿಕ ಕಾರ್ಯ ಚಟುವಟಿಕೆಗಳನ್ನು ನಡೆಸುತ್ತಿರುವ ಕಾರಣ ರಿಯಾಯಿತಿ ದರದಲ್ಲಿ ಸಾರ್ವಜನಿಕರಿಗೆ ಉಪಯೋಗವಾಗುವ ದೃಷ್ಟಿಯಿಂದ ಮಾಸಿಕ ಗುತ್ತಿಗೆ ಮೊತ್ತವನ್ನು ರೂ.2,000–00 ಗಳಿಗೆ ನಿಗಧಿಪಡಿಸಬಹುದಾಗಿದೆ ಎಂದು ವಲಯಾಧಿಕಾರಿಗಳು ತಮ್ಮ ಟಿಪ್ಪಣಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ದಿನಾಂಕ:01–03–2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಕರ್ನಾಟಕ ಮುನಿಸಿಪಲ್ ಕಾಯ್ದೆ ಅನ್ವಯ 1976 ಕಲಂ 176ರ (6) ಹಾಗು (ಬಿ) 2 ಪ್ರಕಾರ 1 ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಆಯುಕ್ತರಿಗೆ ಇರುತ್ತದೆ. ನಗರ ಯೋಜನೆ ಮತ್ತು ಅಭಿವೃದ್ಧಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯೊಡನೆ 3 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ. ಈ ಸ್ಥಾಯಿ ಸಮಿತಿಗಳು ಮತ್ತು ಮಹಾನಗರ ಪಾಲಿಕೆಯ ಸಭೆಯ ಅನುಮೋದನೆಯೊಡನೆ 5 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ. ಗುತ್ತಿಗೆ ಅವಧಿಯು 5 ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಸರ್ಕಾರದ ಅನುಮೋದನೆ ಅವಶ್ಯವಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ ನಅಇ 129 ಟಿ,ಎಂ,ಡಿ 2002 ದಿನಾಂಕ: 02/06/2003 ರ ಪ್ರಕಾರ ನಗರ ಸ್ಥಳೀಯ ಸಂಸ್ಥೆಯು ತಮ್ಮ ಅಧಿಕಾರಗಳನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂಬುದಾಗಿದೆ.

ಈ ಮೇಲ್ಕಂಡ ಅಂಶಗಳನ್ನು ಪರಿಗಣಿಸಿ ಗುತ್ತಿಗೆಯನ್ನು ಸದರಿ ಸಂಸ್ಥೆಯವರಿಗೆ 5 ವರ್ಷದ ಅವಧಿಗೆ ಕರಾರು ಪತ್ರ ನೋಂದಾಯಿಸಿದ ದಿನಾಂಕದಿಂದ ಗುತ್ತಿಗೆಯನ್ನು ನವೀಕರಿಸುವ ಸಂಬಂಧವಾಗಿ ಗುತ್ತಿಗೆ ಹಣವನ್ನು ನಿಗದಿಪಡಿಸಿ ಕರಾರು ನೊಂದಾಯಿಸಿರುವ ದಿನಾಂಕದಿಂದ 5 ವರ್ಷಗಳ ಅವಧಿಗೆ ನವೀಕರಿಸುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:18–3–2011 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 05–04–2011ರ ನಿರ್ಣಯ.

**ನಿರ್ಣಯ :–** **ಆಯುಕ್ತರ ದಿನಾಂಕ : 18–03–2010ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 05–04–2011ರ ನಿರ್ಣಯವನ್ನು ಒಪ್ಪುತ್ತಾ, ಸದರಿ ಸಂಸ್ಥೆಯವರು ವಿದ್ಯಾಗಣಪತಿ ದೇವಸ್ಥಾನವನ್ನು ನಿರ್ಮಿಸಲಾಗಿದ್ದು, ರಾಷ್ಟ್ರಮಟ್ಟದಲ್ಲಿ ಸ್ವಾತಂತ್ರ್ಯ ದಿನಾಚರಣೆ, ಸರ್ವೋದಯ ದಿನಾಚರಣೆ ಆಚರಿಸಿ, ಬಡ ಜನವರಿಗೆ ಉಚಿತ ವೈದ್ಯಕೀಯ ಪರೀಕ್ಷೆ, ವೃದ್ಧರಿಗೆ ಊಟದ ಕಾರ್ಯಕ್ರಮವನ್ನು ಹಾಗೂ ಇತರೇ ಸಾಮಾಜಿಕ ಕಾರ್ಯಕ್ರಮಗಳನು ನಡೆಸಿಕೊಂಡು ಬಂದಿರುತ್ತಾರೆಂದು ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವುದನ್ನು ಪರಿಗಣಿಸಿ ಗುತ್ತಿಗೆ ಹಣ ಮಾಸಿಕ ಬದಲು ವಾರ್ಷಿಕ ರೂ.2000/– (ಎರಡು ಸಾವಿರ) ಗಳನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.**

## *10]. ವಿಷಯದ ಸಂಖ್ಯೆ: ತೆಆಸ್ಥಾಸ/66/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)/ಪಿ.ಆರ್/15/08–09, ದಿನಾಂಕ: 16–3–2011 ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ–85ರಲ್ಲಿ 100 ವಸತಿ ಗೃಹಗಳಿದ್ದು, ಇವರುಗಳಿಗೆ ಹೆಚ್‌ಯುಡಿ/282/ಎಂಎನ್‌ಜಿ/78 ದಿನಾಂಕ:15–10–1979ರ ಸರ್ಕಾರದ ಆದೇಶದಂತೆ 100 ವಸತಿ ಗೃಹಗಳ ಪೈಕಿ 46 ವಸತಿ ಗೃಹದ ಹಂಚಿಕೆದಾರರು ಸರ್ಕಾರವು ನಿಗಧಿಪಡಿಸಿದ ಕ್ರಯದ ಮೊಬಲಗನ್ನು ಪಾವತಿಸಿ ಕ್ರಯ ಪಡೆದಿದ್ದು, ಉಳಿದ 54 ಜನ ಹಂಚಿಕೆದಾರರಿಗೆ 1 ವರ್ಷ ಕಾಲಾವಕಾಶ ನೀಡಿದ್ದರೂ ಕ್ರಯಕ್ಕೆ ಪಡೆದಿರುವುದಿಲ್ಲ.

ಇದೇ ರೀತಿಯ ಮತ್ತೊಂದು ಪ್ರಕರಣಗಳಲ್ಲಿ ನಅಇ/40/ಎಂಎನ್‌ಜಿ/2002 ದಿನಾಂಕ20–05–2006ರ ಆದೇಶದಲ್ಲಿ ಮರ್ಫಿಟೌನ್ ವ್ಯಾಪ್ತಿಯಲ್ಲಿನ 466 ವಸತಿ ಗೃಹಗಳ ಪೈಕಿ 344 ಜನ ಫಲಾನುಭವಿಗಳಿಗೆ ಕಾಲ ವಿಸ್ತರಣೆ ಆದೇಶ ಅನ್ವಯಿಸಿ ಆದೇಶ ಮುಕ್ತಾಯಗೊಂಡು ಮುಂದುವರೆದ ಅವಧಿಗೆ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ವಿಧಿಸಲಾಗುವ ರೀತ್ಯಾ 1ನೇ ವರ್ಷಕ್ಕೆ ಶೇ 9% ರಷ್ಟು ಮುಂದುವರೆದ ವರ್ಷಕ್ಕೆ ಶೇ 15% ರಷ್ಟು ಮೂಲ ಕ್ರಯದ ಹಣದ ಮೇಲೆ ಬಡ್ಡಿ ವಿಧಿಸಿ, ಸದರಿ ಮೊತ್ತವನ್ನು

ಪಾವತಿಸಲು 60 ದಿವಸಗಳ ಕಾಲಾವಕಾಶ ಕಲ್ಪಿಸಲಾಗಿದ್ದು, ಇದೇ ರೀತಿಯಲ್ಲಿ ತಮಗೂ ಅಧಿಕೃತ ಕ್ರಯ ಪತ್ರ ನೀಡಬೇಕೆಂದು ಕೋರಿರುವ ಮನವಿಯ ಬಗ್ಗೆ ಅಪರ ಆಯುಕ್ತರು (ಪೂರ್ವ) ರವರು ಮಾನವೀಯ ದೃಷ್ಟಿಯಿಂದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿ ಆದೇಶ ಪಡೆದು ವಸತಿ ಗೃಹಗಳನ್ನು ಹಂಚಿಕೆ ಮಾಡಬಹುದೆಂದು ಶಿಫಾರಸ್ಸು ಮಾಡಿದ್ದು 90 ದಿವಸಗಳ ಕಾಲಾವಕಾಶ ಕಲ್ಪಿಸಿ ಸರ್ಕಾರದ ಅನುಮೋದನೆ ಪಡೆದು ಕಳುಹಿಸುವಂತೆ ದಿನಾಂಕ:17-11-2009 ರಲ್ಲಿ ಸರ್ಕಾರವನ್ನು ಕೋರಲಾಗಿತ್ತು.

ಈ ಮೇರೆಗೆ ಸರ್ಕಾರವು ದಿನಾಂಕ:12-03-2010ರ ಪತ್ರದಲ್ಲಿ ದಿನಾಂಕ:17-11-2009ರ ಪ್ರಸ್ತಾವನೆಯನ್ನು ಪರಿಶೀಲಿಸಲು ಪ್ರಸ್ತಾವನೆಗೆ ಈ ಹಿಂದೆ ಆಡಳಿತಗಾರರ ನಿರ್ಣಯವಾಗಿರುವ ಪ್ರತಿ 100 ಫಲಾನುಭವಿಗಳ ಪೈಕಿ ಉಳಿದ 54 ಫಲಾನುಭವಿಗಳ ವಿವರ, 54 ಜನ ಹಂಚಿಕೆದಾರರು ಕ್ರಯಕ್ಕೆ ಪಡೆಯದೇ ಇರುವುದಕ್ಕೆ ಕಾರಣಗಳು, ಫಲಾನುಭವಿಗಳಿಗೆ ಹಂಚಿಕೆ ಮಾಡಿರುವ ವಸತಿ ಗೃಹದ ವಿವರಗಳು ಮತ್ತು ಅಳತೆ ವಿವರಗಳನ್ನು ಒದಗಿಸಲು ನಿರ್ದೇಶನ ನೀಡಿದ್ದು, ಈ ಮೇರೆಗೆ ಸರ್ಕಾರವು ಕೋರಿರುವ ಅಂಶಗಳಿಗೆ ಮಾಹಿತಿ ಮತ್ತು ದಾಖಲಾತಿಗಳನ್ನು ಲಗತ್ತಿಸಿ ಸರ್ಕಾರದ ಅನುಮೋದನೆ ಕೋರಲಾಗಿತ್ತು.

ದಿನಾಂಕ:29-03-2010ರ ಮಾನ್ಯ ಮುಖ್ಯ ಕಾರ್ಯದರ್ಶಿಗಳು ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ನಡೆದ ಸಲಹಾ ಸಮಿತಿ ಮುಂದೆ ಮಂಡಿಸಲು ಸೂಚಿಸಿದ್ದು, ಈ ಮೇರೆಗೆ ಸಲಹಾ ಸಮಿತಿ ಮುಂದೆ ಮಂಡಿಸಿ ಸಲಹಾ ಸಮಿತಿ ಸಭೆಯಲ್ಲಿ ಇವರುಗಳು ಕೊಡಬೇಕಾಗಿರುವ ಮೊತ್ತವನ್ನು 22.75% ಅನುದಾನದಿಂದ ಭರಿಸಿ ಕ್ರಯಪತ್ರಗಳನ್ನು ಮಾಡಿಕೊಡುವಂತೆ ನಿರ್ಣಯಿಸಲಾಗಿರುತ್ತದೆ.

ಆದರೆ ಸರ್ಕಾರವು ತನ್ನ ಪತ್ರದ ಸಂಖ್ಯೆ:ನಅಇ115 ಎಂಎನ್‌ಜಿ 2008 ದಿನಾಂಕ:21-02-2011 ರಂದು ಪತ್ರ ಬರೆದು 54 ಜನ ಹಂಚಿಕೆದಾರರಿಗೆ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ವಿಧಿಸಲಾಗುವ ಕಾಲ ವಿಸ್ತರಣೆ ಆದೇಶ ಅನ್ವಯಿಸಿ ಕ್ರಯ ಪತ್ರ ನೀಡುವ ಪ್ರಸ್ತಾವನೆಗೆ ಪಾಲಿಕೆ ಸಭೆಯಲ್ಲಿ ನಿರ್ಣಯವಾಗಿಲ್ಲವೆಂದು ಪಾಲಿಕೆಯ ನಿರ್ಣಯದೊಂದಿಗೆ ಮರು ಮಂಡಿಸಲು ನಿರ್ದೇಶನ ನೀಡಿರುತ್ತದೆ.

ಆದ್ದರಿಂದ ವಾರ್ಡ್-85, ಸರ್ವಜ್ಞನಗರ ಪೌರ ಕಾರ್ಮಿಕರ ಕಾಲೋನಿಯಲ್ಲಿ 100 ವಸತಿ ಗೃಹಗಳಲ್ಲಿ ವಾಸವಾಗಿರುವ 100 ವಸತಿ ಗೃಹಗಳ ಪೈಕಿ ಕ್ರಯದ ಮೊತ್ತವನ್ನು ಪಾವತಿಸಿದ 54 ಜನ ಹಂಚಿಕೆದಾರರಿಗೆ ಅವರು ಕೊಡಬೇಕಾಗಿರುವ ಮೊತ್ತವನ್ನು 22.75% ಅನುದಾನದಿಂದ ಭರಿಸಿ ಕ್ರಯ ಪತ್ರಗಳನ್ನು ಮಾಡಿಕೊಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ : 16-03-2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 05-04-2011ರ ನಿರ್ಣಯ.

**ನಿರ್ಣಯ :- ದಿನಾಂಕ : 16-03-2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಬಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 05-04-2011ರ ನಿರ್ಣಯವನ್ನು ಒಪ್ಪಿದೆ.**

## *11]. ವಿಷಯದ ಸಂಖ್ಯೆ: ತೆಆಸ್ಥಾಸ/67/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಎ3(2)/ಪಿ.ಆರ್/154/10-11, ದಿನಾಂಕ ಃ 05-03-2011 ರಲ್ಲಿ ವಿವರಿಸಿರುವಂತೆ, ಸಹ ಕಂದಾಯ ಅಧಿಕಾರಿ (ಪುಲಿಕೇಶಿನಗರ) ಉಪ ವಿಭಾಗಕ್ಕೆ ಬರುವ ವಾರ್ಡ್-61 ಎಸ್.ಕೆ.ಗಾರ್ಡನ್‌ನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸ್ವತ್ತಿನ ಅಳತೆ 100X200 ಅಡಿಗಳ ನಿವೇಶನವನ್ನು 30 ವರ್ಷಗಳಿಗೆ ದಿನಾಂಕ : 02-10-1975 ರಿಂದ 01-10-2005ರ ವರೆವಿಗೆ ಅಧ್ಯಕ್ಷರು ಕುಂಬಾರ ಕರಕುಶಲ ಕಾರ್ಮಿಕರ ಸಂಘ ನ್ಯೂ ಪಾಟರಿ ಟೌನ್, ವಾರ್ಡ್-61 ಬೆಂಗಳೂರು-05 ರವರಿಗೆ ಸರ್ಕಾರದ ಆದೇಶ ಸಂಖ್ಯೆ:ಹೆಚ್.ಎಂ.ಎ/332/ಎಂ.ಎನ್.ಜಿ/75 ದಿನಾಂಕ:30-08-1975ರಲ್ಲಿ ವಾರ್ಷಿಕ ರೂ.500/-ಗಳ ಗುತ್ತಿಗೆ ಆಧಾರದ ಮೇಲೆ ನೀಡಲಾಗಿದ್ದು, ದಿನಾಂಕ : 01-10-2005 ರಂದು ಗುತ್ತಿಗೆಗೆ ನೀಡಿರುವ ಅವಧಿಯು ಪೂರ್ಣಗೊಂಡಿರುವುದರಿಂದ ನಗರ ಪಾಲಿಕೆ ಸ್ವತ್ತನ್ನು ನಗರ ಪಾಲಿಕೆಗೆ ಹಿಂದಿರುಗಿಸಲು ನೋಟೀಸ್ ಜಾರಿ ಮಾಡಲಾಗಿರುತ್ತದೆ.

ದಿನಾಂಕ:02–08–2010 ರಂದು ಸದರಿ ಸಂಘದವರು ಗುತ್ತಿಗೆ ಅವಧಿಯನ್ನು ನವೀಕರಿಸಲು ಶೇ 50% ರಷ್ಟು ರಿಯಾಯಿತಿ ನೀಡಿ ಕ್ರಯಕ್ಕೆ ಮಂಜೂರು ಮಾಡಲು ಸರ್ಕಾರವನ್ನು ಕೋರಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ15/ಎಂಎನ್‌ಜಿ/2006 ದಿನಾಂಕ:06–05–2006 ರಂತೆ ಸದರಿಯವರ ಮನವಿಯನ್ನು ತಿರಸ್ಕರಿಸಿರುತ್ತಾರೆ.

ಅದರಂತೆ ಗುತ್ತಿಗೆಗೆ ನೀಡಿರುವ ನಗರ ಪಾಲಿಕೆ ಸ್ವತ್ತನ್ನು ಪಾಲಿಕೆ ವಶಕ್ಕೆ ಪಡೆಯಲು ಮುಖ್ಯ ಅಭಿಯಂತರರು (ಪೂರ್ವ) ಹಾಗೂ ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ) ರವರಿಗೆ ಕಳುಹಿಸಿಕೊಡಲಾಗಿದ್ದು, ಈ ಮಧ್ಯೆ ನಗರ ಪಾಲಿಕೆ ಸ್ವತ್ತನ್ನು ಹಿಂದಿರುಗಿಸಲು ಉಪ ಆಯುಕ್ತರು (ಆಸ್ತಿಗಳು) ರವರ ಆದೇಶದ ಸಂಖ್ಯೆ:ಅ.ಆ.ಸ/ಇ.ಸಿ/ಪಿಆರ್/16/10–11, ದಿನಾಂಕ:29–07–2010 ರಂತೆ ಕೆ.ಪಿ.ಪಿ.ಕಾಯ್ದೆ 4 ರಂತೆ ಅಧ್ಯಕ್ಷರು ಕುಂಬಾರ ಕರಕುಶಲ ಸಂಘಕ್ಕೆ ನೋಟೀಸ್ ಜಾರಿಗೊಳಿಸಿದ್ದು, ಪುನ: ದಿನಾಂಕ: 17–09–2010 ರಂದು ಕೆ.ಪಿ.ಪಿ.ಕಾಯ್ದೆ 5 ಫಾರಂ 'ಬಿ' ರ ಪ್ರಕಾರ ನಗರ ಪಾಲಿಕೆ ಸ್ವತ್ತನ್ನು ಹಿಂದಿರುಗಿಸಲು ನೋಟೀಸ್ ಜಾರಿಮಾಡಲಾಗಿರುತ್ತದೆ. ಈ ಮಧ್ಯೆ ಶ್ರೀ.ಕಣ್ಣನ್ ಮತ್ತು ಶ್ರೀ. ವೆಂಕಟರಾಮಯ್ಯ ಶೆಟ್ಟಿ ಎಂಬುವವರು ಸದರಿಯವರಿಗೆ ನಗರ ಪಾಲಿಕೆ ವತಿಯಿಂದ ನೀಡಿರುವ ಗುತ್ತಿಗೆ ಅವಧಿಯು ಮುಗಿದಿರುವುದರಿಂದ ಸ್ವತ್ತನ್ನು ಹಿಂಪಡೆಯಲು ದೂರು ಅರ್ಜಿ ಸಹ ಸಲ್ಲಿಸಿರುತ್ತಾರೆ.

ಈ ಮಧ್ಯೆ ಸಂಘದವರು ಮಾನ್ಯ ಸಚಿವರ ಶಿಫಾರಸ್ಸು ಪತ್ರವನ್ನು ನೀಡಿ ಸದರಿ ಸಂಘಕ್ಕೆ ಮುಂದಿನ 50 ವರ್ಷಗಳ ಅವಧಿಗೆ ಗುತ್ತಿಗೆ ಅವಧಿ ನವೀಕರಿಸಲು ಕೋರಿರುತ್ತಾರೆ. ಮಾನ್ಯ ಆಯುಕ್ತರವರು ಸಂಖ್ಯೆ:ಡಿ.ಎಸ್.ಆರ್/5262/10–11 ದಿನಾಂಕ:22–11–2010ರ ಆದೇಶದಂತೆ ಸದರಿ ಗುತ್ತಿಗೆಗೆ ನೀಡಿದ್ದ ಸ್ವತ್ತನ್ನು ಕ್ರಯಕ್ಕೆ ನೀಡಲು ಕೋರಿರುವುದನ್ನು ತಿರಸ್ಕರಿಸಿ ಗುತ್ತಿಗೆ ಅವಧಿ ಮುಗಿದಿರುವ ದಿನಾಂಕದಿಂದ 5 ವರ್ಷದ ಅವಧಿಗೆ ನವೀಕರಿಸಲು ಪ್ರಸ್ತಾವನೆಯನ್ನು ಅನುಮೋದಿಸಿರುತ್ತಾರೆ.

ಪ್ರಸ್ತುತ ಸ್ವತ್ತಿನ ಮಾರುಕಟ್ಟೆ ದರವು ವಸತಿಗೆ ಚದರ ಅಡಿ 1ಕ್ಕೆ ರೂ.2200/– ಗಳಿದ್ದು, ಸ್ವತ್ತಿನ ವಿಸ್ತೀರ್ಣ 100*200=20,000 ಚದರ ಅಡಿಗಳಿದ್ದು, ಸ್ವತ್ತಿನ ಮೌಲ್ಯ ರೂ.4,40,00,000/–ಗಳಾಗುತ್ತದೆ. ಮಾರುಕಟ್ಟೆ ದರದ ಶೇ 10% ರಂತೆ ಪರಿಗಣಿಸಿದಲ್ಲಿ ವಾರ್ಷಿಕ 44,00,000/–ರೂಗಳಾಗುತ್ತದೆ. ಮಾಸಿಕ ರೂ.3,66,667/–ಗಳಾಗುತ್ತದೆ. ಆದ್ದರಿಂದ ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ ಕರಾರು ನೊಂದಾಯಿಸುವ ದಿನಾಂಕದವರೆಗೆ ಹಳೆಯ ದರದಂತೆ, ನಂತರದ 5 ವರ್ಷಗಳಿಗೆ ಪ್ರಸಕ್ತ ಮಾರುಕಟ್ಟೆ ದರದಂತೆ ಗುತ್ತಿಗೆ ಅವಧಿಯನ್ನು ನವೀಕರಿಸುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ : 05–03–2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 15–03–2011 ರ ನಿರ್ಣಯ.

***–ಮುಂದೂಡಿದೆ–***

## ***12]. ವಿಷಯದ ಸಂಖ್ಯೆ: ತೆಆಸ್ಥಾಸ/68/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಅಆ(ಕ/ಆ/ಆ)ಪಿಎಸ್‌ಆರ್(4)03/11–12, ದಿನಾಂಕ : 23–04–2011 ರಲ್ಲಿ ವಿವರಿಸಿರುವಂತೆ, ಶ್ರೀ ಪಿ.ಎನ್. ಸದಾಶಿವ, ಅಧ್ಯಕ್ಷರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ಶ್ರೀಮತಿ ಎಂ.ಜಿ. ಜಯರತ್ನ, ಶ್ರೀರಾಮ ಮಂದಿರ ವಾರ್ಡ್ ಸಂಖ್ಯೆ–108 ರ ಸದಸ್ಯರು, ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸದಸ್ಯರು, ಆದ ಇವರು ತಮ್ಮ ಪತ್ರದಲ್ಲಿ ರಾಜಾಜಿನಗರ ಪದ್ಮಭೂಷಣ ಡಾ॥ ರಾಜ್ ಕುಮಾರ್ ಪ್ರತಿಷ್ಠಾಪನ ಮಂಡಳಿ (ರಿ) ರವರ ವತಿಯಿಂದ ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು – 10 ಇಲ್ಲಿ ಪದ್ಮಭೂಷಣ ಡಾ॥ ರಾಜ್‌ಕುಮಾರ್ ರವರ ಕಂಚಿನ ಪ್ರತಿಮೆಯನ್ನು ಪ್ರತಿಷ್ಠಾಪಿಸುವ ಕಾಮಗಾರಿಯನ್ನು 21.00 ಲಕ್ಷಗಳ ವೆಚ್ಚದಲ್ಲಿ ಕೈಗೊಳ್ಳಲಾಗುತ್ತಿದ್ದು, ಸದರಿ ಕಾಮಗಾರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವತಿಯಿಂದ ಧನಸಹಾಯ ಮಂಜೂರು ಮಾಡಲು ಕೋರಿರುತ್ತರೆಂದು ತಿಳಿಸುತ್ತಾ, ರಾಜಾಜಿನಗರ ಪದ್ಮಭೂಷಣ ಡಾ॥ ರಾಜ್ ಕುಮಾರ್ ಪ್ರತಿಷ್ಠಾಪನ ಮಂಡಳಿ (ರಿ), ರವರಿಗೆ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಸೂಕ್ತ ಅನುದಾನ ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

2010–11 ನೇ ಸಾಲಿನ ಪಾಲಿಕೆ ಆಯವ್ಯಯದ "ಕೊಡುಗೆ ಮತ್ತು ಸಹಾಯಾನುದಾನ" ಲೆಕ್ಕ ಶೀರ್ಷಿಕೆ ಅಡಿ ರೂ.10.00 ಕೋಟಿಗಳನ್ನು ಮೀಸಲಿರಿಸಲಾಗಿದ್ದು, ಈ ಪೈಕಿ ದಿನಾಂಕ: 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ. 176.50 ಲಕ್ಷಗಳು ಈಗಾಗಲೇ ಹಂಚಿಕೆಯಾಗಿದ್ದು, ಸಹಾಯಧನದ ಪ್ರಸ್ತಾವನೆಗಳಿಗೆ ಹಣದ ಲಭ್ಯವಿರುವುದಿಲ್ಲ.

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 22–03–2011 ರ ಸಭೆಯ ತೀರ್ಮಾನದಂತೆ ಕ್ರ.ಸಂ. (41) ರಲ್ಲಿ ಸಂಘ ಸಂಸ್ಥೆಗಳಿಗೆ ಹೆಚ್ಚುವರಿ ಅನುದಾನಕ್ಕಾಗಿ ರೂ. 100.00 ಲಕ್ಷಗಳ ಮರು ಹೊಂದಾಣಿಕೆ ಮಾಡಿಕೊಂಡು 2010–11 ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲು ಸಮಿತಿಯು ತೀರ್ಮಾನಿಸಲಾಗಿರುತ್ತದೆ.

2010–11ನೇ ಸಾಲಿನ ಆರ್ಥಿಕ ಸಾಲು ಮುಕ್ತಾಯವಾಗಿರುತ್ತದೆ. ಪ್ರಸಕ್ತ 2011–12 ನೇ ಸಾಲಿನ ಪಾಲಿಕೆಯ ಆಯವ್ಯಯವು ತಹಲ್‌ವರೆವಿಗೂ ಮಂಡನೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :–** **ದಿನಾಂಕ 23–04–2011ರ ಆಯುಕ್ತರ ಟಿಪ್ಪಣಿಯನ್ನು ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ದಿನಾಂಕ : 08–04–2011 ರಂದು ವಿಷಯದ ಸಂಖ್ಯೆ :ತೆ.ಆ.ಸ್ಥಾ.ಸ/26/2011–12 ರಲ್ಲಿ ತೆಗೆದುಕೊಂಡಿರುವ ನಿರ್ಣಯದಂತೆ ಕ್ರಮಕೈಗೊಳ್ಳುವುದೆಂದು ಸಮಿತಿಯು ತಿರ್ಮಾನಿಸಲಾಯಿತು.**

## *13]. ವಿಷಯದ ಸಂಖ್ಯೆ: ತೆಆಸ್ಥಾಸ/69/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಅಆ(ಕ/ಆ)ಪಿಎಸ್ಆರ್(4)05/10–11, ದಿನಾಂಕ : 23–04–2011 ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎಸ್. ಸದಾಶಿವ, ಅಧ್ಯಕ್ಷರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ಶ್ರೀ ಎ.ಕೆ. ಉಮೇಶ್, ನಿರ್ದೇಶಕರು ಎಫ್.ಎ.ಸಿ.ಡಿ. ಫೌಂಡೇಷನ್ ಫಾರ್ ಆರ್ಟ್ ಅಂಡ್ ಕಲ್ಚರ್ ಫಾರ್ ಡೀಫ್ (ರಿ) ರವರು ಸಲ್ಲಿಸಿರುವ ಪತ್ರವನ್ನು ಲಗತ್ತಿಸುತ್ತಾ, ಸದರಿಯವರು ತಮ್ಮ ಪತ್ರದಲ್ಲಿ ತಮ್ಮ ಸಂಸ್ಥೆಯ ವಿಕಲ ಚೇತನರ ಅಭಿವೃದ್ಧಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ 2010–11 ನೇ ಸಾಲಿನ ಆಯವ್ಯಯದಲ್ಲಿ ರೂ. 1.00 ಲಕ್ಷಗಳನ್ನು ಮೀಸಲಿಟ್ಟಿರುವ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆಂದು ತಿಳಿಸುತ್ತಾ, ಫಾಂಡೇಷನ್ ಫಾರ್ ಆರ್ಟ್ ಅಂಡ್ ಕಲ್ಚರ್ ಫಾರ್ ಡೀಫ್ (ರಿ) ರವರಿಗೆ 2010–11ನೇ ಸಾಲಿನ ಆಯವ್ಯಯದಲ್ಲಿ ಕಾಯ್ದಿರಿಸಲಾಗಿರುವ ರೂ. 1.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

2010–11ನೇ ಸಾಲಿನ ಆರ್ಥಿಕ ಸಾಲು ಮುಕ್ತಾಯವಾಗಿರುತ್ತದೆ. ಪ್ರಸಕ್ತ 2011–12 ನೇ ಸಾಲಿನ ಪಾಲಿಕೆಯ ಆಯವ್ಯಯವು ತಹಲ್‌ವರೆವಿಗೂ ಮಂಡನೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ

ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (59) ರಲ್ಲಿ "ಫೌಂಡೇಷನ್ ಫಾರ್ ಆರ್ಟ್ ಅಂಡ್ ಕಲ್ಚರ್ ಫಾರ್ ಡೀಫ್ (ರಿ)" ರವರಿಗೆ ನಿಗಧಿ ಪಡಿಸಲಾಗಿರುವ ರೂ. 1.00 ಲಕ್ಷ (ರೂ. ಒಂದು ಲಕ್ಷಗಳು ಮಾತ್ರ) ಗಳನ್ನು ಮಂಜೂರು ಮಾಡುವ ಸಂಬಂಧ, 2010–11ನೇ ಸಾಲಿನ ಆರ್ಥಿಕ ಸಾಲು ಮುಕ್ತಾಯವಾತರುವುದರಿಂದ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ನಿರ್ಣಯ :– ದಿನಾಂಕ 23–04–2011ರ ಆಯುಕ್ತರ ಟಿಪ್ಪಣಿಯನ್ನು ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ : 08–04–2011 ರಂದು ವಿಷಯದ ಸಂಖ್ಯೆ :ತೆ.ಆ.ಸ್ಥಾ.ಸ/28/2011–12 ರಲ್ಲಿ ತೆಗೆದುಕೊಂಡಿರುವ ನಿರ್ಣಯದಂತೆ ಕ್ರಮಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

## *14]. ವಿಷಯದ ಸಂಖ್ಯೆ: ತೆಆಸ್ಥಾಸ/70/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಅಆ(ಕ/ಆ/ಆ)ಪಿಎಸ್‌ಆರ್(4)02/11–12, ದಿನಾಂಕ : 23–04–2011 ರಲ್ಲಿ ವಿವರಿಸಿರುವಂತೆ, ಶ್ರೀ ಪಿ.ಎನ್. ಸದಾಶಿವ, ಅಧ್ಯಕ್ಷರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ಶ್ರೀಮತಿ ಸೌಭಾಗ್ಯಲಕ್ಷ್ಮಿ ಆನಂದ್, ಅಧ್ಯಕ್ಷೆ, 'ಸಿರಿಗಂಧ' ಒಕ್ಕಲಿಗರ ಮಹಿಳಾ ಸಂಘ, ರವರ ಪತ್ರವನ್ನು ಇದರೊಂದಿಗೆ ಲಗತ್ತಿಸುತ್ತಾ, ಸದರಿಯವರು ತಮ್ಮ ಪತ್ರದಲ್ಲಿ ತಮ್ಮ ಸಂಘವು 656 ಸದಸ್ಯರನ್ನು ಒಳಗೊಂಡಿದ್ದು, ಸಾಂಸ್ಕೃತಿಕವಾಗಿ ಸಮಾಜಿಕವಾಗಿ ಪ್ರಗತಿ ಪರ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು, ತಮ್ಮ ಮಹಿಳಾ ಸಂಘವು ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡರ 500 ನೇ ಜಯಂತೋತ್ಸವವನ್ನು ಆಚರಿಸಲಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಧನಸಹಾಯ ಮಂಜೂರು ಮಾಡಲು ಕೋರಿರುತ್ತಾರೆಂದು ತಿಳಿಸುತ್ತಾ, 'ಸಿರಿಗಂಧ' ಒಕ್ಕಲಿಗರ ಮಹಿಳಾ ಸಂಘ, ರವರಿಗೆ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ರೂ. 50.00 ಸಾವಿರ ಅನುದಾನ ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

2010–11 ನೇ ಸಾಲಿನ ಪಾಲಿಕೆ ಆಯವ್ಯಯದ "ಕೊಡುಗೆ ಮತ್ತು ಸಹಾಯಾನುದಾನ" ಲೆಕ್ಕ ಶೀರ್ಷಿಕೆ ಅಡಿ ರೂ.10.00 ಕೋಟಿಗಳನ್ನು ಮೀಸಲಿರಿಸಲಾಗಿದ್ದು, ಈ ಪೈಕಿ ದಿನಾಂಕ: 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ. 176.50 ಲಕ್ಷಗಳು ಈಗಾಗಲೇ ಹಂಚಿಕೆಯಾಗಿದ್ದು, ಸಹಾಯಧನದ ಪ್ರಸ್ತಾವನೆಗಳಿಗೆ ಹಣದ ಲಭ್ಯವಿರುವುದಿಲ್ಲ.

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 22–03–2011 ರ ಸಭೆಯ ತೀರ್ಮಾನದಂತೆ ಕ್ರ.ಸಂ. (41) ರಲ್ಲಿ ಸಂಘ ಸಂಸ್ಥೆಗಳಿಗೆ ಹೆಚ್ಚುವರಿ ಅನುದಾನಕ್ಕಾಗಿ ರೂ. 100.00 ಲಕ್ಷಗಳ ಮರು ಹೊಂದಾಣಿಕೆ ಮಾಡಿಕೊಂಡು 2010–11 ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲು ಸಮಿತಿಯು ತೀರ್ಮಾನಿಸಲಾಗಿರುತ್ತದೆ.

2010–11ನೇ ಸಾಲಿನ ಆರ್ಥಿಕ ಸಾಲು ಮುಕ್ತಾಯವಾಗಿರುತ್ತದೆ. ಪ್ರಸಕ್ತ 2011–12 ನೇ ಸಾಲಿನ ಪಾಲಿಕೆಯ ಆಯವ್ಯಯವು ತಹಲ್‌ವರೆವಿಗೂ ಮಂಡನೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

ನಿರ್ಣಯ :– ಆಯುಕ್ತರ ದಿನಾಂಕ 23–04–2011ರ ಟಿಪ್ಪಣಿಯನ್ನು ಒಪ್ಪುತ್ತಾ, 2010–11ನೇ ಸಾಲಿನ ಆರ್ಥಿಕ ವರ್ಷ ಮುಕ್ತಾಯಗೊಂಡಿರುವುದರಿಂದ ಈ ಪ್ರಸ್ತಾವನೆಯನ್ನು ಕೈಬಿಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

## *15]. ವಿಷಯದ ಸಂಖ್ಯೆ: ತೆಆಸ್ಥಾಸ/71/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಅಆ(ಕ/ಆ/ಆ)ಪಿಎಸ್‌ಆರ್(4)06/11–12, ದಿನಾಂಕ : 23–04–2011 ರಲ್ಲಿ ವಿವರಿಸಿರುವಂತೆ, ಶ್ರೀ ಎಂ. ನಾಗರಾಜ್, ಮಾನ್ಯ ವಿರೋಧ ಪಕ್ಷದ ನಾಯಕರು, ಪೂಜ್ಯ ಮಹಾಪೌರರಿಗೆ ಪತ್ರ ಬರೆದು ಅಧ್ಯಕ್ಷರು ಜನ ಸೇವಾ ಸಂಸ್ಥೆ, ನಂ. 304, ಭುವನೇಶ್ವರಿನಗರ, 10ನೇ ಮುಖ್ಯ ರಸ್ತೆ, 5ನೇ ಬ್ಲಾಕ್, ರಾಜಾಜಿನಗರ ಬೆಂಗಳೂರು – 10 ರವರು ನೀಡಿರುವ ಮನವಿ ಪತ್ರವನ್ನು ಪರಿಶೀಲನೆಗೆ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಲಗತ್ತಿಸುತ್ತಾ, ಅಧ್ಯಕ್ಷರು ಮನವಿ ಪತ್ರದಲ್ಲಿ ಜನ ಸೇವಾ ಸಂಸ್ಥೆಯ ವತಿಯಿಂದ ದಿನಾಂಕ 02–04–2011 ರಂದು ಶನಿವಾರ 4 ಗಂಟೆಗೆ 500 ನೇ ಕೆಂಪೇಗೌಡ ವಾರ್ಷಿಕೋತ್ಸವ ಸಮಾರಂಭ ಏರ್ಪಡಿಸಿದ್ದು, ಸದರಿ ಕಾರ್ಯಕ್ರಮಕ್ಕೆ 4 ರಿಂದ 5 ಲಕ್ಷ ವೆಚ್ಚವಾಗುತ್ತಿದ್ದು, ಪೂರ್ಣ ವೆಚ್ಚವನ್ನು ಸಂಘದ ವತಿಯಿಂದ ಭರಿಸಲು ಸಾಧ್ಯವಾಗುತ್ತಿಲ್ಲವಾದ್ದರಿಂದ ಪಾಲಿಕೆ ವತಿಯಿಂದ ರೂ. 3 ಲಕ್ಷ ಧನ ಸಹಾಯ ನೀಡಲು ಕೋರಿರುತ್ತಾರೆಂದು ತಿಳಿಸುತ್ತಾ, ಅಧ್ಯಕ್ಷರು, ಜನ ಸೇವಾ ಸಂಸ್ಥೆ ರವರ ಕೋರಿಕೆಯನ್ನು ಪರಿಗಣಿಸಿ, ಪಾಲಿಕೆ ವತಿಯಿಂದ ಧನ ಸಹಾಯ ನೀಡಬೇಕೆಂದು ಕೋರಿರುತ್ತಾರೆ.

2010–11 ನೇ ಸಾಲಿನ ಪಾಲಿಕೆ ಆಯವ್ಯಯದ "ಕೊಡುಗೆ ಮತ್ತು ಸಹಾಯಾನುದಾನ" ಲೆಕ್ಕ ಶೀರ್ಷಿಕೆ ಅಡಿ ರೂ.10.00 ಕೋಟಿಗಳನ್ನು ಮೀಸಲಿರಿಸಲಾಗಿದ್ದು, ಈ ಪೈಕಿ ದಿನಾಂಕ: 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ. 176.50 ಲಕ್ಷಗಳು ಈಗಾಗಲೇ ಹಂಚಿಕೆಯಾಗಿದ್ದು, ಸಹಾಯಧನದ ಪ್ರಸ್ತಾವನೆಗಳಿಗೆ ಹಣದ ಲಭ್ಯವಿರುವುದಿಲ್ಲ.

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 22–03–2011 ರ ಸಭೆಯ ತೀರ್ಮಾನದಂತೆ ಕ್ರ.ಸಂ. (41) ರಲ್ಲಿ ಸಂಘ ಸಂಸ್ಥೆಗಳಿಗೆ ಹೆಚ್ಚುವರಿ ಅನುದಾನಕ್ಕಾಗಿ ರೂ. 100.00 ಲಕ್ಷಗಳ ಮರು ಹೊಂದಾಣಿಕೆ ಮಾಡಿಕೊಂಡು 2010–11 ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲು ಸಮಿತಿಯು ತೀರ್ಮಾನಿಸಲಾಗಿರುತ್ತದೆ.

2010–11ನೇ ಸಾಲಿನ ಆರ್ಥಿಕ ಸಾಲು ಮುಕ್ತಾಯವಾಗಿರುತ್ತದೆ. ಪ್ರಸಕ್ತ 2011–12 ನೇ ಸಾಲಿನ ಪಾಲಿಕೆಯ ಆಯವ್ಯಯವು ತಹಲ್‌ವರೆವಿಗೂ ಮಂಡನೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 23–04–2011ರ ಟಿಪ್ಪಣಿಯನ್ನು ಒಪ್ಪುತ್ತಾ, 2010–11ನೇ ಸಾಲಿನ ಆರ್ಥಿಕ ವರ್ಷ ಮುಕ್ತಾಯಗೊಂಡಿರುವುದರಿಂದ ಈ ಪ್ರಸ್ತಾವನೆಯನ್ನು ಕೈಬಿಡುವುದೆಂದು ಸಮಿತಿಯು ತಿರ್ಮಾನಿಸಲಾಯಿತು.**

## *16]. ವಿಷಯದ ಸಂಖ್ಯೆ: ತೆಆಸ್ಥಾಸ/72/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಅಆ(ಕ/ಆ/ಆ)ಪಿಎಸ್‌ಆರ್(4)01/11–12, ದಿನಾಂಕ : 23–04–2011 ರಲ್ಲಿ ವಿವರಿಸಿರುವಂತೆ, ಶ್ರೀ ಪಿ.ಎನ್. ಸದಾಶಿವ, ಅಧ್ಯಕ್ಷರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ಶ್ರೀ ಎಚ್. ಎಸ್. ರಾಜು, ಅಧ್ಯಕ್ಷರು, ಬಸವೇಶ್ವರ ನಗರ ಒಕ್ಕಲಿಗರ ವೇದಿಕೆ (ನೋಂ) ರವರ ಪತ್ರವನ್ನು ಲಗತ್ತಿಸುತ್ತಾ ತಮ್ಮ ಪತ್ರದಲ್ಲಿ ತಮ್ಮ ವೇದಿಕೆಯ ವತಿಯಿಂದ ಏಪ್ರಿಲ್ ತಿಂಗಳಲ್ಲಿ ವಿಜೃಂಭಣೆಯಿಂದ ಆಚರಿಸಲಿರುವ ಕೆಂಪೇಗೌಡರ 500 ನೇ ಜಯಂತೋತ್ಸವಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಧನಸಹಾಯ ಮಂಜೂರು ಮಾಡಬೇಕೆಂದು ಕೋರಿರುತ್ತಾರೆಂದು ತಿಳಿಸುತ್ತಾ, ಬಸವೇಶ್ವರ ನಗರ ಒಕ್ಕಲಿಗರ ವೇದಿಕೆ (ನೋಂ) ರವರಿಗೆ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ರೂ. 1.00 ಲಕ್ಷ ಅನುದಾನ ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

2010–11 ನೇ ಸಾಲಿನ ಪಾಲಿಕೆ ಆಯವ್ಯಯದ "ಕೊಡುಗೆ ಮತ್ತು ಸಹಾಯಾನುದಾನ" ಲೆಕ್ಕ ಶೀರ್ಷಿಕೆ ಅಡಿ ರೂ.10.00 ಕೋಟಿಗಳನ್ನು ಮೀಸಲಿರಿಸಲಾಗಿದ್ದು, ಈ ಪೈಕಿ ದಿನಾಂಕ: 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ. 176.50 ಲಕ್ಷಗಳು ಈಗಾಗಲೇ ಹಂಚಿಕೆಯಾಗಿದ್ದು, ಸಹಾಯಧನದ ಪ್ರಸ್ತಾವನೆಗಳಿಗೆ ಹಣದ ಲಭ್ಯವಿರುವುದಿಲ್ಲ.

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 22–03–2011 ರ ಸಭೆಯ ತೀರ್ಮಾನದಂತೆ ಕ್ರ.ಸಂ. (41) ರಲ್ಲಿ ಸಂಘ ಸಂಸ್ಥೆಗಳಿಗೆ ಹೆಚ್ಚುವರಿ ಅನುದಾನಕ್ಕಾಗಿ ರೂ. 100.00 ಲಕ್ಷಗಳ ಮರು ಹೊಂದಾಣಿಕೆ ಮಾಡಿಕೊಂಡು 2010–11 ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲು ಸಮಿತಿಯು ತೀರ್ಮಾನಿಸಲಾಗಿರುತ್ತದೆ.

2010–11ನೇ ಸಾಲಿನ ಆರ್ಥಿಕ ಸಾಲು ಮುಕ್ತಾಯವಾಗಿರುತ್ತದೆ. ಪ್ರಸಕ್ತ 2011–12 ನೇ ಸಾಲಿನ ಪಾಲಿಕೆಯ ಆಯವ್ಯಯವು ತಹಲ್‌ವರೆವಿಗೂ ಮಂಡನೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 23–04–2011ರ ಟಿಪ್ಪಣಿಯನ್ನು ಒಪ್ಪುತ್ತಾ 2010–11ನೇ ಸಾಲಿನ ಆರ್ಥಿಕ ವರ್ಷ ಮುಕ್ತಾಯಗೊಂಡಿರುವುದರಿಂದ ಈ ಪ್ರಸ್ತಾವನೆಯನ್ನು ಕೈಬಿಡುವುದೆಂದು ಸಮಿತಿಯು ತಿರ್ಮಾನಿಸಲಾಯಿತು.**

## *17]. ವಿಷಯದ ಸಂಖ್ಯೆ: ತೆಆಸ್ಥಾಸ/73/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಅಆ(ಕ/ಆ/ಆ)ಪಿಎಸ್‌ಆರ್(4)04/11–12, ದಿನಾಂಕ : 27–04–2011 ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ಅಧ್ಯಕ್ಷರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ಶ್ರೀ ಎನ್. ನಾರಾಯಣ, ಪ್ರಧಾನ ಕಾರ್ಯದರ್ಶಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪೌರ ಕಾರ್ಮಿಕರ ಸಂಘಗಳ ಸಮಿತಿ ರವರು ತಮ್ಮ ಪತ್ರದಲ್ಲಿ ತಮ್ಮ ಸಮಿತಿಯ ವತಿಯಿಂದ ದಿನಾಂಕ 18–02–2011 ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಸಲಾದ ಪೌರ ಕಾರ್ಮಿಕರ ಸಮ್ಮೇಳನ ಮತ್ತು ಸಾಂಸ್ಕೃತಿಕ ಕಲಾಮೇಳ–2011 ರ ಕಾರ್ಯಕ್ರಮಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಧನ ಸಹಾಯ ಮಂಜೂರು ಮಾಡಲು ಕೋರಿರುತ್ತಾರೆಂದು ತಿಳಿಸುತ್ತಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪೌರಕಾರ್ಮಿಕರ ಸಂಘಗಳ ಸಮಿತಿ ರವರಿಗೆ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಸೂಕ್ತ ಅನುದಾನ ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

2010–11 ನೇ ಸಾಲಿನ ಪಾಲಿಕೆ ಆಯವ್ಯಯದ "ಕೊಡುಗೆ ಮತ್ತು ಸಹಾಯಾನುದಾನ" ಲೆಕ್ಕ ಶೀರ್ಷಿಕೆ ಅಡಿ ರೂ.10.00 ಕೋಟಿಗಳನ್ನು ಮೀಸಲಿರಿಸಲಾಗಿದ್ದು, ಈ ಪೈಕಿ ದಿನಾಂಕ: 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ. 176.50 ಲಕ್ಷಗಳು ಈಗಾಗಲೇ ಹಂಚಿಕೆಯಾಗಿದ್ದು, ಸಹಾಯಧನದ ಪ್ರಸ್ತಾವನೆಗಳಿಗೆ ಹಣದ ಲಭ್ಯವಿರುವುದಿಲ್ಲ.

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 22–03–2011 ರ ಸಭೆಯ ತೀರ್ಮಾನದಂತೆ ಕ್ರ.ಸಂ. (41) ರಲ್ಲಿ ಸಂಘ ಸಂಸ್ಥೆಗಳಿಗೆ ಹೆಚ್ಚುವರಿ ಅನುದಾನಕ್ಕಾಗಿ ರೂ. 100.00 ಲಕ್ಷಗಳ ಮರು ಹೊಂದಾಣಿಕೆ ಮಾಡಿಕೊಂಡು 2010–11 ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲು ಸಮಿತಿಯು ತೀರ್ಮಾನಿಸಲಾಗಿರುತ್ತದೆ.

2010–11ನೇ ಸಾಲಿನ ಆರ್ಥಿಕ ಸಾಲು ಮುಕ್ತಾಯವಾಗಿರುತ್ತದೆ. ಪ್ರಸಕ್ತ 2011–12 ನೇ ಸಾಲಿನ ಪಾಲಿಕೆಯ ಆಯವ್ಯಯವು ತಹಲ್‌ವರೆವಿಗೂ ಮಂಡನೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 27–04–2011ರ ಟಿಪ್ಪಣಿಯನ್ನು ಒಪ್ಪುತ್ತಾ 2010–11ನೇ ಸಾಲಿನ ಆರ್ಥಿಕ ವರ್ಷ ಮುಕ್ತಾಯಗೊಂಡಿರುವುದರಿಂದ ಈ ಪ್ರಸ್ತಾವನೆಯನ್ನು ಕೈಬಿಡುವುದೆಂದು ಸಮಿತಿಯು ತಿರ್ಮಾನಿಸಲಾಯಿತು.**

## *18]. ವಿಷಯದ ಸಂಖ್ಯೆ: ತೆಆಸ್ಥಾಸ/74/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಅಆ(ಕ/ಆ/ಆ)ಪಿಎಸ್‌ಆರ್(4)12/11–12, ದಿನಾಂಕ : 11–05–2011 ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ಅಧ್ಯಕ್ಷರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ಶ್ರೀ ಬಾಬು, ಪ್ರಧಾನ ಕಾರ್ಯದರ್ಶಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವರ್ಕರ್ಸ್ ಫೆಡರೇಶನ್–ದಂಡು ಪ್ರದೇಶ ರವರ ಪತ್ರವನ್ನು ಲಗತ್ತಿಸುತ್ತಾ ಸದರಿಯವರು ತಮ್ಮ ಪತ್ರದಲ್ಲಿ ಅಂಬೇಡ್ಕರ್ ಜಯಂತಿ ಅಂಗವಾಗಿ ವಿವಿಧ ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಚರಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಧನಸಹಾಯ ಮಂಜೂರು ಮಾಡಲು ಕೋರಿರುತ್ತಾರೆಂದು ತಿಳಿಸುತ್ತಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವರ್ಕರ್ಸ್ ಫೆಡರೇಶನ್–ದಂಡು ಪ್ರದೇಶ ರವರಿಗೆ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 3.00 ಲಕ್ಷ ಅನುದಾನ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

2010–11 ನೇ ಸಾಲಿನ ಪಾಲಿಕೆ ಆಯವ್ಯಯದ "ಕೊಡುಗೆ ಮತ್ತು ಸಹಾಯಾನುದಾನ" ಲೆಕ್ಕ ಶೀರ್ಷಿಕೆ ಅಡಿ ರೂ.10.00 ಕೋಟಿಗಳನ್ನು ಮೀಸಲಿರಿಸಲಾಗಿದ್ದು, ಈ ಪೈಕಿ ದಿನಾಂಕ: 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ. 176.50 ಲಕ್ಷಗಳು ಈಗಾಗಲೇ ಹಂಚಿಕೆಯಾಗಿದ್ದು, ಸಹಾಯಧನದ ಪ್ರಸ್ತಾವನೆಗಳಿಗೆ ಹಣದ ಲಭ್ಯವಿರುವುದಿಲ್ಲ.

| 21 | Development works at Hosanagara slum in Ward no-50 | 75.00 |
| 22 | Covering slabs to drains at K. Palya B. Channasandra in ward no-50 | 75.00 |
| 23 | Renovation of School Building at K Palya in ward no-50 | 25.00 |
| 24 | Renovation of School building at Byappanahalli in Ward no-50 | 50.00 |
| 25 | Providing CC to lanes and cross roads at Ambedkar Slum at Old Byappanahalli in ward no-50 | 50.00 |
| | **Total Amount** | **1070.00** |

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ವಾರ್ಡ್ ನಂ. 50 ರಲ್ಲಿ ಶೇ. 22.75ರ ಅನುದಾನದಡಿ ರೂ. 1070.00 ಲಕ್ಷಗಳ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಪರಿಶೀಲನೆಗೆ ಹಾಗೂ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ದಿನಾಂಕ : 14-03-2011 ರ ಆಯುಕ್ತರ ಟಿಪ್ಪಣಿ ಮಾರ್ಪಡಿಸಿ, 40 ಮನೆಗಳಿಗೆ (ನಲವತ್ತು ಮನೆಗಳಿಗೆ) ತಲಾ ರೂ.3.00 ಲಕ್ಷಗಳಂತೆ (ರೂ.ಮೂರು ಲಕ್ಷಗಳು ಮಾತ್ರ) ಒಟ್ಟು ರೂ.120.00 ಲಕ್ಷಗಳ (ರೂ.ಒಂದು ನೂರ ಇಪ್ಪತ್ತು ಲಕ್ಷಗಳು ಮಾತ್ರ) ಅನುದಾನವನ್ನು ಹಾಗೂ ಕಾಮಗಾರಿ ಪಟ್ಟಿಯ ಕ್ರಮಸಂಖ್ಯೆ 6, 9, 10 ಮತ್ತು 11 ಒಟ್ಟು ರೂ.80.00 ಲಕ್ಷ (ರೂ.ಎಂಭತ್ತು ಲಕ್ಷಗಳು ಮಾತ್ರ) ಮಂಜೂರು ಮಾಡುವುದೆಂದು ತೀರ್ಮಾನಿಸಿರುವ ಸಾಮಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ : 20-04-2011ರ ನಿರ್ಣಯ.

**ನಿರ್ಣಯ :-** **ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ : 20-04-2011ರ ನಿರ್ಣಯವನ್ನು ಮಾರ್ಪಡಿಸಿ 40 ಮನೆಗಳನ್ನು ನಿರ್ಮಾಣ ಮಾಡಲು ರೂ.120.00 ಲಕ್ಷಗಳನ್ನು 2011-12ನೇ ಸಾಲಿನ ಆಯವ್ಯಯದಲ್ಲಿ ವಾರ್ಡುಗಳಿಗೆ ಒದಗಿಸುವ ಶೇಕಡ 22.75ರ ಅನುದಾನದಡಿಯಲ್ಲಿ ಬಳಸಿಕೊಳ್ಳುವ ಷರತ್ತಿಗೆ ಒಳಪಡಿಸಿ ಕಾಮಗಾರಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.**

## *38]. ವಿಷಯದ ಸಂಖ್ಯೆ: ತೆಆಸ್ಥಾಸ/94/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ/ಆ)ಪಿಎಸ್ಆರ್(3)161/10-11, ದಿನಾಂಕ : 09-03-2011ರಲ್ಲಿ ವಿವರಿಸಿರುವಂತೆ, ಶ್ರೀ ಎಸ್.ಎಸ್. ಪ್ರಸಾದ್, ಸದಸ್ಯರು ವಾರ್ಡ್ ನಂ. 56 (ಎ. ನಾರಾಯಣಪುರ)ರವರು ಮನವಿ ಸಲ್ಲಿಸಿ, ತಮ್ಮ ವಾರ್ಡ್ ಹಿಂದುಳಿದ ವಾರ್ಡ್ ಆಗಿದ್ದು, ಅತೀಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರು ವಾಸವಾಗಿರುತ್ತಾರೆಂದು ಹಾಗೂ ತನ್ನ ವಾರ್ಡ್ ಅಭಿವೃದ್ಧಿಗಾಗಿ ಶೇ. 22.75 ರ ಅಡಿಯಲ್ಲಿ 60 ಮನೆ ನಿರ್ಮಾಣ ಮಾಡಲು ಹೆಚ್ಚುವರಿ ಅನುದಾನ ರೂ.1 ಕೋಟಿ 80 ಲಕ್ಷವನ್ನು ಒದಗಿಸಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ವಾರ್ಡ್ ನಂ. 56 ರಲ್ಲಿ 60 ಮನೆಗಳನ್ನು ನಿರ್ಮಾಣ ಮಾಡಲು ಪಾಲಿಕೆ ಸದಸ್ಯರು ಸಲ್ಲಿಸಿರುವ ರೂ. 1 ಕೋಟಿ 80 ಲಕ್ಷಗಳ ಪ್ರಸ್ತಾವನೆಯ ಪರಿಶೀಲನೆಗೆ ಹಾಗೂ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ದಿನಾಂಕ : 14–03–2011ರ ಆಯುಕ್ತರ ಟಿಪ್ಪಣಿ ಒಪ್ಪಿರುವ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ : 20–04–2011ರ ನಿರ್ಣಯ.

**ನಿರ್ಣಯ :–** **ಆಯುಕ್ತರ ದಿನಾಂಕ : 14–03–2011ರ ಟಿಪ್ಪಣಿಯನ್ನು ಒಪ್ಪಿರುವ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ : 20–04–2011ರ ನಿರ್ಣಯವನ್ನು ಮಾರ್ಪಡಿಸಿ 30 ಮನೆಗಳನ್ನು ನಿರ್ಮಾಣ ಮಾಡಲು ರೂ.90.00 ಲಕ್ಷಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ವಾರ್ಡುಗಳಿಗೆ ಒದಗಿಸುವ ಶೇಕಡ 22.75ರ ಅನುದಾನದಡಿಯಲ್ಲಿ ಬಳಸಿಕೊಳ್ಳುವ ಷರತ್ತಿಗೆ ಒಳಪಡಿಸಿ ಕಾಮಗಾರಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.**

## *39]. ವಿಷಯದ ಸಂಖ್ಯೆ: ತೆಆಸ್ಥಾಸ/95/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಜಾಆ(ಕ/ಆ)ಪಿಎಸ್ಆರ್(3)147/10–11, ದಿನಾಂಕ ಃ 14–03–2011 ರಲ್ಲಿ ವಿವರಿಸಿರುವಂತೆ, ಡಾ॥ ಶಿವಪ್ರಸಾದ್. ಎಂ.ಎನ್. ಸದಸ್ಯರು, ವಾರ್ಡ್ ನಂ.35 (ಅರಮನೆ ನಗರ) ರವರು ಮನವಿ ಸಲ್ಲಿಸಿ, ತಮ್ಮ ವಾರ್ಡ್‌ನಲ್ಲಿ ಶೇ.22.75ರ ಅನುದಾನದಡಿ ಕೈಗೊಳ್ಳಬೇಕಾದ ಕಾಮಗಾರಿಗಳ ವಿವರಗಳನ್ನು ಒದಗಿಸಿರುತ್ತಾರೆ.

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಅಂದಾಜು ವೆಚ್ಚ (ರೂ. ಲಕ್ಷಗಳಲ್ಲಿ) |
|---|---|---|
| 01 | ವಾರ್ಡ್ ನಂ. 35ರ ಮತ್ತಿಕೆರೆ ಹರಿಜನ ಕಾಲೋನಿಯ ಮುಖ್ಯ ರಸ್ತೆಗಳಿಗೆ ಸಿಮೆಂಟ್ ಕಾಂಕ್ರಿಟ್ ಒದಗಿಸುವುದು | 20.00 |
| 02 | ವಾರ್ಡ್ ನಂ. 35ರ ಮತ್ತಿಕೆರೆ ಹರಿಜನ ಕಾಲೋನಿಯ ಅಡ್ಡರಸ್ತೆಗಳಿಗೆ ಸಿಮೆಂಟ್ ಕಾಂಕ್ರಿಟ್ ಒದಗಿಸುವುದು | 20.00 |
| 03 | ವಾರ್ಡ್ ನಂ. 35ರ ಮತ್ತಿಕೆರೆ ಹರಿಜನ ಕಾಲೋನಿಯ ಮುಖ್ಯ ರಸ್ತೆಗಲಿಗೆ ಅರ್.ಸಿಸಿ. ಬಾಕ್ಸ್ ಚರಂಡಿಗಳ್ನು ಒದಗಿಸುವುದು | 20.00 |
| 04 | ವಾರ್ಡ್ ನಂ. 35ರ 1ನೇ ದೇವಸ್ಥಾನದ ರಸ್ತೆಯಲ್ಲಿನ ಆರ್.ಸಿಸಿ ಬಾಕ್ಸ್ ಚರಂಡಿಗಳ ಸುಧಾರಣೆ | 10.00 |
| 05 | ವಾರ್ಡ್ ನಂ. 35ರ ಬಡ್ಡಣ್ಣ ಬಡಾವಣೆಯ ರಸ್ತೆಗಳ ಅಭಿವೃದ್ಧಿ | 10.00 |
| 06 | ವಾರ್ಡ್ ನಂ. 35ರ ಮತ್ತಿಕೆರೆ ಹರಿಜನ ಕಾಲೋನಿಗೆ ನೀರು ಸರಬರಾಜು ಮತ್ತು ಒಳಚರಂಡಿಗಳ ನೈರ್ಮಲೀಕರಣ | 20.00 |
| | **ಒಟ್ಟು ಮೊತ್ತ** | **100.00** |

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ವಾರ್ಡ್ ನಂ.35ರಲ್ಲಿ ಮೆಲಿನ ಕಾಮಗಾರಿಗಳನ್ನು ಕೈಗೊಳ್ಳಲು ಪಾಲಿಕೆ ಸದಸ್ಯರು ಕೋರಿರುವ ರೂ.100.00 ಲಕ್ಷಗಳ ಅಧಿಕ ಮೊತ್ತದ ಅನುದಾನದ ಪರಿಶೀಲನೆಗೆ ಹಾಗೂ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ದಿನಾಂಕ : 14–03–2011 ರ ಆಯುಕ್ತರ ಟಿಪ್ಪಣಿ ಮಾರ್ಪಡಿಸಿ ಕಾಮಗಾರಿ ಕ್ರಮ ಸಂಖ್ಯೆ : 1, 2 ಕಾಮಗಾರಿಗಳಿಗೆ ಒಟ್ಟು ರೂ.40.00 ಲಕ್ಷಗಳ (ನಲವತ್ತು ಲಕ್ಷಗಳು ಮಾತ್ರ) ಅನುದಾನವನ್ನು ಮಂಜೂರು ಮಾಡುವುದೆಂದು ತೀರ್ಮಾನಿಸಿರುವ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ : 20–04–2011ರ ನಿರ್ಣಯ.

**ನಿರ್ಣಯ :–** **ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ 20–04–2011ರ ನಿರ್ಣಯವನ್ನು ಮಾರ್ಪಡಿಸಿ ಆಯುಕ್ತರ ದಿನಾಂಕ : 14–03–2011ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಮೊತ್ತ ರೂ.100/– ಲಕ್ಷಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ವಾರ್ಡುಗಳಿಗೆ ಒದಗಿಸುವ ಶೇಕಡ 22.75ರ ಅನುದಾನದಡಿಯಲ್ಲಿ ಬಳಸಿಕೊಳ್ಳುವ ಷರತ್ತಿಗೆ ಒಳಪಡಿಸಿ ಕಾಮಗಾರಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.**

## *40]. ವಿಷಯದ ಸಂಖ್ಯೆ: ತೆಆಸ್ಥಾಸ/96/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಸಂಖ್ಯೆ.ಬಿ12(1)ಪಿಆರ್/94/11–12., ದಿನಾಂಕ : 01–06–2011 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೊಸ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಂಗಾಮಿ ಗ್ರಾಮ ಪಂಚಾಯಿತಿ ನೌಕರರು ಬೊಮ್ಮನಹಳ್ಳಿ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಂಗಾಮಿ ಗ್ರಾಮಪಂಚಾಯಿತಿ ನೌಕರರು ಕಾರ್ಮಿಕ ಇಲಾಖೆಯ ಅಧಿಸೂಚನೆಯಂತೆ ಪರಿಷ್ಕೃತ ಕನಿಷ್ಠ ವೇತನವನ್ನು ಪಾವತಿಸಲು ಕೋರಿ ಸಲ್ಲಿಸಿರುವ ಮನವಿ ದಿನಾಂಕ: 23–03–2011 ರಂತೆ ಮನವಿ ಸಲ್ಲಿಸಿ, ಕರ್ನಾಟಕ ಘನವೆತ್ತ ರಾಜ್ಯಪಾಲರ ಅಧಿಸೂಚನೆ ಸಂಖ್ಯೆ; ನಅಇ 92 ಎಂಎನ್‌ವೈ 2006, ದಿನಾಂಕ: 16–01–2007ರಂದು ಈ ಹಿಂದೆ ಇದ್ದ ಬೆಂಗಳೂರು ಮಹಾನಗರ ಪಾಲಿಕೆಯು 110ಗ್ರಾಮಗಳು, 7 ನಗರಸಭೆ ಮತ್ತು 1 ಪುರಸಭೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ರಚನೆಯಾಗಿದ್ದು, ಸದರಿ 110 ಗ್ರಾಮಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದ ಹಂಗಾಮಿ ಕಂದಾಯ ವಸೂಲಿಗಾರರು, ಗಣಕಯಂತ್ರ ನಿರ್ವಾಹಕರು, ಜವಾನರು, ಎಲೆಕ್ಟ್ರೀಷಿಯನ್, ಜಲಗಾರರು, ಪೌರಕಾರ್ಮಿಕರುಗಳು ಸಹ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ವಿಲೀನಗೊಂಡು ಕಾರ್ಯನಿರ್ವಹಿಸುತ್ತಿರುವ ಕರವಸೂಲಿಗಾರರಿಗೆ, ಗಣಕಯಂತ್ರ ನಿರ್ವಾಹಕರಿಗೆ ಮಾಹೆಯಾನ 2500, ಗುಮಾಸ್ತರಿಗೆ ಮಾಹೆಯಾನ 2042, ಜಲಗಾರರಿಗೆ ಮಾಹೆಯಾನ 2250, ಪೌರಕಾರ್ಮಿಕರಿಗೆ ಮಾಹೆಯಾನ 1750 ಹಾಗೂ ಎಲೆಕ್ಟ್ರೀಷಿಯನ್ ರವರಿಗೆ ಮಾಹೆಯಾನ 3000 ಮತ್ತು ಜವಾನರಿಗೆ ಮಾಹೆಯಾನ 1000 ಪಾವತಿಸಲಾಗುತ್ತಿತ್ತು. ನಂತರದಲ್ಲಿ ಅಪರ ಆಯುಕ್ತರು (ಆಡಳಿತ) ಬಿಬಿಎಂಪಿ ರವರು ದಿನಾಂಕ: 07–07–2010ರ ಆದೇಶದಂತೆ, ಸರ್ಕಾರದ ಕಾರ್ಮಿಕ ಆಯುಕ್ತ ರವರ ಅರೆ ಸರ್ಕಾರಿ ಪತ್ರ ಸಂಖ್ಯೆ: ಪಿಟಿಎನ್/ಸಿಆರ್/118/09–10, ದಿನಾಂಕ: 07–01–2010ರ ಪತ್ರದನ್ವಯ ಕರವಸೂಲಿಗಾರರಿಗೆ, ಗಣಕಯಂತ್ರ ನಿರ್ವಾಹಕರಿಗೆ, ಗುಮಾಸ್ತರಿಗೆ, ಎಲೆಕ್ಟ್ರೀಷಿಯನ್ ರವರಿಗೆ ಮಾಹೆಯಾನ 2874, ಜಲಗಾರರಿಗೆ, ಪೌರಕಾರ್ಮಿಕರಿಗೆ, ಜವಾನರಿಗೆ ಮಾಹೆಯಾನ 2632 ರೂಗಳಿಗೆ ಕನಿಷ್ಠ ವೇತನವನ್ನು ಹೆಚ್ಚಿಸಿ ಆದೇಶ ಹೊರಡಿಸಿರುತ್ತಾರೆ. ಅದರಂತೆ, ಹೆಚ್ಚಳ ಮಾಡಿರುವ ಕನಿಷ್ಠ ವೇತನವನ್ನು ಪಡೆಯುತ್ತಿದ್ದು ಈಗ ಸರ್ಕಾರದ ಅಧೀನ ಕಾರ್ಯದರ್ಶಿ, ಕಾರ್ಮಿಕ ಇಲಾಖೆ ರವರು ಘನತೆವೆತ್ತ ರಾಜ್ಯಪಾಲರ ಆದೇಶಾನುಸಾರ ದಿನಾಂಕ: 21–02–2011ರಂದು ಉಲ್ಲೇಖ–(1)ರ ಅಧಿಸೂಚನೆ ಹೊರಡಿಸಿ, ಕನಿಷ್ಠ ವೇತನವನ್ನು ಕರವಸೂಲಿಗಾರರಿಗೆ, ಗಣಕಯಂತ್ರ ನಿರ್ವಾಹಕರಿಗೆ ಗುಮಾಸ್ತರಿಗೆ, ಎಲೆಕ್ಟ್ರೀಷಿಯನ್ ರವರಿಗೆ ಮಾಹೆಯಾನ 5881, ಜಲಗಾರರಿಗೆ, ಪೌರಕಾರ್ಮಿಕರಿಗೆ ಮಾಹೆಯಾನ 5647, ಜವಾನರಿಗೆ ಮಾಹೆಯಾನ 5179 ರೂಗಳನ್ನು ಪರಿಷ್ಕರಿಸಿ ಕನಿಷ್ಠ ವೇತನವನ್ನು ಹೆಚ್ಚಿಸಿ ಅಧಿಸೂಚನೆ ಹೊರಡಿಸಿರುತ್ತಾರೆ. ಆದ್ದರಿಂದ, ಸದರಿ ಸರ್ಕಾರದ ಅಧಿಸೂಚನೆಯಂತೆ ಪರಿಷ್ಕೃತ ಕನಿಷ್ಠ ವೇತನವನ್ನು ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಪಾವತಿಸಬೇಕೆಂದು ಕೋರಿರುತ್ತಾರೆ.

ಸರ್ಕಾರದ ಕಾರ್ಮಿಕ ಇಲಾಖೆಯ ಸಂಖ್ಯೆ: ಕಾಇ 152 ಎಲ್‌ಡಬ್ಲ್ಯುಎ 2008, ದಿನಾಂಕ: 21–02–2011ರ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯಾದ್ಯಂತ ಯಾವುದೇ ''ನಗರ ಸ್ಥಳೀಯ ಸಂಸ್ಥೆಗಳು'' ಹಾಗೂ ''ಪಟ್ಟಣ ಮತ್ತು ಗ್ರಾಮ ಪಂಚಾಯಿತಿ ಸಂಸ್ಥೆಗಳು'' ಎಂಬ ಅನುಸೂಚಿತ ಉದ್ದಿಮೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ನಿರ್ಧಿಷ್ಟಪಡಿಸಿರುವ ಕನಿಷ್ಠ ವೇತನವನ್ನು ಪರಿಷ್ಕರಿಸಲು ಸರ್ಕಾರದ ಕರಡು ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯ ಪತ್ರದ ವಿಶೇಷ ಪತ್ರಿಕೆಯ ಭಾಗ–4(ಎ)ರಲ್ಲಿ ದಿನಾಂಕ: 30–09–2010ರಂದು ಪ್ರಕಟಿಸಿ, ಕನಿಷ್ಠ ವೇತನ ಕಾಯ್ದೆ 1948ರ (ಕೇಂದ್ರಾಧಿನಿಯಮ ಸಂ: (XI) ಸೆಕ್ಷನ್ 5(1)(ಬಿ) ಪ್ರಕಾರ ಇದರಿಂದ ಭಾದಿತರಾಗುವ / ಸಂಬಂದಿಧವಿರುವ ವ್ಯಕ್ತಿಗಳ ಗಮನಕ್ಕೆ ತರಲಾಗಿದ್ದು, ಅವರಿಂದ ಸಲಹೆ / ಆಕ್ಷೇಪಣೆಗಳನ್ನು ಕನಿಷ್ಠ ವೇತನ ಸಲಹಾ ಮಂಡಳಿಯಲ್ಲಿ ಮಂಡಿಸಲಾಗಿ, ಮಂಡಳಿಯಲ್ಲಿ ಸರ್ಕಾರದ ಪ್ರಸ್ತಾವನೆಯ ಬಗ್ಗೆ ಚರ್ಚಿಸಿ, ಅಂತಿಮ ಅಧಿಸೂಚನೆಯನ್ನು ಹೊರಡಿಸಲು ಸರ್ಕಾರಕ್ಕೆ ಶಿಫಾರಸ್ಸು ನೀಡಿರುವಂತೆ, ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಶಿಫಾರಸ್ಸನ್ನು ಪರಿಶೀಲಿಸಿ, ಕರಡು ಅಧಿಸೂಚನೆಯಲ್ಲಿ ನಿಗಧಿಪಡಿಸಿದ್ದ ವೇತನ

ದರಗಳು ಇತರೆ ಅನುಸೂಚಿತ ಉದ್ದಿಮೆಗಳಿಗಿಂತ ಹಾಗೂ ಕೇಂದ್ರ ಸರ್ಕಾರವು ನಿಗಧಿಪಡಿಸಿರುವ ರಾಷ್ಟ್ರೀಯ ಕನಿಷ್ಠ ವೇತನ ದರಕ್ಕಿಂತ ಗಣನೀಯವಾಗಿ ಹೆಚ್ಚಾಗಿರುವುದನ್ನು ಸರ್ಕಾರವು ಗಮನಿಸಿ, ಈ ರೀತಿ ಗಣನೀಯವಾಗಿ ಕನಿಷ್ಠ ವೇತನವನ್ನು ಹೆಚ್ಚಾಗಿ ನಿಗಧಿಪಡಿಸಿರುವುದರಿಂದ ಇತರ ಅನುಸೂಚಿತ ಉದ್ದಿಮೆಗಳಿಗೆ ತಾರತಮ್ಯ ಮಾಡಿದಂತಾಗುತ್ತದೆ. ಎನ್ನುವುದನ್ನು ಮನಗಂಡು ಕರಡು ಅಧಿಸೂಚನೆಯಲ್ಲಿನ ದರಗಳನ್ನು ಕಡಿತಗೊಳಿಸಲು ತೀರ್ಮಾನಿಸಿ. ಕನಿಷ್ಠ ವೇತನ ಕಾಯ್ದೆ 1948ರ ಸೆಕ್ಷನ್ 3(1)(ಬಿ) ಹಾಗೂ 5(1)(ಬಿ) ಮೂಲಕ ಪ್ರದತ್ತವಾದ ಅಧಿಕಾರಿಗಳನ್ನು ಚಲಾಯಿಸಿ ಮತ್ತು ಈ ಹಿಂದಿನ ಎಲ್ಲಾ ಅಧಿಸೂಚನೆಗಳನ್ನು ರದ್ದುಪಡಿಸಿ, ಕರ್ನಾಟಕ ರಾಜ್ಯಾದ್ಯಂತ ಯಾವುದೇ ''ನಗರ ಸ್ಥಳೀಯ ಸಂಸ್ಥೆಗಳು'' ಹಾಗೂ ಪಟ್ಟಣ ಮತ್ತು ಗ್ರಾಮ ಪಂಚಾಯಿತಿ ಸಂಸ್ಥೆಗಳು'' ಉದ್ದಿಮೆಯಲ್ಲಿ ಕೆಲಸ ಮಾಡುವ ಕಾರ್ಮಿಕ ವರ್ಗದವರಿಗೆ ಈ ಅಧಿಸೂಚನೆಯು ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಅನ್ವಯವಾಗುವಂತೆ ಕನಿಷ್ಠ ವೇತನವನ್ನು ಈ ಅಧಿಸೂಚನೆಯ ಅನುಸೂಚಿಯಲ್ಲಿ ಇರುವಂತೆ ಪರಿಷ್ಕರಿಸಲಾಗಿದೆಯೆಂದು ಅಧಿಸೂಚನೆ ಹೊರಡಿಸಿರುತ್ತದೆ.

## ಅನುಸೂಚಿ

| ಕ್ರ.ಸಂ | ಕೆಲಸದ ವರ್ಗಗಳು | ಕನಿಷ್ಠ ವೇತನ ದರಗಳು (ರೂಪಾಯಿಗಳಲ್ಲಿ) | | | | | |
|---|---|---|---|---|---|---|---|
| | | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳು | | ಎಲ್ಲಾ ನಗರ ಸಭೆಗಳು | | ಎಲ್ಲಾ ಪುರಸಭೆ, ಪಟ್ಟಣ ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳು | |
| | | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ |
| 1. | 2 | 3 | 4 | 5 | 6 | 7 | 8 |
| 1. | ಗುಮಾಸ್ತ/ಕ್ಲರ್ಕ್/ಕಂಪ್ಯೂಟರ್ ಆಪರೇಟರ್ / ಡಾಟಾ ಎಂಟ್ರೀ ಆಪರೇಟರ್ / ಕರ ವಸೂಲಿಗಾರರು/ ಎಲೆಕ್ಟ್ರೀಷಿಯನ್ ಹಾಗೂ ಇತರೆ ಕುಶಲ ಕಾರ್ಮಿಕರು | 5881–20 | 226–20 | 5532–80 | 212–20 | 4919–20 | 189–20 |
| 2. | ಪಂಪ್ ಆಪರೇಟರ್/ಮೆಕ್ಯಾನಿಕ್/ ಬಾಲವಾಡಿ/ಕಾರ್ಯಕರ್ತೆಯರು/ವಾಹನ ಚಾಲಕರು ಮತ್ತು ಇತರೆ ಅರೆ ಕುಶಲ ಕಾರ್ಮಿಕರು | 5647–20 | 217–20 | 5304–00 | 204–00 | 4808–70 | 184–90 |
| 3. | ವಾಟರ್‌ಮ್ಯಾನ್ (ನೀರು ಗಂಟಿ) | 5413–20 | 208–20 | 5075–20 | 195–20 | 4698–20 | 180–70 |
| 4. | ಜವಾನರು, ಅಟೆಂಡರ್ | 5179–20 | 199–20 | 4846–40 | 186–40 | 4587–70 | 176–45 |
| 5. | ಲೋಡಿಂಗ್ ಮತ್ತು ಅನ್‌ಲೋಡಿಂಗ್ ಕೆಲಸ ರಸ್ತೆಗಳನ್ನು ಗುಡಿಸುವುದು, ಒಳಚರಂಡಿ, ಸ್ನಾನಗೃಹ ಮತ್ತು ಶೌಚಾಲಯಗಳನ್ನು ಸ್ವಚ್ಚಗೊಳಿಸುವುದು ಹಾಗೂ ಇತರೆ ಕುಶಲರಲ್ಲದ ಕಾರ್ಮಿಕರು. | 5044–00 | 194–00 | 4264–00 | 164–00 | 3484–00 | 134–00 |

### ತುಟ್ಟಿಭತ್ಯೆ:–

ಈ ಅಧಿಸೂಚನೆಯಲ್ಲಿ ಪ್ರಕಟಿಸಿರುವ ದರಗಳನ್ನು ರಾಜ್ಯ ಸರಾಸರಿ ಗ್ರಾಹಕ ಬೆಲೆ ಸೂಚ್ಯಾಂಕ (1960–100) 3944 ಅಂಶಗಳಿಗೆ ವಿಲೀನಗೊಳಿಸಲಾಗಿದೆ. ರಾಜ್ಯ ಸರಾಸರಿ ಗ್ರಾಹಕ ಬೆಲೆ ಸೂಚ್ಯಾಂಕ 3944 ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ 4 ಪೈಸೆಯಂತೆ ತುಟ್ಟಿ ಭತ್ಯೆ ನೀಡತಕ್ಕದ್ದು.

ತುಟ್ಟಿಭತ್ಯೆ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಮಾಡಲಾಗುತ್ತದೆ. ಹಿಂದಿನ ಕ್ಯಾಲೆಂಡರ್ ವರ್ಷದ 12 ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ಸರಾಸರಿ ಆಧಾರದ ಮೇಲೆ ಏಪ್ರಿಲ್ ಮೊದಲನೇ ದಿನಾಂಕದಂದು ಪ್ರತಿ ವರ್ಷ ಲೆಕ್ಕಾಚಾರ ಮಾಡತಕ್ಕದ್ದು ಅಲ್ಲದೇ ಗ್ರಾಹಕ ಬೆಲೆ ಸೂಚ್ಯಂಗಳ ಸಂಖ್ಯೆಯ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ಲೆಕ್ಕ ಹಾಕಲಾಗುತ್ತದೆ. ಆದ್ದರಿಂದ, ಮೊದಲ ಲೆಕ್ಕಾಚಾರವು ಗ್ರಾಹಕ ಬೆಲೆ

ಸೂಚ್ಯಂಕದ (ಜನವರಿ 2010 ರಿಂದ ಡಿಸೆಂಬರ್ 2010)ರ ಸರಾಸರಿ ಆಧಾರದ ಮೇಲೆ 2011 ಏಪ್ರಿಲ್ 1ನೇ ತಾರೀಖಿನಿಂದ ಜಾರಿಗೆ ಬರುತ್ತದೆ.

1. ದಿನಗೂಲಿ ಗಳಿಕೆದಾರರ ಸಂದರ್ಭದಲ್ಲಿ ಮಾಸಿಕ ವೇತನ ದರಗಳನ್ನು 26 ದಿನಗಳಿಂದ ವಿಭಾಗಿಸಿ, 4 ರಜಾ ದಿನಗಳಿಗೆ ವೇತನವನ್ನು ನೀಡುವುದೂ ಸೇರಂತೆ ಲೆಕ್ಕ ಹಾಕತಕ್ಕದ್ದು.

**ತುಟ್ಟಿಭತ್ಯೆಯನ್ನು ಲೆಕ್ಕಾಚಾರ ಮಾಡುವ ವಿಧಾನ:–**

ಅ) ಮಾಸಿಕ ವೇತನವನ್ನು ಪಡೆಯುವವರು:–
ಪ್ರತಿ ವರ್ಷ ಹೆಚ್ಚಾಗುವ ಸಿ.ಪಿ.ಐ. ಅಂಶಗಳು x ತುಟ್ಟಿಭತ್ಯಯ ದರ x 30 ದಿನಗಳು = ತುಟ್ಟಿಭತ್ಯೆ.

ಆ) ದಿನಗೂಲಿ ವೇತನ ಪಡೆಯುವವರು:–

$$\frac{\text{ಪ್ರತಿ ವರ್ಷ ಹೆಚ್ಚಾಗುವ ಸಿ.ಪಿ.ಐ. ಅಂಶಗಳು x ತುಟ್ಟಿಭತ್ಯೆಯ ದರ x 30 = ತುಟ್ಟಿಭತ್ಯೆ}}{26}$$

2. ಮಹಿಳೆಯರು ಮತ್ತು ಪುರುಷರು ಒಂದೇ ರೀತಿಯ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಉಭಯತ್ರರಿಗೂ ಸಮಾನ ದರದ ವೇತನಗಳನ್ನು ಸಂದಾಯ ಮಾಡತಕ್ಕದ್ದು.

3. ಪ್ರಸ್ತುತ ಪಾವತಿಸುತ್ತಿರುವ ವೇತನ ದರವು ಹೆಚ್ಚಾಗಿದ್ದಲ್ಲಿ ಆ ಹೆಚ್ಚಾಗಿರುವ ದರಗಳ ವೇತನವನ್ನು ಸಂದಾಯ ಮಾಡುವುದನ್ನು ಮುಂದುವರೆಸತಕ್ಕದ್ದು.

4. ಅಧಿಸೂಚನೆಯಲ್ಲಿ ವರ್ಗವನ್ನು ನಮೂದಿಸದೆ ಇರುವ ವರ್ಗಗಳ ಕಾರ್ಮಿಕರಿಗೆ ಅದೇ ಸ್ವರೂಪದ ಕೆಲಸ ನಿರ್ವಹಿಸುತ್ತಿರುವ ಇತರೆ ವರ್ಗದ ಕಾರ್ಮಿಕರಿಗೆ ಪಾವತಿ ಮಾಡುತ್ತಿರುವ ವೇತವನ್ನು ಸಂದಾಯ ಮಾಡತಕ್ಕದ್ದು.

5. ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ 8 ಗಂಟೆಗಳ ಕೆಲಸದ ವೇತನವು ಅದೇ ತರಹದ ಕೆಲಸ ಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರಕೂಡದು. ಒಂದು ದಿನದ ಕೆಲಸ ಎಂದರೆ8 ಗಂಟೆಗಳ ಕೆಲಸ ಎಂದು ತಿಳಿಯತಕ್ಕದ್ದು. ಕಾರ್ಮಿಕರನ್ನು 8 ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ ಅಂತಹ ಕಡಿಮೆ ಅವಧಿಗೆ ಅನುಗುಣವಾಗಿ ವೇತನವನ್ನು ವರ್ಗದ ದಿನದ ಅಥವಾ ತಿಂಗಳ ವೇತನದ ಆಧಾರದ ಮೇಲೆ ಲೆಕ್ಕ ಹಾಕುವುದು.

6. ದಿನಗೂಲಿ ನೌಕರರಿಗೆ ಅವರ ದಿನದ ವೇತನ ದರಗಳನ್ನು ಕಂಡು ಹಿಡಿಯಬೇಕಾದಲ್ಲಿ ತಿಂಗಳ ವೇತನ ದರವನ್ನು 26 ರಿಂದ ಭಾಗಿಸಬೇಕು ಭಾಗಿಸಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸಬೇಕು.

7. ಸಂಸ್ಥೆಯಲ್ಲಿ ನಿಗಧಿಪಡಿಸಿರುವ ವಾರದ ರಜೆ ಅಥವಾ ಹಬ್ಬದ ರಜಾ ದಿನಗಳಲ್ಲಿ ಕೆಲಸ ಮಾಡುವ ಕಾರ್ಮಿಕಗೆ ಕನಿಷ್ಠ ವೇತನ ಕಾಯ್ದೆ ಮತ್ತು ನಿಯಮಗಳಿಗೆ ಒಳಪಟ್ಟು ಸಾಮಾನ್ಯ ವೇತನದ ಎರಡುಪಟ್ಟು ವೇತನವನ್ನು ಪಾವತಿ ಮಾಡತಕ್ಕದ್ದು.

8. ಕೆಲಸಗಾರರು ದಿನದ ನಿಗಧಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ನಿರ್ವಹಿಸಿದಲ್ಲಿ ಅಂತಹ ಹೆಚ್ಚುವರಿ ಅವಧಿ ಕೆಲಸಕ್ಕೆ ಆತನ ವೇತನದ ಎರಡುಪಟ್ಟು ವೇತನವನ್ನು ಪಾವತಿಸತಕ್ಕದ್ದು.

9. ವೇತನ ಲೆಕ್ಕಾಚಾರದಲ್ಲಿ ಚಿಲ್ಲರೆ ಬಂದ ಪಕ್ಷದಲ್ಲಿ ಅದನ್ನು ಸಮೀಪದ 50 ಪೈಸೆಗೆ ಪೂರ್ಣಗೊಳಿಸುವುದು.

10. ಅಪ್ರೆಂಟೀಸ್‌ಗಳಿಗೆ ಆ ವರ್ಗದ ನೌಕರರು ಪಡೆಯುತ್ತಿರುವ ವೇತನದ ಪ್ರತಿಶತ 75 ರಷ್ಟು ವೇತನವನ್ನು ಶಿಷ್ಯ ವೇತನವನ್ನಾಗಿ ಪಾವತಿಸತಕ್ಕದ್ದು.

11. ಕುಶಲ: ಕುಶಲ ಕೆಲಸಗಾರರು ಅಂದರೆ ಸ್ವತಂತ್ರವಾಗಿ, ಪರಿಣಾಮಕಾರಿಯಾಗಿ ಮತ್ತು ಕೆಲಸವನ್ನು ಸರಿಯಾಗಿ ಮಾಡಬಲ್ಲ ಸಾಮರ್ಥ್ಯವುಳ್ಳ ಕಾರ್ಮಿಕ, ಅವಶ್ಯವಿದ್ದರೆ ಸರಳವಾದ ನಕ್ಷೆಗಳನ್ನು ಓದಿ ಮತ್ತು ಕೆಲಸ ಮಾಡುವ ಸಾಮರ್ಥ್ಯವುಳ್ಳವನಾಗಿರಬೇಕು.

12. ಅರೆ ಕುಶಲ: ತನ್ನ ಕಸುಬಿನ ಬಗ್ಗೆ ಸಾಕಷ್ಟು ಜ್ಞಾನವಿರುವ ಹಾಗೂ ಪುನರಾವರ್ತನೆ ಕೆಲಸ ಮಾಡುವ ಸಾಮರ್ಥ್ಯವುಳ್ಳ ಹಾಗೂ ಯಂತ್ರ ಉಪಕರಣಗಳ ಸಹಾಯದಿಂದ ಸರಳವಾದ ಕೆಲಸಗಳನ್ನು ಮಾಡಬಲ್ಲವರು.

13. ಕುಶಲರಲ್ಲದವರು: ಸ್ವತಂತ್ರವಾದ ನಿರ್ಣಯದ ಅವಶ್ಯಕತೆಯಿಲ್ಲದ ಅಥವಾ ಹಿಂದಿನ ಅನುಭವ ಇಲ್ಲದೆ ಅದರೆ ಉದ್ಯೋಗದ ವಾತಾವರಣದ ಪರಿಚಯವಿರುವ ಕೆಲಸ ಮಾಡುವುದು. ದೈಹಿಕ ಪರಿಶ್ರಮವಿಲ್ಲದೆ ವಿವಿಧ ರೀತಿಯ ವಸ್ತುಗಳು ಮತ್ತು ಸಾಮಾನ್ಯ ಜ್ಞಾನವಿರುವ ಕೆಲಸವನ್ನು ಮಾಡುವವರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೊಸ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಂಗಾಮಿ ಗ್ರಾಮ ಪಂಚಾಯಿತಿ ನೌಕರರುಗಳಿಗೆ ಸರ್ಕಾರದ ಕಾರ್ಮಿಕ ಆಯುಕ್ತರ ಅರೆ ಸರ್ಕಾರಿ ಪತ್ರ ಸಂಖ್ಯೆ: ಪಿಟಿಎನ್/ಸಿಆರ್–188/09–10, ದಿನಾಂಕ: 07–01–2010ರನ್ವಯ ಸದರಿ ನೌಕರರುಗಳಿಗೆ ಕನಿಷ್ಠ ವೇತನವನ್ನು ಪಾವತಿಸಲಾಗುತ್ತಿರುತ್ತದೆ.

ಕಾನೂನು ಕೋಶದ ಮುಖ್ಯಸ್ಥರು ದಿನಾಂಕ: 04/05/2011ರಂದು ಕಾರ್ಮಿಕ ಇಲಾಖೆಯ ಪ್ರಸ್ತುತ ಅಧಿಸೂಚನೆ ಅನ್ವಯ ಪರಿಷ್ಕೃತ ವೇತನ ಶ್ರೇಣಿಯನ್ನು ಹಂಗಾಮಿ ಕಾರ್ಮಿಕರುಗಳಿಗೆ ನೀಡುವುದರಲ್ಲಿ ಯಾವುದೇ ಬಾದಕವಿರುವುದಿಲ್ಲವೆಂದು ಅಭಿಪ್ರಾಯ ನೀಡಿರುತ್ತಾರೆ.

ಮೇಲ್ಕಂಡ ವಿವರವಾದ ಎಲ್ಲಾ ಅಂಶಗಳನ್ವಯ ಸರ್ಕಾರದ ಕಾರ್ಮಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಕಾಇ 152 ಎಲ್‌ಡಬ್ಲ್ಯುಎ 2008, ದಿನಾಂಕ: 21–02–2011ರ ಸರ್ಕಾರದ ಕಾರ್ಮಿಕ ಇಲಾಖೆಯ ಅಧಿಸೂಚನೆಯನ್ನು ಪಾಲಿಕೆಯಲ್ಲಿ ಅಳವಡಿಸಿಕೊಂಡು, ಪಾಲಿಕೆಯ ಮಹದೇವಪುರ ವಲಯ, ಬೊಮ್ಮನಹಳ್ಳಿ ವಲಯ, ದಾಸರಹಳ್ಳಿ ವಲಯ, ರಾಜರಾಜೇಶ್ವರಿನಗರ ವಲಯ ಮತ್ತು ಯಲಹಂಕ ವಲಯಗಳಲ್ಲಿ ಗ್ರಾಮ ಪಂಚಾಯಿತಿಗಳಿಂದ ಮುಂದುವರೆದು ಕಾರ್ಯನಿರ್ವಹಿಸುತ್ತಿರುವ ಹಂಗಾಮಿ ಗ್ರಾಮ ಪಂಚಾಯಿತಿ ನೌಕರರುಗಳಿಗೆ ಸದರಿ ಅಧಿಸೂಚನೆ ಹೊರಡಿಸಿದ ದಿನಾಂಕ: 21/02/2011ರಿಂದ ಅನ್ವಯವಾಗುವಂತೆ, ಪರಿಷ್ಕೃತ ಕನಿಷ್ಠ ವೇತನವನ್ನು ಪಾವತಿಸುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ : 01–06–2011ರ ಟಿಪ್ಪಣಿಯನ್ನು ಒಪ್ಪುತ್ತಾ, ಸರ್ಕಾರದ ಅಧಿಸೂಚನೆಯು ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಅನ್ವಯವಾಗುವಂತೆ ಜಾರಿಗೊಳಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.**

## *41]. ವಿಷಯದ ಸಂಖ್ಯೆ: ತೆಆಸ್ಥಾಸ/97/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಸಂಖ್ಯೆ:ಎ3(1)/ಪಿ.ಆರ್/25/09–10, ದಿನಾಂಕ ಃ 01–06–2011 ರಲ್ಲಿ ವಿವರಿಸಿರುವಂತೆ, ದಿನಾಂಕ : 19–08–2003 ರಲ್ಲಿ ಮಾಡಿದ ಗುತ್ತಿಗೆ ಕರಾರಿನ ಪ್ರಕಾರ ಶ್ರೀ.ನಾಗಪ್ಪ ಮಾರಡಗಿ ಬೆಂಗಳೂರು ನಿವಾಸಿ ಇವರಿಗೆ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ 15, ರಾಜಾಜಿನಗರ, 2ನೇ ಬ್ಲಾಕ್, 19ನೇ ಅಡ್ಡರಸ್ತೆ, 26ನೇ ಮುಖ್ಯರಸ್ತೆಯ ಕನ್‌ಜರ್‌ವೇನ್‌ಸಿ ರಸ್ತೆಯ ಕೊನೆಯ ಭಾಗದಲ್ಲಿರುವ 20X12+8/2 (200) ಚದರ ಅಡಿ ಜಾಗವನ್ನು ಜೀವನ ನಿರ್ವಹಣೆಗಾಗಿ ವಾಣಿಜ್ಯ ಉದ್ದೇಶಕ್ಕೆ ಮಾಹೆಯಾನ ಗುತ್ತಿಗೆ ದರ ರೂ.2100/–ಕ್ಕೆ ಮೂರು ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿರುತ್ತದೆ.

ಶ್ರೀ.ನಾಗಪ್ಪ ಮಾರಡಗಿ ರವರು ದಿನಾಂಕ:18–09–2008 ವಿಧಾನ ಸಭೆಯ ಅರ್ಜಿ ಸಮಿತಿಗೆ ಅರ್ಜಿ ಸಲ್ಲಿಸಿ ದಿನಾಂಕ:19–08–2006ಕ್ಕೆ ಗುತ್ತಿಗೆ ಅವಧಿ ಮುಗಿದಿದ್ದು, ಈ ಗುತ್ತಿಗೆಯನ್ನು 35 ವರ್ಷಗಳ ಕಾಲ ಮುಂದುವರೆಸಲು ಹಾಗೂ ಆ ಜಾಗವನ್ನು ಸರ್ಕಾರಿ ಬೆಲೆಗೆ ಕೊಡಲು ಕೋರಿಕೊಂಡಿರುತ್ತಾರೆ.

ಸರ್ಕಾರವು ಆದೇಶ ಸಂಖ್ಯೆ:287 ಎಂಎನ್‌ಜಿ 2006, ದಿನಾಂಕ:16–02–2009 ರಲ್ಲಿ ಶ್ರೀ.ನಾಗಪ್ಪ ಮಾರಡಗಿ ಇವರಿಗೆ ಅವರ ಜೀವನ ನಿರ್ವಹಣೆಗಾಗಿ ನೀಡಿದ ಪಾಲಿಕೆ ಸ್ವತ್ತಿನ ಗುತ್ತಿಗೆ ಅವಧಿಯನ್ನು ದಿನಾಂಕ:26–12–2005 ರಿಂದ ಮೊದಲು 3 ವರ್ಷಗಳ ಅವಧಿಗೆ ತಿಂಗಳಿಗೆ

ರೂ.2100/– ರಂತೆ ಉಳಿದ 7 ವರ್ಷಗಳ ಅವಧಿಗೆ ತಿಂಗಳಿಗೆ ರೂ.4666/– ರಂತೆ ಒಟ್ಟು 10 ವರ್ಷಗಳ ಕಾಲ ಗುತ್ತಿಗೆ ಅವಧಿಯನ್ನು ಮುಂದುವರೆಸಲಾಗಿರುತ್ತದೆ.

ತದನಂತರ ಗುತ್ತಿಗೆದಾರರು ಅರ್ಜಿಯನ್ನು ಸಲ್ಲಿಸಿ ಗುತ್ತಿಗೆ ಅವಧಿ ಕರಾರು ಮಾಡಿದ ದಿನಾಂಕ:19–08–2003 ರಂದಾಗಿದ್ದು, 3 ವರ್ಷದ ಅವಧಿ ದಿನಾಂಕ:19–08–2006ಕ್ಕೆ ಮುಕ್ತಾಯಗೊಳ್ಳುತ್ತದೆ. ಸರ್ಕಾರವು ಮುಂದುವರೆಸಿದ 10 ವರ್ಷದ ಅವಧಿ ದಿನಾಂಕ:19–08–2006ಕ್ಕೆ ಪ್ರಾರಂಭವಾಗಬೇಕಾಗುತ್ತದೆ. ಆದರೆ ಸರ್ಕಾರಿ ಆದೇಶದಲ್ಲಿ ತಪ್ಪಾಗಿ ದಿನಾಂಕ 26-12–2005 ಎಂಬುದಾಗಿ ನಮೂದಾಗಿರುತ್ತದೆ. ಇದನ್ನು ಸರಿಪಡಿಸಿ ಹಾಗೂ 10 ವರ್ಷದ ಅವಧಿಯಲ್ಲಿ ಪ್ರಾರಂಭದ 3 ವರ್ಷಗಳಲ್ಲಿ ಮಾಸಿಕ ಗುತ್ತಿಗೆ ದರ 2100/– ಇರುವ ಹಾಗೆ ಸಂಪೂರ್ಣ 10 ವರ್ಷದ ಅವಧಿಗೂ ಮಾಹೆಯಾನ ಬಾಡಿಗೆ ರೂ.2100/– ಎಂಬುದಾಗಿ ಪರಿಷ್ಕರಿಸಿ ಸರ್ಕಾರಿ ಆದೇಶ ಹೊರಡಿಸಲು ಕೋರಿರುತ್ತಾರೆ.

ದಾಖಲಾತಿ ಪರಿಶೀಲಿಸಲಾಗಿ ಶ್ರೀ.ನಾಗಪ್ಪ ಮಾರಡಗಿ ಯವರು ಗುತ್ತಿಗೆ ಮೊತ್ತ ಮಾಹೆಯಾನ ರೂ.2100/– ರಂತೆ ಡಿಸೆಂಬರ್ 2008ರ ವರೆಗೆ ಸಂದಾಯ ಮಾಡಿರುತ್ತಾರೆ. ಉಳಿದ ಅವಧಿಗೆ ಗುತ್ತಿಗೆ ಹಣ ಸಂದಾಯ ಮಾಡಿರುವುದಿಲ್ಲ.

ದಿನಾಂಕ: 26–05–2011 ರಲ್ಲಿ ನಡೆದ ವಿಧಾನ ಸಭೆಯ ಅರ್ಜಿ ಸಮಿತಿ ಸಭೆಯಲ್ಲಿ ಈ ವಿಷಯ ಕೂಲಂಕೂಷವಾಗಿ ಚರ್ಚಿಸಿದ್ದು, ಶ್ರೀ.ನಾಗಪ್ಪ ಮಾರಡಗಿಯ ಕೋರಿಕೆಯಂತೆ ಮಾಸಿಕ ಗುತ್ತಿಗೆ ಹಣವನ್ನು ರೂ. 2100/–ಕ್ಕೆ ಪರಿಷ್ಕರಿಸಿ 10 ವರ್ಷದ ಅವಧಿಗೆ ನೀಡಲಾಗಿರುವ ಗುತ್ತಿಗೆಯನ್ನು ದಿನಾಂಕ:20–08–2006 ರಿಂದ 19–08–2036ರ ವರೆಗೆ 30 ವರ್ಷಗಳ ಅವಧಿಗೆ ಗುತ್ತಿಗೆ ಮುಂದುವರೆಸಲು ಅರ್ಜಿ ಸಮಿತಿಯು ಸೂಚಿಸಿರುತ್ತದೆ.

ಈ ಪ್ರಸ್ತಾಪಕ್ಕೆ ನಗರಾಭಿವೃದ್ಧಿ ಇಲಾಖೆ ಮತ್ತು ಪಾಲಿಕೆಯ ಅಧಿಕಾರಿಗಳು ಅರ್ಜಿ ಸಮಿತಿಯ ನಿರ್ದೇಶನವನ್ನು ಪಾಲಿಕೆ ಮತ್ತು ಸರ್ಕಾರಕ್ಕೆ ಪ್ರಸ್ತಾಪಿಸಲಾಗುವುದೆಂದು ಸಮ್ಮತಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಸರ್ಕಾರಿ ಆದೇಶ ದಿನಾಂಕ:16–02–2009 ನ್ನು ಪರಿಷ್ಕರಿಸಿ ದಿನಾಂಕ:20–08–2006 ರಿಂದ 19–08–2036 ರವರೆಗೆ 30 ವರ್ಷಗಳ ಅವಧಿಗೆ ಗುತ್ತಿಗೆ ದರ ಮಾಸಿಕ ರೂ.2100/– ರಂತೆ ನವೀಕರಿಸಿ ಪರಿಷ್ಕೃತ ಆದೇಶ ಹೊರಡಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ : 01–06–2011ರ ಟಿಪ್ಪಣಿಯನ್ನು ಒಪ್ಪಿದೆ.**

## *421]. ವಿಷಯದ ಸಂಖ್ಯೆ: ತೆಆಸ್ಥಾಸ/98/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 06–06–2011 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೇರೋಹಳ್ಳಿ ಉಪ–ವಿಭಾಗದ ವಾರ್ಡ್ ನಂ.40 (ದೊಡ್ಡಬಿದರಕಲ್ಲು)ರ ವ್ಯಾಪ್ತಿಯ ಪ್ರದೇಶವು ಹಿಂದುಳಿದ ಪ್ರದೇಶವಾಗಿದ್ದು, ಒಳಚರಂಡಿ ವ್ಯವಸ್ಥೆಯಿಲ್ಲದೆ ಮನೆಗಳ ಮುಂದೆ ಸೋಕ್ ಪೀಟ್ ನಿರ್ಮಿಸಿಕೊಂಡಿರುತ್ತಾರೆ. ಸದರಿ ಸೋಕ್ ಪೀಟ್‌ಗಳು ತುಂಬಿ ರಸ್ತೆಯಲ್ಲಿ ಹರಿಯುತ್ತಿರುವುದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗಿದ್ದು, ಸದರಿ ವಾರ್ಡಿನಲ್ಲಿ ತುರ್ತಾಗಿ ಒಳಚರಂಡಿ ಕಾಮಗಾರಿಯನ್ನು ನಿರ್ವಹಿಸಲು ವಾರ್ಡ್ ಸದಸ್ಯರಾದ ಶ್ರೀಮತಿ ಟಿ.ಎ. ಗಾಯಿತ್ರಿ ವಾರ್ಡ್ ಸಂಖ್ಯೆ: 40 ರವರು ಈ ಕೆಳಕಂಡ ಸ್ಥಳಗಳಲ್ಲಿ ಕಾಮಗಾರಿ ಕೈಗೊಳ್ಳಲು ಸೂಚಿಸಿರುತ್ತಾರೆ.

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ಲಕ್ಷಗಳಲ್ಲಿ) |
|---|---|---|
| 1 | Construction of Bridge across SWD near Shiridi Sai Baba nagara 1st cross in Doddabidrakallu ward No.40 of Herohalli sub division. | 9.00 |
| 2 | Construction of Bridge across SWD near Shiridi Sai Baba nagara 2nd cross in Doddabidrakallu ward No.40 of Herohalli sub division. | 9.20 |

| | | |
|---|---|---|
| 3 | Construction of Bridge across SWD near SLV Industrial area in Doddabidrakallu ward No.40 of Herohalli sub division. | 10.00 |
| 4 | Construction of Bridge across SWD near Link road to Thippenahalli to Thirumalapura in Doddabidrakallu ward No.40 of Herohalli sub division. | 7.00 |
| 5 | Construction of Bridge across SWD near Link road of Hosahalli to Magadi road in Doddabidrakallu ward No.40 of Herohalli sub division. | 10.00 |
| 6 | Construction of Bridge across SWD near Gangamehamaiah Badavane in Doddabidrakallu ward No.40 of Herohalli sub division. | 10.00 |
| 7 | Construction of Bridge across SWD near Indra Nagara 3rd & 4th cross in Doddabidrakallu ward No.40 of Herohalli sub division. | 19.90 |
| 8 | Construction of Bridge across SWD near Link road of Gollarapalya pipe line road in Doddabidrakallu ward No.40 of Herohalli sub division. | 19.00 |
| 9 | Construction of Bridge across SWD near Bhavani Nagara in Doddabidrakallu ward No.40 of Herohalli sub division. | 10.00 |
| 10 | Construction of Bridge across SWD near link road of Sapthagiri Badavane & Doddabidrakallu village in Doddabidrakallu ward No.40 of Herohalli sub division. | 19.99 |
| 11 | Construction of Bridge across SWD near Raghavendra nagara in Doddabidrakallu ward No.40 of Herohalli sub division. | 7.00 |
| 12 | Construction of Bridge across SWD near Narayana rao house in Doddabidrakallu ward No.40 of Herohalli sub division. | 5.00 |
| 13 | Construction of Bridge across SWD near Gurushree school in Doddabidrakallu ward No.40 of Herohalli sub division. | 8.00 |
| 14 | Construction of Bridge across SWD near Doddabidrakallu village near Arch in Doddabidrakallu ward No.40 of Herohalli sub division. | 10.00 |
| 15 | Construction of Bridge across SWD near Wipro layout in Doddabidrakallu ward No.40 of Herohalli sub division. | 10.00 |
| 16 | Construction of Bridge across SWD near Thippenahalli govt school in Doddabidrakallu ward No.40 of Herohalli sub division. | 5.92 |
| 17 | Construction of Bridge across SWD near link road to Doddabidrakallu & CN Palya in Doddabidrakallu ward No.40 of Herohalli sub division. | 10.00 |
| 18 | Construction of drain in SLV industrial in Doddabidrakallu ward No.40 of herohalli sub division. | 19.99 |
| | **Total** | **200.00** |

ಮೇಲ್ಕಂಡ ಕಾಮಗಾರಿಗಳಿಗೆ ಪ್ರಸ್ತುತ ತುರ್ತು ಕಾಮಗಾರಿಗಳಿಗೆ ಮೀಸಲಿಟ್ಟ ಅನುದಾನ ಪಿ0541 ಲೆಕ್ಕ ಶೀರ್ಷಿಕೆಯಡಿ 2011–12ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲು ಹಾಗೂ ಪ್ರಸ್ತಾವನೆಯನ್ನು ಅನುಮೋದಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

<u>ನಿರ್ಣಯ :–   ಆಯುಕ್ತರ ದಿನಾಂಕ : 06–06–2011ರ ಟಿಪ್ಪಣಿಯನ್ನು ಒಪ್ಪಿದೆ.</u>

## *43]. ವಿಷಯದ ಸಂಖ್ಯೆ: ತೆಆಸ್ಥಾಸ/99/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 06–06–2011ರಲ್ಲಿ ವಿವರಿಸಿರುವಂತೆ, ಹೇರೋಹಳ್ಳಿ ವಾರ್ಡ್ ನಂ.72ರ ಪ್ರದೇಶವು ಈ ಹಿಂದೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿದ್ದು, 110 ಹಳ್ಳಿಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರ್ಪಡೆ ಮಾಡಿದಾಗ ಹೇರೋಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪಿಯ ಪ್ರದೇಶವು ಸೇರ್ಪಡೆಯಾಗಿರುತ್ತದೆ. ಸದರಿ ವಾರ್ಡಿನಲ್ಲಿ ನೀರು ಸರಬರಾಜು ಹಾಗೂ ಒಳಚರಂಡಿ ವ್ಯವಸ್ಥೆಯು ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯವರಿಗೆ ಹಸ್ತಾಂತರವಾಗಿರುವುದಿಲ್ಲ. ಹಾಗೂ ಸದರಿ ವಾರ್ಡ್ ವ್ಯಾಪ್ತಿಯಲ್ಲಿ ನೀರು ಸರಬರಾಜು ವ್ಯವಸ್ಥೆಯು ಹಾಗೂ ಒಳಚರಂಡಿ ವ್ಯವಸ್ಥೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ನಿರ್ವಹಿಸಿತ್ತಿದ್ದು, ವಾರ್ಡ್ ಸಂಖ್ಯೆ:72ರ ವ್ಯಾಪ್ತಿಯ ಕೆಂಪೇಗೌಡನಗರ ಮತ್ತು ಮಹದೇಶ್ವರನಗರದಲ್ಲಿ ಒಳಚರಂಡಿ ವ್ಯವಸ್ಥೆಯು ತೀರ ಹದಗೆಟ್ಟಿದ್ದು ರಸ್ತೆಗಳ ತುಂಬ ಶೌಚಾಲಯ ಗುಂಡಿಗಳಿಂದ ಕೂಡಿದ್ದು, ಸದರಿ ಪ್ರದೇಶಗಳಲ್ಲಿ ಭಾರಿ ವಾಹನಗಳು ಓಡಾಡುವುದರಿಂದ ಶೌಚಾಲಯ ಗುಂಡಿಗಳ ಮೇಲಿನ ಕಲ್ಲು ಚಪ್ಪಡಿಗಳು ಹೊಡೆದು ರಸ್ತೆಯ ತುಂಬ ಶೌಚಾಲಯದ ನೀರು ತುಂಬಿರುತ್ತದೆ.

ಇದರಿಂದ ಸಾರ್ವಜನಿಕರು, ಶಾಲಾ ಮಕ್ಕಳು, ವಯೋವೃದ್ದರು ರಸ್ತೆಯಲ್ಲಿ ಓಡಾಡಲು ತುಂಬ ತೊಂದರೆಯಾಗಿರುತ್ತದೆ ಎಂದು ವಾರ್ಡ್ ಸಂಖ್ಯೆ:72ರ ಸದಸ್ಯರು ತಿಳಿಸಿರುತ್ತಾರೆ. ಅದರಂತೆ, ಜಂಟಿ ಆಯುಕ್ತರು (ರಾಜರಾಜೇಶ್ವರಿನಗರ) ರವರು ಈ ಕೆಳಕಂಡ ಸ್ಥಳಗಳಲ್ಲಿ ಯು.ಜಿ.ಡಿ ಲೈನ್ಸ್‌ಗಳನ್ನು ಅಳವಡಿಸಲು ಅನುಮೋದನೆಯನ್ನು ಕೋರಿರುತ್ತಾರೆ.

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ಲಕ್ಷಗಳಲ್ಲಿ) |
|---|---|---|
| 1 | Providing UGD lines on Western side of Kempegowdanagara main road in ward No.72 of Herohallu sub division. | 49.95 |
| 2 | Providing UGD lines on Eastern side of Kempegowdanagara main road in ward No.72 of Herohalli sub division | 49.95 |
| 3 | Providing UGD lines on Eastern side of Mahadeshwaranagara main road in ward No.72 of Herohalli sub division | 49.95 |
| 4 | Providing UGD lines on Western side of Mahadeshwaranagara main road in ward No.72 of Herohalli sub division | 49.95 |
| | **Total Amount in Rs.** | **199.80** |

ಮೇಲ್ಕಂಡ ಕಾಮಗಾರಿಗಳಿಗೆ ಪ್ರಸ್ತುತ **ತುರ್ತು ಕಾಮಗಾರಿಗಳಿಗೆ ಮೀಸಲಿಟ್ಟ ಅನುದಾನ ಪಿ0541** ಲೆಕ್ಕ ಶೀರ್ಷಿಕೆಯಡಿ 2011–12ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲು ಹಾಗೂ ಪ್ರಸ್ತಾವನೆಯನ್ನು ಅನುಮೋದಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ : 06–06–2011ರ ಟಿಪ್ಪಣಿಯನ್ನು ಒಪ್ಪಿದೆ.**

## *44]. ವಿಷಯದ ಸಂಖ್ಯೆ: ತೆಆಸ್ಥಾಸ/100/2011–12*

ಆಯುಕ್ತರ ಟಿಪ್ಪಣಿ ದಿನಾಂಕ 06–06–2011ರಲ್ಲಿ ವಿವರಿಸಿರುವಂತೆ, ಷೆಡ್ಯೂಲ್ ಕ್ಯಾಸ್ಟ್ ವೆಲ್‌ಫೇರ್ ಅಸೋಸಿಯೇಷನ್ ಇವರ ಕಾರ್ಯದರ್ಶಿ ರವರ ಪರವಾಗಿ ಶ್ರೀ ಪಿ.ಸಿ. ಮೋಹನ್, ಲೋಕಸಭಾ ಸದಸ್ಯರು (ಬೆಂಗಳೂರು ಸೆಂಟ್ರಲ್) ಮತ್ತು ಶ್ರೀಮತಿ ಎಂ. ವಸಂತ ಕುಮಾರಿ ನಗರ ಪಾಲಿಕೆ ಸದಸ್ಯರು, ಕಾಟನ್ ಪೇಟೆ ವಾರ್ಡ್ ಪ್ರತ್ಯೇಕವಾಗಿ ಪತ್ರ ಸಲ್ಲಿಸಿ ಗುತ್ತಿಗೆ ಅವಧಿ ನವೀಕರಿಸಲು ಪತ್ರ ಸಲ್ಲಿಸಿರುತ್ತಾರೆ.

ಸದರಿ ಗುತ್ತಿಗೆ ಜಾಗದ ಬಗ್ಗೆ 1974 ಕೆ.ಪಿ.ಪಿ. ಕಾಯ್ದೆ ಆಕ್ಟ್ ನಿಯಮ 4(1)ರ ರೀತ್ಯಾ ದಿನಾಂಕ 09–08–2010ರಂದು 1ನೇ ಕ್ರಾಸ್, ಮಾಗಡಿ ರಸ್ತೆ, ಕೇಶವ ನಗರದಲ್ಲಿರುವ 20 X 28 ಮತ್ತು 14.3 X 12.6 ಜಾಗದಲ್ಲಿ ದೇವಸ್ಥಾನ ಹಾಗೂ ವಾಚನಾಲಯ ಗುತ್ತಿಗೆ ಅವಧಿ ನವೀಕರಿಸಿಕೊಳ್ಳಲು ಅನಧಿಕೃತವಾಗಿ ನಡೆಸುತ್ತಿರುವ ಮೇರೆಗೆ ನೋಟಿಸ್ ಜಾರಿ ಮಾಡಲಾಗಿತ್ತು.

ಸದರಿ ಗುತ್ತಿಗೆ ಜಾಗವನ್ನು ಷೆಡ್ಯೂಲ್ ಕ್ಯಾಸ್ಟ್ ವೆಲ್ ಫೇರ್ ಅಸೋಸಿಯೇಷನ್ ರವರಿಗೆ ದಿನಾಂಕ 09–04–1962ರಲ್ಲಿ ನೊಂದಣಿ ಸಂಖ್ಯೆ: 143/62–63, 25 ವರ್ಷಗಳ ಅವಧಿಗೆ ತಿಂಗಳಿಗೆ ರೂ.6/–ರಂತೆ ಗುತ್ತಿಗೆಗೆ ನೀಡಲಾಗಿದೆ.

ಸದರಿ ಸ್ಥಳ 78 X $\frac{15+20}{2}$ ಮತ್ತು 14.3 X 12.6 ಇರುತ್ತದೆ. ಅನಂತರ ನಗರ ಪಾಲಿಕೆ ರವರು 40 X 15ರ ಅಳತೆಯ ಜಾಗದಲ್ಲಿ ಅಂಗನವಾಡಿ ಕೇಂದ್ರ (ನರ್ಸರಿ ಸ್ಕೂಲ್) ಮತ್ತು ಹೊಲಿಗೆ ತರಬೇತಿ ಕೇಂದ್ರ ಇರುತ್ತದೆ. ಉಳಿದ ಭಾಗ 20 X 30ರ ಭಾಗದಲ್ಲಿ ದೇವಸ್ಥಾನ ನಿರ್ಮಿಸಿರುತ್ತಾರೆ. ಹಾಗೂ 14.3 X 12.6 ಜಾಗದಲ್ಲಿ ವಾಚನಾಲಯ ಇರುತ್ತದೆ. ತಿಂಗಳಿಗೆ ರೂ.6/–ರಂತೆ ದಿನಾಂಕ 01–06–1968ರ ವರೆಗೆ ಗುತ್ತಿಗೆ ಹಣ ಪಾವತಿ ಮಾಡಿರುತ್ತಾರೆ. ದಿನಾಂಕ 01–07–1968ರಿಂದ ಇಲ್ಲಿಯವರೆಗೆ ರೂ.35,226/– ಬಾಕಿ ಇರುತ್ತದೆ.

ಆದ್ದರಿಂದ ಬಾಕಿ ಇರುವ ಗುತ್ತಿಗೆ ಹಣವನ್ನು ಪಾವತಿಸಿಕೊಂಡು ಗುತಿಗೆ ಅವಧಿ ನವೀಕರಿಸುವುದೇ ಅಥವಾ ನಗರ ಪಾಲಿಕೆ ಜಾಗವನ್ನು ತೆರವುಗೊಳಿಸುವುದೇ ಎಂಬ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 06–06–2011ರ ಟಿಪ್ಪಣಿಯನ್ನು ಒಪ್ಪುತ್ತಾ, ಇದುವರೆವಿಗೂ ಬಾಕಿ ಇರುವ ಗುತ್ತಿಗೆ ಹಣವನ್ನು ಪಾವತಿಸಿಕೊಂಡು ಗುತ್ತಿಗೆ ಹಣ ಮಾಸಿಕ ರೂ.100/–ಗಳನ್ನು ನಿಗದಿಪಡಿಸಿ ಐದು ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.**

## *45]. ವಿಷಯದ ಸಂಖ್ಯೆ: ತೆಆಸ್ಥಾಸ/101/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಸ.ಆ/ಟಿ.ಡಿ.ಆರ್/242/2010–11, ದಿನಾಂಕ : 17–02–2010 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಟಿ.ಡಿ.ಆರ್/ಭೂಸ್ವಾಧೀನ ಕಾರ್ಯಗಳಿಗಾಗಿ ನಿವೃತ್ತ ಕಂದಾಯ ಇಲಾಖೆಯ ಅಧಿಕಾರಿ/ನೌಕರರುಗಳನ್ನು ಕೆ.ಎಂ.ಸಿ. ಕಾಯ್ದೆ 1976 ರ ನಿಯಮ 20(ಎ) ರನ್ವಯ ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಅಥವಾ ಇವರ ಸೇವೆಯ ಅಗತ್ಯವಿರುವ ತನಕ ಯಾವುದು ಮೊದಲೋ ಅಲ್ಲಿಯವರೆಗೆ ಅವರ ಹುದ್ದೆಯ ಎದುರು ಕಾಣಿಸಿರುವ ಕ್ರೋಢೀಕೃತ ಮಾಸಿಕ ವೇತನದ (ಸಂಚಿತ ವೇತನ) ಆಧಾರದ ಮೇಲೆ ದಿನಾಂಕ: 03–03–2010 ರಂದು ಉಲ್ಲೇಖ (3) ರನ್ವಯ ನೇಮಕ ಮಾಡಿಕೊಂಡು, ಕರ್ತವ್ಯಕ್ಕೆ ನಿಯುಕ್ತಿಗೊಳಿಸಲಾಗಿತ್ತು.

| ಕ್ರ.ಸಂ | ಹುದ್ದೆ | ಗೌರವಧನ/ಸಂಚಿತ ವೇತನ ರೂ. | ನೇಮಕ ಮಾಡಲಾದ ಹುದ್ದೆಗಳ ಸಂಖ್ಯೆ |
|---|---|---|---|
| 1 | ಸಹಾಯಕ ಆಯುಕ್ತರು | 16,000 | 3 |
| 2 | ತಹಶೀಲ್ದಾರ್‌ರು | 14,000 | 4 |
| 3 | ಶಿರಸ್ತೇದಾರ್‌ರು | 12,000 | 4 |
| 4 | ಕಂದಾಯ ನಿರೀಕ್ಷಕರು/ಪ್ರ.ದ.ಸ | 10,000 | 8 |
| 5 | ಮೋಜಣಿದಾರರು | 10,000 | 8 |
| 6 | ಗ್ರಾಮಲೆಕ್ಕಿಗರು/ದ್ವಿ.ದ.ಸ | 8,000 | 8 |

ಈ ಒಂದು ವರ್ಷದ ಗುತ್ತಿಗೆ ಅವಧಿಯು ದಿನಾಂಕ: 02–03–2011 ಕ್ಕೆ ಅಂತ್ಯವಾಗುತ್ತಿದ್ದು, ಹಾಲಿ ಟಿ.ಡಿ.ಆರ್/ಭೂಸ್ವಾಧೀನ ಕರ್ತವ್ಯ ನಿರ್ವಹಿಸುತ್ತಿರುವ ಈ ಕೆಳಕಂಡ ನಿವೃತ್ತ ಕಂದಾಯ ಇಲಾಖೆಯ ಅಧಿಕಾರಿ/ನೌಕರರುಗಳನ್ನು ದಿನಾಂಕ: 28–02–2011 ರ ಅಪರಾಹ್ನದಿಂದ ಅನ್ವಯವಾಗುವಂತೆ ಬಿಡುಗಡೆಗೊಳಿಸಬೇಕಾಗಿರುತ್ತದೆ.

| ಕ್ರ. ಸಂ. | ನಿವೃತ್ತ ಕಂದಾಯ ಇಲಾಖೆಯ ಅಧಿಕಾರಿ/ನೌಕರರ ಹೆಸರು | ಹುದ್ದೆ | ಕರ್ತವ್ಯ ನಿರ್ವಹಿಸುತ್ತಿರುವ ವಲಯ |
|---|---|---|---|
| 1 | ಶ್ರೀ ಚಿಕ್ಕವೆಂಕಟಪ್ಪ | ನಿವೃತ್ತ ಸಹಾಯಕ ಆಯುಕ್ತರು | ಬೊಮ್ಮನಹಳ್ಳಿ/ದಕ್ಷಿಣ |
| 2 | ಶ್ರೀ ಮುಡುಪಣ್ಣ | ನಿವೃತ್ತ ತಹಶೀಲ್ದಾರ್ | ದಾಸರಹಳ್ಳಿ/ಯಲಹಂಕ |
| 3 | ಶ್ರೀ ಎಂ.ಕೃಷ್ಣಪ್ಪ | ನಿವೃತ್ತ ತಹಶೀಲ್ದಾರ್ | ಮಹದೇವಪುರ/ಪೂರ್ವ |
| 4 | ಶ್ರೀ ಕೆ.ಆರ್.ಮಾಗಡಯ್ಯ | ನಿವೃತ್ತ ತಹಶೀಲ್ದಾರ್ | ಆರ್.ಆರ್.ನಗರ/ಪಶ್ಚಿಮ |
| 5 | ಶ್ರೀ ಕಾಡಯ್ಯ | ನಿವೃತ್ತ ತಹಶೀಲ್ದಾರ್ | ದಕ್ಷಿಣ/ಬೊಮ್ಮನಹಳ್ಳಿ |
| 6 | ಶ್ರೀ ರಾಮಯ್ಯ | ನಿವೃತ್ತ ಶಿರಸ್ತೇದಾರ್ | ಆರ್.ಆರ್.ನಗರ/ ದಾಸರಹಳ್ಳಿ |
| 7 | ಶ್ರೀ ಹೆಚ್.ಎಂ.ತಾರಾನಾಥ್ | ನಿವೃತ್ತ ಶಿರಸ್ತೇದಾರ್ | ಪೂರ್ವ/ ಮಹದೇವಪುರ |
| 8 | ಶ್ರೀ ಹೆಚ್.ಆರ್.ಶಿವಲಿಂಗಯ್ಯ | ನಿವೃತ್ತ ಶಿರಸ್ತೇದಾರ್ | ದಕ್ಷಿಣ/ಬೊಮ್ಮನಹಳ್ಳಿ |
| 9 | ಶ್ರೀ ಸಿ.ಎಂ.ಚಂದ್ರಪ್ಪ | ನಿವೃತ್ತ ಪ್ರ.ದ.ಸ./ಕಂದಾಯ ನಿರೀಕ್ಷಕರು | ಪೂರ್ವ |
| 10 | ಶ್ರೀ ಹೆಚ್.ರಾಮಾಂಜನಯ್ಯ | ನಿವೃತ್ತ ಪ್ರ.ದ.ಸ./ಕಂದಾಯ ನಿರೀಕ್ಷಕರು | ದಾಸರಹಳ್ಳಿ |
| 11 | ಶ್ರೀ ವೀರಭದ್ರಾಚಾರಿ | ನಿವೃತ್ತ ಪ್ರ.ದ.ಸ./ಕಂದಾಯ ನಿರೀಕ್ಷಕರು | ಬೊಮ್ಮನಹಳ್ಳಿ |
| 12 | ಶ್ರೀ ಎನ್.ಜಿ.ಶ್ರೀನಿವಾಸರಾವ್ | ನಿವೃತ್ತ ಪ್ರ.ದ.ಸ./ಕಂದಾಯ ನಿರೀಕ್ಷಕರು | ಮಹದೇವಪುರ |
| 13 | ಶ್ರೀ ಹೆಚ್.ಎಸ್.ನಾರಾಯಣಮೂರ್ತಿ | ನಿವೃತ್ತ ಪ್ರ.ದ.ಸ./ಕಂದಾಯ ನಿರೀಕ್ಷಕರು | ಆರ್.ಆರ್.ನಗರ |
| 14 | ಶ್ರೀ ಬಸವರಾಜ್.ವೈ | ನಿವೃತ್ತ ಪ್ರ.ದ.ಸ./ಕಂದಾಯ ನಿರೀಕ್ಷಕರು | ಕೇಂದ್ರ ಕಛೇರಿ |
| 15 | ಶ್ರೀ ಡಿ.ವಿ.ಹುಚ್ಚೇರೇಗೌಡ | ನಿವೃತ್ತ ಪ್ರ.ದ.ಸ./ಕಂದಾಯ ನಿರೀಕ್ಷಕರು | ದಕ್ಷಿಣ |
| 16 | ಶ್ರೀ ಬಿ.ಎನ್.ಅಣ್ಣೋಜಿರಾವ್ | ನಿವೃತ್ತ ಮೋಜಣಿದಾರರು | ಯಲಹಂಕ |
| 17 | ಶ್ರೀ ಎಸ್.ಎಂ.ಕೃಷ್ಣಮೂರ್ತಿರಾಜ್ | ನಿವೃತ್ತ ಮೋಜಣಿದಾರರು | ದಾಸರಹಳ್ಳಿ |
| 18 | ಶ್ರೀ ಲಕ್ಷ್ಮಣ ರಾಥೋಡ್ | ನಿವೃತ್ತ ಮೋಜಣಿದಾರರು | ದಕ್ಷಿಣ |
| 19 | ಶ್ರೀ ಹೆಚ್.ಜಿ.ಚೆನ್ನಯ್ಯ | ನಿವೃತ್ತ ಮೋಜಣಿದಾರರು | ಆರ್.ಆರ್.ನಗರ |
| 20 | ಶ್ರೀ ಹೆಚ್.ಕೆ.ಕಾಳೇಗೌಡ | ನಿವೃತ್ತ ಮೋಜಣಿದಾರರು | ಬೊಮ್ಮನಹಳ್ಳಿ |
| 21 | ಶ್ರೀ ಎ.ಅಲ್ಲಾಬಕ್ಷಿ | ನಿವೃತ್ತ ಮೋಜಣಿದಾರರು | ಪೂರ್ವ |
| 22 | ಶ್ರೀ ಸಿದ್ದಲಿಂಗಪ್ಪ | ನಿವೃತ್ತ ಮೋಜಣಿದಾರರು | ಮಹದೇವಪುರ |
| 23 | ಶ್ರೀ ಬಿ.ವೋಲೇಕರ್ | ನಿವೃತ್ತ ದ್ವಿ.ದ.ಸ/ಗ್ರಾಮಲೆಕ್ಕಿಗರು | ಮಹದೇವಪುರ |
| 24 | ಶ್ರೀ ಬಾಬುರುದ್ರಪ್ಪ ಅಗಸೀಮನೆ | ನಿವೃತ್ತ ದ್ವಿ.ದ.ಸ/ಗ್ರಾಮಲೆಕ್ಕಿಗರು | ಪೂರ್ವ |
| 25 | ಶ್ರೀ ಬಾಹುಬಲಿ | ನಿವೃತ್ತ ದ್ವಿ.ದ.ಸ/ಗ್ರಾಮಲೆಕ್ಕಿಗರು | ಕೇಂದ್ರ ಕಛೇರಿ |
| 26 | ಶ್ರೀ ಎಸ್.ಕೆ.ರಂಗಪ್ಪ | ನಿವೃತ್ತ ದ್ವಿ.ದ.ಸ/ಗ್ರಾಮಲೆಕ್ಕಿಗರು | ಯಲಹಂಕ |
| 27 | ಶ್ರೀ ಬಿ.ಎನ್.ಶಂಕರಯ್ಯ | ನಿವೃತ್ತ ದ್ವಿ.ದ.ಸ/ಗ್ರಾಮಲೆಕ್ಕಿಗರು | ಪಶ್ಚಿಮ |
| 28 | ಶ್ರೀ ಹೆಚ್.ಸಿ.ರಾಮಕೃಷ್ಣಯ್ಯ | ನಿವೃತ್ತ ದ್ವಿ.ದ.ಸ/ಗ್ರಾಮಲೆಕ್ಕಿಗರು | ದಾಸರಹಳ್ಳಿ |
| 29 | ಶ್ರೀ ಕೆ.ಶಿವಣ್ಣ | ನಿವೃತ್ತ ದ್ವಿ.ದ.ಸ/ಗ್ರಾಮಲೆಕ್ಕಿಗರು | ಆರ್.ಆರ್.ನಗರ |

**ಮೇಲ್ಕಂಡ ಕಂದಾಯ ಇಲಾಖೆಯ ನಿವೃತ್ತ ಅಧಿಕಾರಿ/ನೌಕರರುಗಳನ್ನು ಮುಂದುವರೆಸುವ/ಮರುನೇಮಕ ಮಾಡಿಕೊಳ್ಳುವ ಅಗತ್ಯತೆಯ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ 8 ವಲಯಗಳಲ್ಲಿನ ಟಿ.ಡಿ.ಆರ್/ಭೂಸ್ವಾಧೀನ ಕಾರ್ಯದ ಪ್ರಗತಿ ಪರಿಶೀಲನೆ ಮಾಡಲಾಗಿದ್ದು, ಅದರ ವಿವರಗಳು ಈ ಕೆಳಕಂಡಂತೆ ಇರುತ್ತವೆ.**

1. **ಯಲಹಂಕ ವಲಯ :–** ಈ ವಲಯದಲ್ಲಿ ಒಬ್ಬ ತಹಶೀಲ್ದಾರ್, ಶಿರಸ್ತೇದಾರ್, ಗ್ರಾಮ ಲೆಕ್ಕಿಗರು/ದ್ವಿ.ದ.ಸ, ಸರ್ವೆಯರ್ ರವರುಗಳನ್ನು ಟಿ.ಡಿ.ಆರ್/ಭೂಸ್ವಾಧೀನ ಕಾರ್ಯ ನಿರ್ವಹಿಸಲು ಸೂಚಿಸಿ ನಿಯುಕ್ತಿಗೊಳಿಸಲಾಗಿತ್ತು. ಈ ವಲಯದಲ್ಲಿ 7 ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, ಅಂದಾಜು 3,000 ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಇತ್ತೀಚಿನ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ ಈ ವಲಯದಲ್ಲಿ 159 ಡಿ.ಆರ್.ಸಿ ಗಳನ್ನು ನೀಡಲಾಗಿದೆ. ಪ್ರಗತಿಯು ಆಶಾದಾಯಕವಾಗಿರುತ್ತದೆ. ವಲಯದ ಜಂಟಿ ಆಯುಕ್ತರು ತಮ್ಮ ವರದಿಯಲ್ಲಿ ಹಾಲಿ ಇರುವ

ತಹಶೀಲ್ದಾರ್‌ರವರನ್ನು ಬದಲಾಯಿಸಿ ಬೇರೊಬ್ಬರನ್ನು ಪೂರ್ಣಪ್ರಮಾಣದಲ್ಲಿ ನೀಡುವಂತೆ, ಹಾಲಿ ತೆಗೆದುಹಾಕಲಾಗಿರುವ ಶಿರಸ್ತೇದಾರ್ ಕಾಳಯ್ಯ ಇವರನ್ನು ಮುಂದುವರೆಸುವಂತೆ, ಹಾಲಿ ಇರುವ ಗ್ರಾಮ ಲೆಕ್ಕಿಗರ ಬದಲಾಗಿ ಹೆಚ್ಚುವರಿಯಾಗಿ ಒಬ್ಬ ಕಂದಾಯ ನಿರೀಕ್ಷಕರು ಹಾಗೂ ಸರ್ವೆಯರ್‌ರವರನ್ನು ನೀಡುವಂತೆ ಕೋರಿರುತ್ತಾರೆ. ಈ ವಲಯಕ್ಕೆ ಒಬ್ಬ ತಹಶೀಲ್ದಾರ್, ಶಿರಸ್ತೆದಾರ್, ಇಬ್ಬರು ಕಂದಾಯ ನಿರೀಕ್ಷಕರು ಮತ್ತು ಇಬ್ಬರು ಸರ್ವೆಯರ್ ರವರನ್ನು ನಿಯುಕ್ತಿಗೊಳಿಸಬಹುದಾಗಿರುತ್ತದೆ. ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರಾಮ ಲೆಕ್ಕಿಗರನ್ನು ಕರ್ತವ್ಯದಿಂದ ವಿಮುಕ್ತಿಗೊಳಿಸಬಹುದಾಗಿರುತ್ತದೆ.

2. **ಮಹದೇವಪುರ ವಲಯ :–** ಈ ವಲಯದಲ್ಲಿ ಒಬ್ಬ ತಹಶೀಲ್ದಾರ್, ಶಿರಸ್ತೇದಾರ್, ಕಂದಾಯ ನಿರೀಕ್ಷಕರು/ಪ್ರ.ದ.ಸ, ಗ್ರಾಮ ಲೆಕ್ಕಿಗರು/ದ್ವಿ.ದ.ಸ, ಸರ್ವೆಯರ್ ರವರುಗಳನ್ನು ಟಿ.ಡಿ.ಆರ್/ಭೂಸ್ವಾಧೀನ ಕಾರ್ಯ ನಿರ್ವಹಿಸಲು ಸೂಚಿಸಿ ನಿಯುಕ್ತಿಗೊಳಿಸಲಾಗಿತ್ತು. ಈ ವಲಯದಲ್ಲಿ 11 ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, ಅಂದಾಜು 4,187 ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಇತ್ತೀಚಿನ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ ಈ ವಲಯದಲ್ಲಿ 99 ಡಿ.ಆರ್.ಸಿ ಗಳನ್ನು ನೀಡಲಾಗಿದೆ. ಪ್ರಗತಿಯು ಆಶಾದಾಯಕವಾಗಿರುತ್ತದೆ. ಯಾವ ಹುದ್ದೆಗಳನ್ನು ಹಾಗೂ ಯಾವ ನೌಕರರನ್ನು ಮುಂದುವರೆಸಬೇಕು ಎಂಬ ಬಗ್ಗೆ ವರದಿ ನಿರೀಕ್ಷಿಸಲಾಗಿದೆ. ಆದಾಗ್ಯೂ ಪ್ರಗತಿ ವರದಿ ಪರಿಶೀಲನೆಯಂತೆ, ಈ ವಲಯದಲ್ಲಿ ಒಬ್ಬ ತಹಶೀಲ್ದಾರ್, ಒಬ್ಬ ಕಂದಾಯ ನಿರೀಕ್ಷಕರು ಮತ್ತು ಒಬ್ಬ ಸರ್ವೆಯರ್ ರವರ ಹುದ್ದೆಯನ್ನು ಮುಂದುವರೆಸಬಹುದಾಗಿರುತ್ತದೆ. ಹಾಲಿ ಕೆಲಸ ನಿರ್ವಹಿಸುತ್ತಿರುವ ಕಂದಾಯ ನಿರೀಕ್ಷಕರು ಮತ್ತು ಗ್ರಾಮ ಲೆಕ್ಕಿಗರನ್ನು ಕರ್ತವ್ಯದಿಂದ ವಿಮುಕ್ತಿಗೊಳಿಸಬಹುದಾಗಿರುತ್ತದೆ.

3. **ದಾಸರಹಳ್ಳಿ ವಲಯ :–** ಈ ವಲಯದಲ್ಲಿ ಒಬ್ಬ ತಹಶೀಲ್ದಾರ್, ಶಿರಸ್ತೇದಾರ್, ಕಂದಾಯ ನಿರೀಕ್ಷಕರು/ಪ್ರ.ದ.ಸ, ಗ್ರಾಮ ಲೆಕ್ಕಿಗರು/ದ್ವಿ.ದ.ಸ, ಸರ್ವೆಯರ್ ರವರುಗಳನ್ನು ಟಿ.ಡಿ.ಆರ್/ಭೂಸ್ವಾಧೀನ ಕಾರ್ಯ ನಿರ್ವಹಿಸಲು ಸೂಚಿಸಿ ನಿಯುಕ್ತಿಗೊಳಿಸಲಾಗಿತ್ತು. ಈ ವಲಯದಲ್ಲಿ 17 ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, ಅಂದಾಜು 2,265 ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಇತ್ತೀಚಿನ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ ಈ ವಲಯದಲ್ಲಿ 17 ಡಿ.ಆರ್.ಸಿ ಗಳನ್ನು ನೀಡಲಾಗಿದೆ. ಪ್ರಗತಿಯು ಕುಂಠಿತವಾಗಿರುತ್ತದೆ. ಆದರೆ ವಲಯದ ಜಂಟಿ ಆಯುಕ್ತರು
ಕಂದಾಯ ನಿರೀಕ್ಷಕರನ್ನು ಹೊರತುಪಡಿಸಿ ಉಳಿದವರನ್ನು ಮುಂದುವರೆಸಲು ಕೋರಿದ್ದಾರೆ. ಇವರು ಸಲ್ಲಿಸಿರುವ ಪ್ರಗತಿ ವರದಿಯ ಅನುಸಾರ ಒಬ್ಬ ತಹಶೀಲ್ದಾರ್ ರವರನ್ನು ದಾಸರಹಳ್ಳಿ ಮತ್ತು ಆರ್.ಆರ್.ನಗರ ವಲಯಕ್ಕೆ ನಿಯೋಜಿಸಿ, ಒಬ್ಬ ಗ್ರಾಮ ಲೆಕ್ಕಿಗ ಮತ್ತು ಒಬ್ಬ ಸರ್ವೆಯರ್ ರವರನ್ನು ಮುಂದುವರೆಸಬಹುದಾಗಿರುತ್ತದೆ. ಹಾಲಿ ಕೆಲಸ ನಿರ್ವಹಿಸುತ್ತಿರುವ ಕಂದಾಯ ನಿರೀಕ್ಷಕರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಬಹುದಾಗಿದೆ.

4. **ಬೊಮ್ಮನಹಳ್ಳಿ ವಲಯ :–** ಈ ವಲಯದಲ್ಲಿ ಒಬ್ಬ ಸಹಾಯಕ ಅಯುಕ್ತರು, ತಹಶೀಲ್ದಾರ್, ಶಿರಸ್ತೇದಾರ್, ಕಂದಾಯ ನಿರೀಕ್ಷಕರು/ಪ್ರ.ದ.ಸ, ಸರ್ವೆಯರ್ ರವರುಗಳನ್ನು ಟಿ.ಡಿ.ಆರ್/ಭೂಸ್ವಾಧೀನ ಕಾರ್ಯ ನಿರ್ವಹಿಸಲು ಸೂಚಿಸಿ ನಿಯುಕ್ತಿಗೊಳಿಸಲಾಗಿತ್ತು. ಈ ವಲಯದಲ್ಲಿ 38 ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, 13 ರಸ್ತೆಗಳ ಅಗಲೀಕರಣ ಕಾರ್ಯ ಕೈಗೊಂಡಿದ್ದು, ಅಂದಾಜು 3,14 ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಇತ್ತೀಚಿನ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿದೆ ಈ ವಲಯದಲ್ಲಿ 7 ಡಿ.ಆರ್.ಸಿ ಗಳನ್ನು ನೀಡಲಾಗಿದೆ, 79 ಸ್ವತ್ತುಗಳಿಗೆ ಕಡತ ತಯಾರಿಸಲಾಗಿದೆ ಎಂದು ತಿಳಿಸಲಾಗಿರುತ್ತದೆ. ಪ್ರಗತಿಯು ಕುಂಠಿತವಾಗಿದ್ದು, ಸಮರ್ಪಕವಾಗಿರುವುದಿಲ್ಲ. ಯಾವ ಹುದ್ದೆಗಳನ್ನು ಹಾಗೂ ಯಾವ ನೌಕರರನ್ನು ಮುಂದುವರೆಸಬೇಕು ಎಂಬ ಬಗ್ಗೆ ವರದಿ ನಿರೀಕ್ಷಿಸಲಾಗಿದೆ. ಆದಾಗ್ಯೂ ಈ ವಲಯದ ಒಂದು ವರ್ಷದ ಪ್ರಗತಿ ಪರಿಶೀಲಿಸಲಾಗಿ ಒಬ್ಬ ಸರ್ವೆಯರ್ ಹಾಗೂ ಒಬ್ಬ ಕಂದಾಯ ನಿರೀಕ್ಷಕರ ಹುದ್ದೆಯನ್ನು ಮಾತ್ರ ಮುಂದುವರೆಸಬಹುದಾಗಿದೆ. ಹಾಲಿ ಕೆಲಸ ನಿರ್ವಹಿಸುತ್ತಿರುವ ಸಹಾಯಕ ಆಯುಕ್ತರು, ಶಿರಸ್ತೇದಾರ್ ಮತ್ತು ಕಂದಾಯ ನಿರೀಕ್ಷಕರನ್ನು ಕರ್ತವ್ಯದಿಂದ ವಿಮುಕ್ತಿಗೊಳಿಸಬಹುದಾಗಿದೆ.

5. **ರಾಜರಾಜೇಶ್ವರಿನಗರ ವಲಯ :–** ಈ ವಲಯದಲ್ಲಿ ಒಬ್ಬ ತಹಶೀಲ್ದಾರ್, ಶಿರಸ್ತೇದಾರ್, ಕಂದಾಯ ನಿರೀಕ್ಷಕರು/ಪ್ರ.ದ.ಸ, ಗ್ರಾಮ ಲೆಕ್ಕಿಗರು/ದ್ವಿ.ದ.ಸ, ಸರ್ವೆಯರ್ ರವರುಗಳನ್ನು ಟಿ.ಡಿ.ಆರ್/ಭೂಸ್ವಾಧೀನ ಕಾರ್ಯ ನಿರ್ವಹಿಸಲು ಸೂಚಿಸಿ ನಿಯುಕ್ತಿಗೊಳಿಸಲಾಗಿತ್ತು. ಈ ವಲಯದಲ್ಲಿ 17 ರಸ್ತೆಗಳನ್ನು ರಸ್ತೆ ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, ಅಂದಾಜು 2,265 ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಇತ್ತೀಚಿನ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ ಈ ವಲಯದಲ್ಲಿ 17 ಡಿ.ಆರ್.ಸಿ ಗಳನ್ನು ನೀಡಲಾಗಿದೆ. ಪ್ರಗತಿಯು ಕುಂಠಿತವಾಗಿದ್ದು,

ಸಮರ್ಪಕವಾಗಿರುವುದಿಲ್ಲ. ಯಾವ ಹುದ್ದೆಗಳನ್ನು ಹಾಗೂ ಯಾವ ನೌಕರರನ್ನು ಮುಂದುವರೆಸಬೇಕು ಎಂಬ ಬಗ್ಗೆ ವರದಿ ನಿರೀಕ್ಷಿಸಲಾಗಿದೆ. ಆದಾಗ್ಯೂ ಈ ವಲಯದ ಒಂದು ವರ್ಷದ ಪ್ರಗತಿ ಪರಿಶೀಲಿಸಲಾಗಿ ಒಬ್ಬ ಸರ್ವೆಯರ್ ಹಾಗೂ ಒಬ್ಬ ಶಿರಸ್ತೆದಾರರ ಹುದ್ದೆಯನ್ನು ಮಾತ್ರ ಮುಂದುವರೆಸಬಹುದಾಗಿದೆ. ಹಾಲಿ ಕೆಲಸ ನಿರ್ವಹಿಸುತ್ತಿರುವ ತಹಶೀಲ್ದಾರ್ ಮತ್ತು ಕಂದಾಯ ನಿರೀಕ್ಷಕರ ಹುದ್ದೆಯನ್ನು ಯಲಹಂಕ ವಲಯಕ್ಕೆ ವರ್ಗಾಯಿಸಿ ನಿಯೋಜಿಸಬಹುದಾಗಿದೆ. ಹಾಲಿ ಇರುವ ಗ್ರಾಮ ಲೆಕ್ಕಿಗರನ್ನು ಕರ್ತವ್ಯದಿಂದ ವಿಮುಕ್ತಿಗೊಳಿಸಬಹುದಾಗಿದೆ.

6. **ಪೂರ್ವ ವಲಯ :–** ಈ ವಲಯದಲ್ಲಿ ಒಬ್ಬ ಶಿರಸ್ತೇದಾರ್, ಕಂದಾಯ ನಿರೀಕ್ಷಕರು/ಪ್ರ.ದ.ಸ, ಗ್ರಾಮ ಲೆಕ್ಕಿಗರು/ದ್ವಿ.ದ.ಸ, ಸರ್ವೆಯರ್ ರವರುಗಳನ್ನು ಟಿ.ಡಿ.ಆರ್/ಭೂಸ್ವಾಧೀನ ಕಾರ್ಯ ನಿರ್ವಹಿಸಲು ಸೂಚಿಸಿ ನಿಯುಕ್ತಿಗೊಳಿಸಲಾಗಿತ್ತು. ಈ ವಲಯದಲ್ಲಿ 17 ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, ಅಂದಾಜು 1,669 ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಇತ್ತೀಚಿನ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ ಈ ವಲಯದಲ್ಲಿ 4 ಡಿ.ಆರ್.ಸಿ ಗಳನ್ನು ನೀಡಲಾಗಿದೆ. ಪ್ರಗತಿಯು ಕುಂಠಿತವಾಗಿದ್ದು, ಸಮರ್ಪಕವಾಗಿರುವುದಿಲ್ಲ. ಆದರೆ, ವಲಯ ಜಂಟಿ ಆಯುಕ್ತರಿಂದ ಬಂದಿರುವ ವರದಿ ಪ್ರಕಾರ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರನ್ನು ಮುಂದುವರೆಸಲು ಕೋರಿರುತ್ತಾರೆ. ಅದರಂತೆ ಹಾಲಿ ಇರುವ ಶಿರಸ್ತೆದಾರ್, ಗ್ರಾಮ ಲೆಕ್ಕಿಗರನ್ನು ಮತ್ತು ಸರ್ವೆಯರ್‌ರವರನ್ನು ಮುಂದುವರೆಸಿ, ಕಂದಾಯ ನಿರೀಕ್ಷಕರನ್ನು ಬೊಮ್ಮನಹಳ್ಳಿ ವಲಯಕ್ಕೆ ನಿಯುಕ್ತಿಗೊಳಿಸಬಹುದಾಗಿದೆ.

7. **ದಕ್ಷಿಣ ವಲಯ :–** ಈ ವಲಯದಲ್ಲಿ ಒಬ್ಬ ತಹಶೀಲ್ದಾರ್, ಶಿರಸ್ತೇದಾರ್, ಕಂದಾಯ ನಿರೀಕ್ಷಕರು/ಪ್ರ.ದ.ಸ, ಸರ್ವೆಯರ್ ರವರುಗಳನ್ನು ಟಿ.ಡಿ.ಆರ್/ಭೂಸ್ವಾಧೀನ ಕಾರ್ಯ ನಿರ್ವಹಿಸಲು ಸೂಚಿಸಿ ನಿಯುಕ್ತಿಗೊಳಿಸಲಾಗಿತ್ತು. ಈ ವಲಯದಲ್ಲಿ 14 ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, 6 ರಸ್ತೆಗಳಲ್ಲಿ ಅಂದಾಜು 2,000 ಕ್ಕೂ ಹೆಚ್ಚಿನ ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಇತ್ತೀಚಿನ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ ಈ ವಲಯದಲ್ಲಿ ಯಾವುದೇ ಡಿ.ಆರ್.ಸಿ ಗಳನ್ನು ನೀಡಿರುವುದಿಲ್ಲ. ಈ ವಲಯದ ಮೇಲ್ಕಂಡ ನಿವೃತ್ತ ನೌಕರರು ಇತ್ತೀಚಿನ ವರೆಗೆ ದಕ್ಷಿಣ ವಲಯ

   ಕಛೇರಿಯ ಟಿ.ಡಿ.ಆರ್/ಭೂಸ್ವಾಧೀನ ಕೆಲಸಗಳ ಜೊತೆಗೆ ಕೇಂದ್ರ ಕಛೇರಿಯಲ್ಲಿ ಕೆಲಸ ನಿರ್ವಹಿಸಲು ಸೂಚಿಸಿರುವಂತೆ ಕಾರ್ಯವನ್ನು ನಿರ್ವಹಿಸಿದ್ದು, ಕದಿರೇನಹಳ್ಳಿ ಕೆಳ ಸೇತುವೆ ನಿರ್ಮಾಣ ಹಾಗೂ ರಸ್ತೆ ಅಗಲೀಕರಣ ಕಾಮಗಾರಿಗೆ ಒಳಪಡುವ 45 ಸ್ವತ್ತುಗಳಗೆ ಸಂಬಂಧಪಟ್ಟಂತೆ ಕಡತಗಳನ್ನು ತಯಾರಿಸಿ ಸಲ್ಲಿಸಿರುತ್ತಾರೆ.

   ಈಗ ಇವರನ್ನು ದಕ್ಷಿಣ ವಲಯದಲ್ಲಿನ ಕೆಲಸಗಳನ್ನು ನಿರ್ವಹಿಸಲು ವಲಯ ಕಛೇರಿಗೆ ನಿಯೋಜಿಸಲಾಗಿದೆ. ವಲಯದ ಅಪರ ಆಯುಕ್ತರ ವರದಿಯ ಪ್ರಕಾರ ತಹಶೀಲ್ದಾರ್, ಶಿರಸ್ತೇದಾರ್, ಕಂದಾಯ ನಿರೀಕ್ಷಕರು, ಗ್ರಾಮ ಲೆಕ್ಕಿಗರು ಮತ್ತು ಸರ್ವೆಯರ್‌ರವರನ್ನು ಮುಂದುವರೆಸಲು ಕೋರಿರುತ್ತಾರೆ. ಈ ವಲಯದ ಪ್ರಗತಿ ಪರಿಶೀಲಿಸಲಾಗಿ ಒಬ್ಬ ಕಂದಾಯ ನಿರೀಕ್ಷಕರು ಹಾಗೂ ಸರ್ವೆಯರ್‌ರವರನ್ನು ಮುಂದುವರೆಸಬಹುದಾಗಿದೆ. ಗ್ರಾಮ ಲೆಕ್ಕಿಗರನ್ನು ಕೇಂದ್ರ ಕಛೇರಿ ಭೂಸ್ವಾಧೀನ ಮತ್ತು ಟಿ.ಡಿ.ಆರ್ ಶಾಖೆಗೆ ನಿಯೋಜಿಸಬಹುದಾಗಿದೆ. ಹಾಲಿ ಇರುವ ತಹಶೀಲ್ದಾರ್‌ರವರನ್ನು ಕರ್ತವ್ಯದಿಂದ ವಿಮುಕ್ತಿಗೊಳಿಸಬಹುದಾಗಿದೆ.

8. **ಪಶ್ಚಿಮ ವಲಯ :–** ಈ ವಲಯದಲ್ಲಿ ಒಬ್ಬ ತಹಶೀಲ್ದಾರ್, ಶಿರಸ್ತೇದಾರ್, ಗ್ರಾಮ ಲೆಕ್ಕಿಗರು/ದ್ವಿ.ದ.ಸ, ಸರ್ವೆಯರ್ ರವರುಗಳನ್ನು ಟಿ.ಡಿ.ಆರ್/ಭೂಸ್ವಾಧೀನ ಕಾರ್ಯ ನಿರ್ವಹಿಸಲು ಸೂಚಿಸಿ ನಿಯುಕ್ತಿಗೊಳಿಸಲಾಗಿತ್ತು. ಈ ವಲಯದಲ್ಲಿ ಹಲವು ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, ಅಂದಾಜು 2,000 ಕ್ಕೂ ಹೆಚ್ಚಿನ ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಇತ್ತೀಚಿನ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ ಈ ವಲಯದಲ್ಲಿ ಯಾವುದೇ ಡಿ.ಆರ್.ಸಿ ಗಳನ್ನು ನೀಡಲಾಗಿರುವುದಿಲ್ಲ. ಈ ವಲಯದಲ್ಲಿ ಯಾವುದೇ ಪ್ರಗತಿ ಆಗಿರುವುದಿಲ್ಲ ಹಾಗೂ ವರದಿ ಸಹ ಬಂದಿರುವುದಿಲ್ಲ, ಈಗ ಈ ವಲಯದಲ್ಲಿ ಗ್ರಾಮ ಲೆಕ್ಕಿಗರು ಇದ್ದು ಆರ್.ಆರ್.ನಗರ ವಲಯದಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾರೆ. ಉಳಿದ ಯಾವುದೇ ನೌಕರರು ಕೆಲಸ ಮಾಡುತ್ತಿಲ್ಲವಾದ್ದರಿಂದ ಮುಂದಿನ ದಿನಗಳಲ್ಲಿ ಅವಶ್ಯಕತೆ ಉಂಟಾದಲ್ಲಿ ಬೇರೆ ವಲಯಗಳಿಂದ ನಿಯೋಜಿಸಬಹುದಾಗಿದೆ.

9. **ಕೇಂದ್ರ ಕಛೇರಿ :–** ಕೇಂದ್ರ ಕಛೇರಿಯ ಟಿ.ಡಿ.ಆರ್ ಮತ್ತು ಭೂಸ್ವಾಧೀನ ಶಾಖೆಯಲ್ಲಿ ಒಬ್ಬ ಪ್ರ.ದ.ಸ ಹಾಗೂ ಒಬ್ಬ ದ್ವಿ.ದ.ಸ/ಗ್ರಾ.ಲೆ ರವರು ಕರ್ತವ್ಯ ನಿರ್ವಹಿಸುತ್ತಿದ್ದು, ಹಾಲಿ ಕರ್ತವ್ಯ ನಿರ್ವಹಿಸುತ್ತಿರುವವರನ್ನು ಮುಂದುವರೆಸಬಹುದಾಗಿರುತ್ತದೆ.

**ಮೇಲ್ಕಂಡ ನಿಯೋಜಿಸಬಹುದಾದ ಅಧಿಕಾರಿ/ನೌಕರರನ್ನು ಕೆಲಸ ಒತ್ತಡ ಮತ್ತು ಅಗತ್ಯತೆಗನುಗುಣವಾಗಿ ವರ್ಗಾಯಿಸುವ ಮತ್ತು ಬಿಡುಗಡೆಗೊಳಿಸುವ ಅಧಿಕಾರವನ್ನು ಕಾಯ್ದಿರಿಸಿ ಪ್ರಸ್ತಾವನೆಯನ್ನು ಸಲ್ಲಿಸಿದೆ.**

ಮೇಲೆ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ 2011-12 ನೇ ಸಾಲಿಗೆ ಈ ಕೆಳಗೆ ತಿಳಿಸಲಾಗಿರುವಂತೆ ಕೇಂದ್ರ ಕಛೇರಿ ಹಾಗೂ ವಲಯ ಕಛೇರಿಗಳಲ್ಲಿ ಟಿ.ಡಿ.ಆರ್/ಭೂಸ್ವಾಧೀನ ಕಾರ್ಯಗಳಿಗೆ ಕೆಳಕಂಡ ನಿವೃತ್ತ ಕಂದಾಯ ಅಧಿಕಾರಿ/ನೌಕರರುಗಳ ಅವಶ್ಯಕತೆ ಇದೆ ಎಂದು ಅಭಿಪ್ರಾಯ ಪಡಲಾಗಿದೆ.

| ಕ್ರ. ಸಂ | ವಲಯ | ಹಾಲಿ ಕಾರ್ಯ ನಿರ್ವಹಿಸುತ್ತಿರುವ ನಿವೃತ್ತ ಕಂದಾಯ ಅಧಿಕಾರಿ/ನೌಕರರು | | | | | | | ವಲಯ ಅಪರ/ಜಂಟಿ ಆಯುಕ್ತರು ಕೋರಿರುವ ಹುದ್ದೆ | | | | | | ಅಗತ್ಯತೆಯ ಅನುಸಾರ ಮರು ನೇಮಕಾತಿ ಮಾಡಬಹುದಾದ ಹುದ್ದೆಗಳು | | | | | ಒಟ್ಟು ಹುದ್ದೆ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|
| | | AC | Tah | Shr | RI | VA | Surveyor | | Tah | Shr | RI | VA | Surveyor | | Tah | Shr | RI | VA | Surveyor | |
| 1 | ಯಲಹಂಕ | – | 1 | – | – | 1 | 1 | | 1 | 1 | 2 | – | 2 | | 1 | 1 | 2 | – | 2 | 6 |
| 2 | ದಾಸರಹಳ್ಳಿ | – | | | 1 | 1 | 1 | | 1 | 1 | – | 1 | 1 | | 1 | – | – | 1 | 1 | 3 |
| 3 | ಮಹದೇವಪುರ | – | 1 | 1 | 1 | 1 | 1 | | – | – | – | – | – | | 1 | – | 1 | – | 1 | 3 |
| 4 | ಪೂರ್ವ | – | | | 1 | 1 | 1 | | – | 1 | 1 | 1 | 1 | | – | 1 | 1 | 1 | 1 | 4 |
| 5 | ಬೊಮ್ಮನಹಳ್ಳಿ | 1 | 1 | 1 | 1 | – | 1 | | – | – | – | – | – | | – | – | 1 | – | 1 | 2 |
| 6 | ದಕ್ಷಿಣ | | | – | 1 | – | 1 | | 1 | 1 | 1 | 1 | 1 | | – | – | 1 | – | 1 | 2 |
| 7 | ರಾ.ರಾ.ನಗರ | – | 1 | 1 | 1 | 1 | 1 | | – | – | – | – | – | | – | 1 | – | – | 1 | 2 |
| 8 | ಪಶ್ಚಿಮ | – | | – | – | 1 | – | | – | – | – | – | – | | – | – | – | – | – | – |
| 9 | ಕೇಂದ್ರ ಕಛೇರಿ | – | – | – | 1 | 1 | – | | – | – | 1 | 1 | – | | – | – | 1 | 1 | – | 2 |
| | **ಒಟ್ಟು** | 1 | 4 | 3 | 7 | 7 | 7 | | 3 | 4 | 5 | 4 | 5 | | 3 | 3 | 7 | 3 | 8 | 24 |

ಮೇಲೆ ತಿಳಿಸಿರುವಂತೆ ಭೂಸ್ವಾಧೀನ ಹಾಗೂ ಟಿ.ಡಿ.ಆರ್ ಕಾರ್ಯ ನಿರ್ವಹಣೆಗಾಗಿ ಕಂದಾಯ ಇಲಾಖೆಯ ನಿವೃತ್ತ ಅಧಿಕಾರಿ/ನೌಕರರುಗಳ ಸೇವೆಯು ಪಾಲಿಕೆಗೆ ಅತ್ಯಗತ್ಯವಾಗಿ ಬೇಕಾಗಿದ್ದು, ಇವರನ್ನು ಗುತ್ತಿಗೆ ಆಧಾರದ ಮೇಲೆ ಒಂದು ವರ್ಷ ಅಥವಾ ಇವರ ಸೇವೆಯ ಅಗತ್ಯವಿರುವ ತನಕ ಯಾವುದು ಮೊದಲೋ ಅಲ್ಲಿಯವರೆಗೆ ಈ ಕೆಳಕಂಡಂತೆ ಮಾಹೆಯಾನ ಗೌರವ ಧನವನ್ನು(ಸಂಚಿತ ವೇತನ) ನಿಗಧಿಪಡಿಸಿ ಮರುನೇಮಕ ಮಾಡಿಗೊಳ್ಳಲು ಯೋಜಿಸಲಾಗಿದೆ.

| ಕ್ರ. ಸಂ | ಹುದ್ದೆ | ಗೌರವಧನ/ಸಂಚಿತ ವೇತನ ರೂ. | ಅವಶ್ಯಕ ಹುದ್ದೆಗಳ ಸಂಖ್ಯೆ |
|---|---|---|---|
| 1 | ತಹಶೀಲ್ದಾರ್‌ರು | 14,000 | 3 |
| 2 | ಶಿರಸ್ತೇದಾರ್‌ರು | 12,000 | 3 |
| 3 | ಕಂದಾಯ ನಿರೀಕ್ಷಕರು/ಪ್ರ.ದ.ಸ | 10,000 | 7 |
| 4 | ಮೋಜಣಿದಾರರು | 10,000 | 8 |
| 5 | ಗ್ರಾಮಲೆಕ್ಕಿಗರು/ದ್ವಿ.ದ.ಸ | 8,000 | 3 |
| | ಒಟ್ಟು | | 24 |

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಟಿ.ಡಿ.ಆರ್ ಮತ್ತು ಭೂಸ್ವಾಧೀನ ಪ್ರಕ್ರಿಯೆಗೆ ಕಂದಾಯ ಇಲಾಖೆಯ ನಿವೃತ್ತ ಅಧಿಕಾರಿ/ನೌಕರರುಗಳನ್ನು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ಸ್ ನಿಯಮಗಳು 1977 ರ ನಿಯಮ 20(ಎ)ರನ್ವಯ ಅವರ ಹುದ್ದೆಯ ಎದುರು ಕಾಣಿಸಿರುವ ಕ್ರೋಢೀಕೃತ ಮಾಸಿಕ ವೇತನದ (ಸಂಚಿತ ವೇತನ) ಆಧಾರದ ಮೇಲೆ 2011-12 ನೇ ಸಾಲಿಗೆ ಮರುನೇಮಕ ಮಾಡಿಕೊಳ್ಳುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ 17-02-2011ರ ಟಿಪ್ಪಣಿಯನ್ನು ಒಪ್ಪಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ : 28-05-2011 ರ ನಿರ್ಣಯ.

**ನಿರ್ಣಯ :- ಆಯುಕ್ತರ ದಿನಾಂಕ : 17-02-2011ರ ಟಿಪ್ಪಣಿ ಒಪ್ಪಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ : 28-05-2011 ರ ನಿರ್ಣಯವನ್ನು ಒಪ್ಪಿದೆ**

## *46]. ವಿಷಯದ ಸಂಖ್ಯೆ: ತೆಆಸ್ಥಾಸ/102/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ: ಅಆ(ಕ/ಆ/ಆ)ಪಿಎಸ್‌ಆರ್(4)14/11–12 ದಿನಾಂಕ 27–05–2011ರಲ್ಲಿ ವಿವರಿಸಿರುವಂತೆ, ಶ್ರೀ ಪಿ.ಎನ್. ಸದಾಶಿವ, ಅಧ್ಯಕ್ಷರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ಶ್ರೀ ಬಾಬು,ಪ್ರಧಾನ ಕಾರ್ಯದರ್ಶಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವರ್ಕರ್ಸ್ ಫೆಡರೇಷನ್– ದಂಡು ಪ್ರದೇಶ ರವರ ಪತ್ರವನ್ನು ಲಗತ್ತಿಸುತ್ತಾ, ಸದರಿಯವರು ತಮ್ಮ ಪತ್ರದಲ್ಲಿ ಅಂಬೇಡ್ಕರ್ ಜಯಂತಿ ಅಂಗವಾಗಿ ವಿವಿಧ ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಚರಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಧನ ಸಹಾಯ ಮಂಜೂರು ಮಾಡಲು ಕೋರಿರುತ್ತಾರೆಂದು ತಿಳಿಸುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವರ್ಕರ್ಸ್ ಫೆಡರೇಷನ್–ದಂಡು ಪ್ರದೇಶ ರವರಿಗೆ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶಿರ್ಷಿಕೆ ಅಡಿಯಲ್ಲಿ 3.00 ಲಕ್ಷ ರೂಗಳ ಅನುದಾನ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

2010–11ನೇ ಸಾಲಿನ ಪಾಲಿಕೆ ಆಯವ್ಯಯದ "ಕೊಡುಗೆ ಮತ್ತು ಸಹಾಯಾನುದಾನ" ಲೆಕ್ಕ ಶಿರ್ಷಿಕೆ ಅಡಿಯಲ್ಲಿ ರೂ.10.00 ಕೋಟಿಗಳನ್ನು ಮೀಸಲಿರಿಸಲಾಗಿದ್ದು, ಈ ಪೈಕಿ ದಿನಾಂಕ 09–09–2010ರಂದು ಪಾಲಿಕೆ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ ವಿಷಯದ ಸಂಖ್ಯೆ: 91/2010–11ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗದಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ.176.50 ಲಕ್ಷಗಳು ಈಗಾಗಲೇ ಹಂಚಿಕೆಯಾಗಿದ್ದು, ಸಹಾಯಧನದ ಪ್ರಸ್ತಾವನೆಗಳಿಗೆ ಹಣದ ಲಭ್ಯವಿರುವುದಿಲ್ಲ.

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 22–03–2011ರ ಸಭೆಯ ತೀರ್ಮಾನದಂತೆ, ಕ್ರಮ ಸಂಖ್ಯೆ: (41)ರಲ್ಲಿ ಸಂಘ ಸಂಸ್ಥೆಗಳಿಗೆ ಹೆಚ್ಚುವರಿ ಅನುದಾನಕ್ಕಾಗಿ ರೂ.100.00 ಲಕ್ಷಗಳ ಮರು ಹೊಂದಾಣಿಕೆ ಮಾಡಿಕೊಂಡು 2010–11ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲು ಸಮಿತಿಯು ತೀರ್ಮಾನಿಸಿದ್ದು, ಈ ಮೊತ್ತವೂ ಸಹ ಹಂಚಿಕೆಯಾಗಿರುತ್ತದೆ.

2010–11ನೇ ಸಾಲಿನ ಆರ್ಥಿಕ ಸಾಲು ಮುಕ್ತಾಯವಾಗಿರುತ್ತದೆ. ಪ್ರಸಕ್ತ 2011–12ನೇ ಸಾಲಿನ ಪಾಲಿಕೆಯ ಆಯವ್ಯಯವು ತಹಲ್ ವರೆವಿಗೂ ಮಂಡನೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :–** **ಆಯುಕ್ತರ ದಿನಾಂಕ 27–05–2011ರ ಟಿಪ್ಪಣಿಯನ್ನು ಒಪ್ಪುತ್ತಾ, 2010–11ನೇ ಸಾಲಿನ ಆರ್ಥಿಕ ಸಾಲು ಮುಕ್ತಾಯಗೊಂಡಿರುವುದರಿಂದ ಈ ಪ್ರಸ್ತಾವನೆಯನ್ನು ಕೈಬಿಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.**

## *47]. ವಿಷಯದ ಸಂಖ್ಯೆ: ತೆಆಸ್ಥಾಸ/103/2011–12*

ಆಯುಕ್ತರ ಟಿಪ್ಪಣಿ ದಿನಾಂಕ 06–05–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಮೆ: ಟೆರ್ರಫರ್ಮ್ ರವರೊಂದಿಗೆ ಅಗ್ರಿಮೆಂಟ್ ದಿನಾಂಕ 17–04–2008 ಮತ್ತು ಸಪ್ಲಿಮೆಂಟರಿ ಅಗ್ರಿಮೆಂಟ್ ದಿನಾಂಕ 24–05–2008 ದಿನಾಂಕ 30–05–2008ರಲ್ಲಿ ಪ್ರತಿದಿನ 1000 ಮೆಟ್ರಿಕ್ ಟನ್ ಘನತ್ಯಾಜ್ಯ ವಿಲೇವಾರಿ ಮಾಡಲು ಒಪ್ಪಂದ ಮಾಡಿಕೊಂಡಿದೆ.

ಮೆ: ಟೆರ್ರಪರ್ಮ್ ಸಂಸ್ಥೆರವರು ದಿನಾಂಕ 06–10–2010ರ ಪತ್ರದಲ್ಲಿ ಘಟಕದ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು 13ನೇ ಹಣಕಾಸು ಆಯೋಗದ ಅನುದಾನದ ಅಡಿಯಲ್ಲಿ ಅನುದಾನ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಮೆ : ಟೆರ್ರಫರ್ಮ್ ಸಂಸ್ಥೆರವರ ಕರಾರು ಒಪ್ಪಂದದ ಷರತ್ತು 2.1 ರಂತೆ "ಸದರಿ ಘಟಕದ ಆಪರೇಟರ್ ರವರು ಸದರಿ ಘಟಕಕ್ಕೆ ಅವಶ್ಯಕವಾದ ಅಧ್ಯಯನ, ವಿನ್ಯಾಸ, ತಾಂತ್ರಿಕತೆ, ನಿರ್ಮಾಣಮಾಡಿಕೊಂಡು ಪ್ರತಿದಿನ ಪಾಲಿಕೆಯಿಂದ 1000 ಟನ್ ಘನತ್ಯಾಜ್ಯ ಸ್ವೀಕರಿಸಲು ಅನುವಾಗುವಂತೆ ಘಟಕದ ಸೌಲಭ್ಯಗಳನ್ನು ಚಾಲನೆಯಲ್ಲಿಡುವುದು ಮತ್ತು ನಿರ್ವಹಣೆ ಮಾಡುವುದು"

ಮುನಿಸಿಪಲ್ ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ರೂಲ್ಸ್–2000 ಪ್ರಕಾರ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ನಗರದ ಘನತ್ಯಾಜ್ಯ ನಿರ್ವಹಣೆ ಮತ್ತು ಸಂಸ್ಕರಣೆಯನ್ನು ಪರಿಶೀಲಿಸಬೇಕಾಗಿರುತ್ತದೆ.

ಅದರಂತೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಘಟಕದ ಮೂಲ ಸೌಲಭ್ಯಗಳನ್ನು ಪರಿಶೀಲಿಸಿ ಪ್ರತಿದಿನ 600 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು ಸಂಸ್ಕರಣೆ ಮಾಡಲು ಅನುಮತಿ ನೀಡಿರುತ್ತಾರೆ.

ಘಟಕವು ಅದರಂತೆ ತಮ್ಮಲ್ಲಿರುವ ಹಣಕಾಸು ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ಈಗ ದಿನವು 600 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು ತಮ್ಮದೇ ಸಮಗ್ರ ತಾಂತ್ರಿಕ ಸಂಸ್ಕರಣೆಯಲ್ಲಿ ನಿರ್ವಹಿಸುತ್ತಿರುತ್ತಾರೆ.

ಘಟಕವು ತಮ್ಮ ಸಾಮರ್ಥ್ಯವನ್ನು 600 ಮೆಟ್ರಿಕ್ ಟನ್ ಸಾಮರ್ಥ್ಯದಿಂದ 1000 ಮೆಟ್ರಿಕ್ ಟನ್ ಸಾಮರ್ಥ್ಯಕ್ಕೆ ಹೆಚ್ಚಿಸಲು ಅನುವಾಗುವಂತೆ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು 13ನೇ ಹಣಕಾಸು ಆಯೋಗದ ಅನುದಾನದ ಅಡಿಯಲ್ಲಿ ರೂ.10.50 ಕೋಟಿಗಳನ್ನು ತಮ್ಮ ಯೋಜನೆಯ Viability Gap Fund ಗಾಗಿ ಅನುದಾನ / ಹಗುರ ಸಾಲವನ್ನು (Soft Loan) ಕೋರಿರುತ್ತಾರೆ.

ಘಟಕದ ಒಪ್ಪಂದವು PPP Model ನಲ್ಲಿದ್ದು, ಅಂದರೆ ಮೆ: ಟೆರ್ರಫರ್ಮ್ ಸಂಸ್ಥೆರವರು (ಯಾವುದೇ ಖಾಸಗಿ ಸಂಸ್ಥೆಯವರು) ತಮ್ಮ ಯೋಜನಾ ಜಾಗವನ್ನು ಘನ ತ್ಯಾಜ್ಯ ನಿರ್ವಹಣೆ ಯೋಜನೆಗೆ ಹೊಂದಿದ್ದು, ಎಂ.ಎಸ್.ಡಬ್ಲ್ಯೂ. ನಿಯಮಾವಳಿ 2000 ಪ್ರಕಾರ ಘನತ್ಯಾಜ್ಯ ನಿರ್ವಹಣೆ ಮಾಡುತ್ತಿದ್ದರೆ ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ಘನತ್ಯಾಜ್ಯ ಸಂಸ್ಕರಣೆಗೆ ಅನುಮತಿ ನೀಡಿದ್ದರೆ ಅಂತಹ ಸಂಸ್ಥೆಯವರಿಗೆ ಯೋಜನಾ ವೆಚ್ಚದ ಸುಮಾರು ಶೇ.30 ಯೋಜನೆಯ Viability Gap Fund ಅನುದಾನ / ಹಗುರ ಸಾಲವನ್ನು (Soft Loan) ಕೊಡಬೇಕೆಂದು ಎಂ.ಎಸ್.ಡಬ್ಲ್ಯೂ. 2000 ನಿಯಮಾವಳಿಗಳ Hon'ble Supreme Court Advisory Committee ತಿಳಿಸಿರುತ್ತದೆ.

ಸಂಸ್ಥೆಯವರು ತಮ್ಮ ಘಟಕದ ಸಾಮರ್ಥ್ಯವನ್ನು 600 ಮೆಟ್ರಿಕ್ ಟನ್‌ನಿಂದ 1000 ಮೆಟ್ರಿಕ್ ಟನ್‌ಗೆ ಹೆಚ್ಚಿಸಲು ಅನುವಾಗುವಂತೆ ತಮ್ಮ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಸಂಸ್ಥೆಯವರಿಗೆ 13ನೇ ಹಣಕಾಸು ಆಯೋಗದ ಅನುದಾನದ ಅಡಿಯಲ್ಲಿ ಮಂಜೂರು ಮಾಡಬೇಕೆಂದು ಕೋರಿದ್ದು, ನಗರಾಭಿವೃದ್ಧಿ ಇಲಾಖೆಯವರು ಸಂಸ್ಥೆಯವರ ಯೋಜನೆಯು PPP Model ನಲ್ಲಿದ್ದು, ಯೋಜನೆಯನ್ನು ಪರಿಶೀಲಿಸಲು ತಿಳಿಸಿರುತ್ತಾರೆ.

ಈ ಸಂಬಂಧ ಪಾಲಿಕೆಯು ಸದರಿ ಸಂಸ್ಥೆಗೆ ಈಗಾಗಲೇ ನೀಡಿರುವ ರೂ.1.75 ಕೋಟಿಗಳ ಮುಂಗಡ ಹಣವನ್ನು ಹಗುರ ಸಾಲವನ್ನಾಗಿ ದಿನಾಂಕ 30–06–2008ರಂದು ಮಂಜೂರು ಮಾಡಲಾಗಿರುತ್ತದೆ. (PLR rate of SBI + 0.5% service charges to the operator) ಸದರಿ ಸಾಲವನ್ನು ಪ್ರತಿ ತಿಂಗಳ ಟಿಪ್ಪಿಂಗ್ ಫೀ ಮೊತ್ತದಲ್ಲಿ ಶೇ.50 ರಷ್ಟು ಮೊತ್ತವನ್ನು ಸಾಲಕ್ಕೆ ಜಮಾ ಮಾಡಿಕೊಳ್ಳಲಾಗುತ್ತಿದೆ.

2011–12ನೇ ಸಾಲಿನಲ್ಲಿ 13ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನದಡಿಯಲ್ಲಿ ರೂ.47.95 ಕೋಟಿಗಳನ್ನು ಬಿಬಿಎಂಪಿ ಗೆ ನಿಗದಿಪಡಿಸಿದ್ದು, ನಿಬಂಧನೆಗಳ ಪ್ರಕಾರ ಘನತ್ಯಾಜ್ಯ ವಸ್ತು ನಿರ್ವಹಣೆಗೆ ಕನಿಷ್ಟ ಶೇ.25ರಷ್ಟು ಅನುದಾನವನ್ನು ನಿಗದಿಪಡಿಸಲಾಗಿದ್ದು, ರೂ.5.16 ಕೋಟಿ ಹಗುರ ಸಾಲವನ್ನು (Soft Loan) ಸದರಿ ಸಂಸ್ಥೆಗೆ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಮಂಜೂರು ಮಾಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 06–05–2011ಅನ್ನು ಒಪ್ಪಿದೆ.**

## *48]. ವಿಷಯದ ಸಂಖ್ಯೆ: ತೆಆಸ್ಥಾಸ/104/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ:ಎ3(1)/ಪಿ.ಆರ್/117/11–12 , ದಿನಾಂಕ : 06–06–2011ರಲ್ಲಿ ವಿವರಿಸಿರುವಂತೆ, ಶ್ರೀ.ರಂಗಸ್ವಾಮಿ ಬಿನ್ ಲೇ॥ ಹುಚ್ಚಯ್ಯ ಇವರು ಮನವಿ ಸಲ್ಲಿಸಿ ತಾವು ಪರಿಶಿಷ್ಟ ಜಾತಿಗೆ ಸೇರಿದ್ದು, ಆರ್ಥಿಕವಾಗಿ ಸಂಕಷ್ಟದಲ್ಲಿದ್ದು, ನಿರುದ್ಯೋಗಿಯಾಗಿದ್ದು, ಜೀವನ ನಡೆಸಲು ತಂಬಾ ಕಷ್ಟಕರವಾಗಿರುವುದರಿಂದ ಸುಬೇದಾರ್ ಛತ್ರಂ ರಸ್ತೆಯ ಮೂವಿಲ್ಯಾಂಡ್ ಥಿಯೇಟರ್ ಮುಂಭಾಗ ಇರುವ ಪಾಲಿಕೆಯ 4X4 ಅಡಿಗಳ ಜಾಗದಲ್ಲಿ ಚರ್ಮ ಕುಟೀರವನ್ನು ನಡೆಸಲು ಸ್ಥಳವನ್ನು ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಲು ಕೋರಿರುತ್ತಾರೆ.

ಅರ್ಜಿದಾರರು ಪರಿಶಿಷ್ಟ ಜಾತಿಯವರಾಗಿದ್ದು ನಿರುದ್ಯೋಗಿಗಳಾಗಿರುವುದರಿಂದ ಈ ಪ್ರಕರಣದಲ್ಲಿ ಗುತ್ತಿಗೆ /ಬಾಡಿಗೆ ಮೊತ್ತವನ್ನು ಮಾಸಿಕ ರೂ.500/–ಗಳಿಗೆ ನಿಗಧಿಪಡಿಸಲು ಸದರಿ ಸ್ಥಳದಲ್ಲಿ ಲಿಡ್ಕರ್ ಚರ್ಮ ಕುಟೀರವನ್ನು ಮಾತ್ರ ಇಟ್ಟುಕೊಂಡು ವ್ಯಾಪಾರ ನಡೆಸಲು ಶ್ರೀ.ರಂಗಸ್ವಾಮಿಯವರಿಗೆ ಮುಂದಿನ 11 ತಿಂಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಆಯುಕ್ತರ ಅನುಮೋದನೆ ಪಡೆದು ನೀಡಬಹುದು ಎಂದು ಉಪ ಆಯುಕ್ತರು (ಪಶ್ಚಿಮ) ರವರು ತಮ್ಮ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ದಿನಾಂಕ:06–04–2011 ರಂದು ಸಹಾಯಕ ಆಯುಕ್ತರು (ಆಸ್ತಿಗಳು) ರವರು ಪ್ರಸ್ತುತ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿದ್ದು, ನಿಯಮಾನುಸಾರ ಷರತ್ತುಗಳನ್ನು ವಿಧಿಸಿ ಅರ್ಜಿದಾರನಿಗೆ ಗುತ್ತಿಗೆಗೆ ನೀಡಬಹುದೆಂದು ತಿಳಿಸಿರುತ್ತಾರೆ.

ದಿನಾಂಕ:01–03–2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ಸರ್ಕಾರದ ಮಾರ್ಗಸೂಚಿಯ ದಿನಾಂಕ:17–04–2007 ರಂತೆ ವಾಣಿಜ್ಯಕ್ಕೆ ಚದರ ಅಡಿ ಒಂದಕ್ಕೆ ರೂ.5000/–ಗಳಾಗಿದ್ದು ಇದಕ್ಕೆ ಶೇ:40ರಷ್ಟು ಹೆಚ್ಚಿಸಿದಾಗ 5000X 2000=.7000/– ಗಳಾಗಿದ್ದು, ಅರ್ಜಿದಾರರಿಗೆ ನೀಡಲು ಉದ್ದೇಶಿಸಿರುವ ಸ್ವತ್ತಿನ ಅಳತೆ 4X4=16 ಚದರ ಅಡಿ ಒಂದಕ್ಕೆ 7000X16=1,12,000/– ರೂ ಗಳಾಗುತ್ತದೆ. ಶೇ 10% ರಂತೆ ಪರಿಗಣಿಸಲಾಗಿ ವಾರ್ಷಿಕ ಗುತ್ತಿಗೆ ಹಣವು 11,200/– ರೂ.ಗಳಾಗುತ್ತದೆ. ಅಂದರೆ ಮಾಸಿಕ ಗುತ್ತಿಗೆ ಹಣವು ರೂ.933/– ಗಳಾಗುತ್ತದೆ.

ಮೇಲಿನ ವಿವರಗಳ ಹಿನ್ನೆಲೆಯಲ್ಲಿ ಶ್ರೀ.ರಂಗಸ್ವಾಮಿರವರಿಗೆ ಕರಾರು ಪತ್ರ ನೊಂದಾಯಿಸುವ ದಿನಾಂಕದಿಂದ 3 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಬಗ್ಗೆ ಸೂಕ್ತ ತೀರ್ಮಾನ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ : 06–06–2011ರ ಟಿಪ್ಪಣಿಯನ್ನು ಒಪ್ಪುತ್ತಾ, ಮಾಸಿಕ ರೂ.500/– (ಐದು ನೂರು) ಗಳಿಗೆ ಗುತ್ತಿಗೆ ಹಣ ನಿಗಧಿಪಡಿಸಿ ಮೂರು ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.**

## *49]. ವಿಷಯದ ಸಂಖ್ಯೆ: ತೆಆಸ್ಥಾಸ/105/2011–12*

ಆಯುಕ್ತರ ಟಿಪ್ಪಣಿ ದಿನಾಂಕ 11–06–2011ರಲ್ಲಿ ವಿವರಿಸಿರುವಂತೆ, ಕುಮಾರಿ ಶೋಭಾ ಕರಂದ್ಲಾಜೆ, ಮಾನ್ಯ ಇಂಧನ ಸಚಿವರು ರವರು ಶ್ರೀಮತಿ ವೀಣಾ ನಾಗರಾಜ್ ರವರು ವಾರ್ಡ್ ನಂ.198 ರವರ ಪತ್ರ ದಿನಾಂಕ 30–12–2010ರ ಮೇರೆಗೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೆಂಗೇರಿ ಉಪ ವಿಭಾಗದ ವಾರ್ಡ್ ನಂ.198 (ಹೆಮ್ಮಿಗೆಪುರ)ರ ವ್ಯಾಪ್ತಿಯಲ್ಲಿ ಬರುವ ಸುಮಾರು 70 ರಿಂದ 80 ಗ್ರಾಮಗಳು ಸೇರಿದ್ದು, ಈ ಗ್ರಾಮಗಳ ವ್ಯಾಪ್ತಿಯಲ್ಲಿ ಅಗತ್ಯವಿರುವ ಮೂಲಭೂತ ಸೌಕರ್ಯಗಳಾದ ಹೊಸದಾಗಿ ವಿದ್ಯುತ್ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು, ವಿದ್ಯುತ್ ಕಂಬಗಳನ್ನು ಅಳವಡಿಸುವುದು ಹಾಗೂ ಹೈಲೈಟ್ ಕಂಬಗಳನ್ನು ನಿರ್ಮಿಸುವುದು ಮತ್ತು ಹಳೆಯ ವಿದ್ಯುತ್ ಕಂಬಗಳನ್ನು ಅಳವಡಿಸುವುದು ಹಾಗೂ ಹೈಲೈಟ್ ಕಂಬ ಮತ್ತು ಸೆಟ್‌ಗಳನ್ನು ರಿಪೇರಿ ಮಾಡಿಸುವ ಸಂಬಂಧ ಹೆಚ್ಚಿನ ಅನುದಾನವನ್ನು ಮಂಜೂರು ಮಾಡಿಸಿಕೊಡುವಂತೆ ಕೋರಿರುತ್ತಾರೆ. ಮಾನ್ಯ

ಸದಸ್ಯೆ ರವರ ಮನವಿಯನ್ನು ಅದ್ಯತೆಯ ಮೇರೆಗೆ ಪರಿಗಣಿಸಿ ಇವರ ವಾರ್ಡ್ ವ್ಯಾಪ್ತಿಯಲ್ಲಿ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಸೂಕ್ತ ಕ್ರಮಕೈಗೊಳ್ಳುವಂತೆ ಈ ಕೆಳಕಂಡ ಕಾಮಗಾರಿಗಳನ್ನು ಸೂಚಿಸಿರುತ್ತಾರೆ.

| ಕ್ರ. ಸಂ. | ಕಾಮಗಾರಿ ಹೆಸರು | ಅಂದಾಜು ಮೊತ್ತ (ಲಕ್ಷಗಳಲ್ಲಿ) |
|---|---|---|
| 1 | Integrated development of Street Lighting system at Kanakapura Main Road in Ward No.198 | 15.00 |
| 2 | Integrated development of Street Lighting system at Talagattapura in Ward No.198 | 15.00 |
| 3 | Integrated development of Street Lighting system at Raghuvanahalli in Ward No.198 | 15.00 |
